ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ-157 Volume-157	ಬೆಂಗಳೂರು, ಶುಕ್ರವಾರ, 18, ಫೆಬ್ರವರಿ, 2022(ಮಾಘ, 29, ಶಕವರ್ಷ, ೧೯೪3) BENGALURU, FRIDAY, 18, FEBRUARY, 2022(MAGHA, 29, SHAKAVARSHA, 1943)	ಸಂಚಿಕೆ -33 Issue - 33

¨sÁUÀ-4J

gÁdåzÀ‹zÃÀiÀÄ«ÀÄUÀ¼ÀA ªÀiÁ¸ÀC¬ÀÄÄ«Ä ªÉ¸ÉÃ¯É¥À¹²Á®£Á ¸ÀÄwAiÀÄ ªÀÄ¼ÉÁUÀ¼À, gÁdåzÀ¢üAiÀiÁªÀÄ¼ÀÄÀªÀiÁDzsÉ±ÀÄUÀ¼À, PÉÃzÀæªÀiÁgÁdåzÀ±Á¸ÀPÀªÀÄgÉÃgÁdå ¸ÀPÁðgÀÄ

ºÉgÀ¹zÀ¸ÁªÀiÁ£ÀåÀ±Á¸À£ÀzÀ¤AiÀiÁªÀÄ¼ÀªÀÄ gÁeÁåUÀ¼ÀªÉÃgÉÃgÁd¥Á®gÀªÀÄrzÀ ¤AiÀÄªÀÄUÀ¼À ºÁUÀÆ PÉÃAzÀæ ¸ÀPÁðgÀzÀ ¸ÁªÀiÁ£ÀåÀªÀÄrzÀ¤AiÀÄªÀÄUÀ¼À

ಕರ್ನಾಟಕ ಸರ್ಕಾರ

ಸಂಖ್ಯೆ: ಎಸ್‌ಡಬ್ಲ್ಯೂಡಿ 245 ಎಂಡಿಎಸ್ 2021

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ: 16-02-2022

ಅಧಿಸೂಚನೆ

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ನಿಯಮಗಳ II ನೇ ನಿಯಮದ (7) ನೇ ಖಂಡದ ಮತ್ತು ವಿನಿಯಮಗಳ ಮೇರೆಗೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಆಡಳಿತ ಮಂಡಳಿಯು, ಕರ್ನಾಟಕ ಸರ್ಕಾರದ ಪೂರ್ವಾನುಮೋದನೆಯೊಂದಿಗೆ ಮತ್ತು ಕರ್ನಾಟಕ ಸಿವಿಲ್ ಸೇವೆಗಳ ಅಧಿನಿಯಮ, 1978 (1990ರ ಕರ್ನಾಟಕ ಅಧಿನಿಯಮ ಸಂಖ್ಯೆ. 14)ರ ಪ್ರಕರಣ 8 ಅನ್ನು ಓದಿಕೊಂಡು ಪ್ರಕರಣ 3ರ ಉಪ-ಪ್ರಕರಣ

(1)ರ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಸದರಿ ಅಧಿನಿಯಮದ 3ನೇ ಪ್ರಕರಣದ (2)ನೇ ಉಪ-ಪ್ರಕರಣದ (ಎ) ರಲ್ಲಿ ಅಗತ್ಯಪಡಿಸಲಾಗಿರುವಂತೆ, ಈ ಕೆಳಕಂಡ ನಿಯಮಗಳ ಕರಡನ್ನು ಅಧಿಸೂಚನೆ ಸಂಖ್ಯೆ ಸಕಇ 245 ಮೊದೇಶಾ 2021 ದಿನಾಂಕ:19.08.2021ರ ಮೂಲಕ ಹೊರಡಿಸಿ ವಿಶೇಷ ಕರ್ನಾಟಕ ರಾಜ್ಯ ಪತ್ರದ ಭಾಗ- IV-A ರಲ್ಲಿ ದಿನಾಂಕ:24.08.2021 ರಂದು ಪ್ರಕಟಿಸಿ ಸದರಿ ನಿಯಮಗಳಿಂದ ಬಾಧಿತರಾಗಬಹುದಾದ ಎಲ್ಲ ವ್ಯಕ್ತಿಗಳಿಂದ ಆಕ್ಷೇಪಣೆ ಮತ್ತು ಸಲಹೆಗಳನ್ನು ಪ್ರಕಟಣೆಯ ದಿನಾಂಕದಿಂದ 15 ದಿನಗಳ ಒಳಗಾಗಿ ಸಲ್ಲಿಸಲು ಆಹ್ವಾನಿಸಲಾಗಿರುತ್ತದೆ. ಸದರಿ ಕರಡನ್ನು ದಿನಾಂಕ : 24.08.2021 ರಂದು ಸಾರ್ವಜನಿಕರಿಗೆ ದೊರೆಯುವಂತೆ ಮಾಡಲಾದ್ದರಿಂದ ಮತ್ತು ಈ ಸಂಬಂಧ ಸ್ವೀಕರಿಸಲಾದ ಆಕ್ಷೇಪಣೆ ಮತ್ತು ಸಲಹೆಗಳನ್ನು ಸರ್ಕಾರವು ಪರಿಗಣಿಸಿರುವುದರಿಂದ ಈಗ ಕರ್ನಾಟಕ ಸಿವಿಲ್ ಸೇವೆಗಳ ಅಧಿನಿಯಮ, 1978 (1990ರ ಕರ್ನಾಟಕ ಅಧಿನಿಯಮ ಸಂಖ್ಯೆ. 14)ರ ಪ್ರಕರಣ 8 ಅನ್ನು ಓದಿಕೊಂಡು ಪ್ರಕರಣ 3ರ ಉಪ-ಪ್ರಕರಣ (1)ರ ಸಹವಾಚನ ಕಲಂ 8ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಈ ಕೆಳಕಂಡ ನಿಯಮಗಳನ್ನು ರಚಿಸುತ್ತದೆ.

	ವಿನಿಯಮಗಳು	
1	**ಹೆಸರು ಮತ್ತು ಪ್ರಾರಂಭ:-**	
	1)	ಈ ವಿನಿಯಮಗಳನ್ನು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ (ವೃಂದ ಮತ್ತು ನೇಮಕಾತಿ ವಿನಿಯಮಗಳು (ತಿದ್ದುಪಡಿ), 2021 ಎಂದು ಕರೆಯತಕ್ಕದ್ದು.
	2)	ಇವುಗಳು, ಕರ್ನಾಟಕ ಸಂಘಗಳ ನೋಂದಣಿಗಳ ಅಧಿನಿಯಮ, 1960 (1960ರ ಕರ್ನಾಟಕ ಅಧಿನಿಯಮ 17)ರ 10ನೇ ಪ್ರಕರಣದ (2)ನೇ ಉಪ-ಪ್ರಕರಣದ ಮೇರೆಗೆ ಈ ವಿನಿಯಮಗಳ ನೋಂದಣಿಯ ದಿನಾಂಕದಿಂದ ಜಾರಿಗೆ ಬರತಕ್ಕದ್ದು.
	ಪರಿಭಾಷೆಗಳು:-	
2	1)	ಈ ವಿನಿಯಮಗಳಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು:-
	ಎ)	"ನೇಮಕಾತಿ ಪ್ರಾಧಿಕಾರ" ಎಂದರೆ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಕಾರ್ಯನಿರ್ವಾಹಕ ನಿರ್ದೇಶಕರು;
	ಬಿ)	"ನೇರ ನೇಮಕಾತಿ" ಎಂದರೆ ಸೇವೆಯ ಅಥವಾ ಹುದ್ದೆಯ ಯಾವುದೇ ಪ್ರವರ್ಗಕ್ಕೆ ಸಂಬಂಧಿಸಿದಂತೆ, ಯಾವುದೇ ರಾಜ್ಯ ಸಿವಿಲ್ ಸೇವೆ ಅಥವಾ ನಿಗಮ ಅಥವಾ ನಿಕಾಯದಿಂದ ನೀಡುವ ಬಡ್ತಿ ಅಥವಾ ನಿಯೋಜನೆಯನ್ನು ಹೊರತುಪಡಿಸಿದ ನೇಮಕಾತಿಯನ್ನು ಒಳಗೊಳ್ಳುತ್ತದೆ;

	ಸಿ)	“ನೌಕರ” ಎಂದರೆ ಈ ವಿನಿಯಮಗಳ ಅನುಸಾರವಾಗಿ ನೇಮಕವಾದ ಸಂಘದ ನೌಕರ;
	ಡಿ)	“ಆಡಳಿತ ಮಂಡಳಿ” ಎಂದರೆ ಸಂಘದ ಉಪವಿಧಿಯ ಅನುಸಾರ ರಚಿಸಲಾದ ಸಂಘದ ಆಡಳಿತ ಮಂಡಳಿ;
	ಇ)	“ಅಧಿಕಾರಿ” ಎಂದರೆ ಸಂಘದ ಅಧಿಕಾರಿ;
	ಎಫ್)	“ಇತರೆ ಹಿಂದುಳಿದ ವರ್ಗಗಳು” ಎಂದರೆ ಕರ್ನಾಟಕ ಸರ್ಕಾರವು ಹಾಗೆ ಅಧಿಸೂಚಿಸಲಾದ ವರ್ಗಗಳು ಅಥವಾ ಪ್ರವರ್ಗಗಳಿಗೆ ಸೇರಿದ ವ್ಯಕ್ತಿಗಳು;
	ಜಿ)	“ಬಡ್ತಿ” ಎಂದರೆ ಸಂಘದ ಸೇವೆಯ ಕೆಳದರ್ಜೆಯ ಹುದ್ದೆಯಿಂದ ಮೇಲ್ದರ್ಜೆಯ ಹುದ್ದೆಗೆ ಅಥವಾ ಸೇವೆಯ ಉನ್ನತ ದರ್ಜೆಗೆ ನೇಮಕವಾಗುವುದು;
	ಎಚ್)	“ನೇಮಕಾತಿ ಸಮಿತಿ” ಎಂದರೆ ನೇರ ನೇಮಕಾತಿ ಮಾಡುವ ಉದ್ದೇಶಕ್ಕಾಗಿ ಆಡಳಿತ ಮಂಡಳಿಯಿಂದ ನೇಮಕವಾದ ಪ್ರಾಧಿಕಾರ;
	ಐ)	“ವಸತಿ ಶಾಲೆ” ಎಂದರೆ ಸಂಘದ ಆಡಳಿತ್ಮಾಕ ಅಧಿಕಾರ ವ್ಯಾಪ್ತಿಯ ಅಡಿಯಲ್ಲಿ ಬರುವ ಪರಿಶಿಷ್ಟಜಾತಿ/ಪರಿಶಿಷ್ಟಪಂಗಡಗಳು/ಹಿಂದುಳಿದ ವರ್ಗಗಳ ಮತ್ತು ಇತರ ವಿದ್ಯಾರ್ಥಿಗಳಿಗೆ ಕಾಲಕಾಲಕ್ಕೆ ಕರ್ನಾಟಕ ಸರ್ಕಾರದಿಂದ ಸ್ಥಾಪಿತವಾದ ವಸತಿ ಶಾಲೆ;
	ಜೆ)	**“ಪರಿಶಿಷ್ಟಜಾತಿ”** ಮತ್ತು “ಪರಿಶಿಷ್ಟ ಪಂಗಡಗಳು”, ಭಾರತ ಸಂವಿಧಾನದ 341 ಮತ್ತು 342ನೇ ಅನುಚ್ಛೇದದ ಮೇರೆಗೆ ರಚಿಸಲಾದ ಸಂವಿಧಾನದ (ಪರಿಶಿಷ್ಟ ಜಾತಿಗಳು/ ಪರಿಶಿಷ್ಟ ಪಂಗಡಗಳು) ಆದೇಶ, 1950ರಲ್ಲಿ ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳಿಗೆ ನೀಡಿರುವ ಉಲ್ಲೇಖದ ಅರ್ಥವನ್ನೇ ಹೊಂದಿರತಕ್ಕದ್ದು.
	ಕೆ)	“ಆಯ್ಕೆ” ಎಂದರೆ ಆಡಳಿತ ಮಂಡಳಿಯ ಮೂಲಕ ನೇಮಕಾತಿಯ ಉದ್ದೇಶಕ್ಕಾಗಿ ನೇಮಕಾತಿ ಸಮಿತಿಯಿಂದ ಈ ವಿನಿಯಮಗಳ ಉಪಬಂಧಗಳ ಅನುಸಾರವಾಗಿ ಆದ ಆಯ್ಕೆ;
	(ಎಲ್)	“ಸಂಘ” ಎಂದರೆ, ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ, 1960ರ ಮೇರೆಗೆ ನೋಂದಾಯಿತವಾದ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ;
	(2) ಈ ನಿಯಮಗಳಲ್ಲಿ ಬಳಸಿದ ಆದರೆ ಪರಿಭಾಷಿಸಿಲ್ಲದ ಪದಗಳು, ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ, 1960ರಲ್ಲಿ ಅಥವಾ ಸಂದರ್ಭಾನುಸಾರ, ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ಅಧಿನಿಯಮ, 1978 (1990ರ ಕರ್ನಾಟಕ ಅಧಿನಿಯಮ 14)ರ ಮೇರೆಗೆ ರಚಿಸಿದ ಅಥವಾ ರಚಿಸಲಾಗಿದೆ ಎಂದು ಭಾವಿಸಿದ ನಿಯಮಗಳಲ್ಲಿ ಅವುಗಳಿಗೆ ನೀಡಲಾದ ಅರ್ಥವನ್ನೇ ಹೊಂದಿರತಕ್ಕದ್ದು.	

3 **ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ನೌಕರರುಗಳಿಗೆ ಇತರೆ ನಿಯಮಗಳ ಅನ್ವಯ:-** ಈ ಕೆಳಕಂಡ ನಿಯಮಗಳ ಉಪಬಂಧಗಳು ಈ ವಿನಿಯಮಗಳಲ್ಲಿ ಅನ್ಯಥಾ ಉಪಬಂಧಿಸಲಾದುದನ್ನುಳಿದು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ನೌಕರರುಗಳಿಗೆ ಯಥೋಚಿತ ವ್ಯತ್ಯಾಸಗಳೊಂದಿಗೆ ಅನ್ವಯವಾಗತಕ್ಕದ್ದು, ಎಂದರೆ:-

(1)	ಪಿಂಚಣಿ ನಿಯಮಗಳ ಹೊರತಾಗಿ ಕರ್ನಾಟಕ ಸಿವಿಲ್ ಸೇವೆಗಳ ನಿಯಮಗಳು
(2)	ಕರ್ನಾಟಕ ಸರ್ಕಾರಿ ನೌಕರರ (ಜೇಷ್ಠತಾ) ನಿಯಮಗಳು, 1957
(3)	ಕರ್ನಾಟಕ ಸಿವಿಲ್ ಸೇವೆಗಳ (ನಡತೆ) ನಿಯಮಗಳು,1960
(4)	ಕರ್ನಾಟಕ ಸಿವಿಲ್ ಸೇವೆಗಳ (ಸಾಮಾನ್ಯ ನೇಮಕಾತಿ) ನಿಯಮಗಳು, 1977 ಮತ್ತು ಕರ್ನಾಟಕ ಸಿವಿಲ್ ಸೇವೆಗಳ (ಪ್ರೊಬೇಷನ್) ನಿಯಮಗಳು, 1977
(5)	ಅನುಸೂಚಿ-III ರಲ್ಲಿ ನಿರ್ಧಿಷ್ಟಪಡಿಸಿದ ಮಾರ್ಪಾಡುಗಳಿಗೊಳಪಟ್ಟು, ಕರ್ನಾಟಕ ಸಿವಿಲ್ ಸೇವೆಗಳ (ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು) ನಿಯಮಗಳು, 1957
(6)	ಕರ್ನಾಟಕ ಸಿವಿಲ್ ಸೇವೆಗಳ (ಸೇವೆ ಮತ್ತು ಕನ್ನಡ ಭಾಷಾಪರೀಕ್ಷೆಗಳು) ನಿಯಮಗಳು, 1974
(7)	ಸರ್ಕಾರಿ ನೌಕರರುಗಳ ಸೇವಾ ಷರತ್ತುಗಳಿಗೆ ಅನ್ವಯವಾಗುವ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ಅಧಿನಿಯಮ, 1978 (1990ರ ಕರ್ನಾಟಕ ಅಧಿನಿಯಮ14) ರ ಮೇರೆಗೆ ರಚಿಸಿದ ಅಥವಾ ಹಾಗೆಂದು ಭಾವಿಸಲಾದ ಇತರೆ ಎಲ್ಲಾ ನಿಯಮಗಳು.

4 **ಹುದ್ದೆಗಳ ಪ್ರವರ್ಗ, ನೇಮಕಾತಿ ವಿಧಾನ ಮತ್ತು ಕನಿಷ್ಠ ವಿದ್ಯಾರ್ಹತೆ:-** ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಸಂಸ್ಥೆಯು, ಅನುಸೂಚಿ-Iರ ಅಂಕಣ (2)ರಲ್ಲಿ ನಿರ್ದಿಷ್ಟಪಡಿಸಿದ ಹುದ್ದೆಗಳ ಪ್ರವರ್ಗವನ್ನು, ವೇತನಶ್ರೇಣಿಯನ್ನು ಒಳಗೊಂಡಿರತಕ್ಕದ್ದು:-

(1) ಅದರ ಸಿಬ್ಬಂದಿ ಸಂಖ್ಯೆ, ನೇಮಕಾತಿ ವಿಧಾನ ಮತ್ತು ಕನಿಷ್ಠ ವಿದ್ಯಾರ್ಹತೆಯು ಅನುಸೂಚಿಯ ಅಂಕಣ (3), (4) ಮತ್ತು (5) ರಲ್ಲಿ ನಿರ್ದಿಷ್ಟಪಡಿಸಿರುವಂತೆ ಇರತಕ್ಕದ್ದು.

5	**ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ನೌಕರರುಗಳು ಕೆಲವು ಸೇವಾ ಪರೀಕ್ಷೆಗಳಲ್ಲಿ ಉತ್ತೀರ್ಣರಾಗುವುದು;**	
	(1)	ನೌಕರನು, ಕರ್ನಾಟಕ ಸಿವಿಲ್ ಸೇವೆಗಳು (ಸೇವೆ ಮತ್ತು ಕನ್ನಡ ಭಾಷಾ ಪರೀಕ್ಷೆಗಳು) ನಿಯಮಗಳು, 1974 ರ ಮೇರೆಗೆ ಉಪಬಂಧಿಸಿದ ಸಮಯದೊಳಗೆ ಅಥವಾ ಈ ವಿನಿಯಮಗಳ ಪ್ರಾರಂಭದ ದಿನಾಂಕದಿಂದ ಎರಡು ವರ್ಷಗಳೊಳಗೆ ಇದರಲ್ಲಿ ಯಾವುದೂ ಅನಂತರವೋ ಅದು, ಅನುಸೂಚಿ-IVರಲ್ಲಿ ನಿರ್ದಿಷ್ಟಪಡಿಸಿದಂತೆ ಕನ್ನಡ ಭಾಷಾ ಪರೀಕ್ಷೆಯಲ್ಲಿ ಮತ್ತು ಇತರೆ ಕೆಲವು ಸೇವಾ ಪರೀಕ್ಷೆಗಳಲ್ಲಿ ಉತ್ತೀರ್ಣನಾಗತಕ್ಕದ್ದು;
	(2)	ನೌಕರನನ್ನು ಆ ಹುದ್ದೆಯಲ್ಲಿ ನಿಗಧಿಪಡಿಸಿದ ಸೇವಾ ಪರೀಕ್ಷೆಗಳಲ್ಲಿ ಉತ್ತೀರ್ಣನಾದಾಗ ಮಾತ್ರ ಅವನ ಹುದ್ದೆಯಲ್ಲಿ ಖಾಯಂಗೊಳಿಸತಕ್ಕದ್ದು ಅಥವಾ ಕಾಲಿಕಶ್ರೇಣಿ ವೇತನದಲ್ಲಿ ಅವನು ವೇತನ ಬಡ್ತಿಯನ್ನು ಪಡೆಯತಕ್ಕದ್ದು.
	(3)	ಯಾವುದೇ ಉನ್ನತ ಹುದ್ದೆಯ ಬಡ್ತಿಗಾಗಿ, ಅಭ್ಯರ್ಥಿಯು ಈ ನಿಯಮಗಳಲ್ಲಿ ನಿಗಧಿಪಡಿಸಿದ ಅಂಥ ಉನ್ನತ ಹುದ್ದೆಗಾಗಿನ ಸೇವಾ ಪರೀಕ್ಷೆಗಳಲ್ಲಿ ಉತ್ತೀರ್ಣನಾಗತಕ್ಕದ್ದು.
6	**ಶಿಸ್ತು ವ್ಯವಹರಣೆಗಳನ್ನು ಹೂಡಲು ಮತ್ತು ದಂಡಗಳನ್ನು ವಿಧಿಸಲು ಅಧಿಕಾರ ಮತ್ತು ಅಪೀಲು ಉಪಬಂಧಗಳು:**	
	(1)	ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ನೌಕರನ ವಿರುದ್ಧವಾಗಿ ಶಿಸ್ತು ವ್ಯವಹರಣೆಗಳನ್ನು ಕರ್ನಾಟಕ ಸಿವಿಲ್ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು) ನಿಯಮಗಳು, 1957ರ ಅನುಸಾರವಾಗಿ ನೇಮಕಾತಿ ಪ್ರಾಧಿಕಾರದಿಂದ ಹೂಡಬಹುದು. ನೇಮಕಾತಿ ಪ್ರಾಧಿಕಾರ, ಶಿಸ್ತು ಪ್ರಾಧಿಕಾರವು ವಿಧಿಸುವ (ವಿವಿಧ ರೀತಿಯ ದಂಡಗಳು) ಮತ್ತು ಅಪೀಲು ಈ ವಿನಿಯಮಗಳಿಗೆ ಸೇರಿಸಲಾದ ಅನುಸೂಚಿ-III ರಲ್ಲಿ ನಿರ್ದಿಷ್ಟಪಡಿಸಿದಂತೆ ಇರತಕ್ಕದ್ದು.
7	**ನಿವೃತ್ತಿ ಪ್ರಯೋಜನಗಳು:-** ಸಂಘದ ನೌಕರರುಗಳು ನಿವೃತ್ತಿ ನಂತರ ಈ ಕೆಳಕಂಡ ಪ್ರಯೋಜನಗಳಿಗೆ ಅರ್ಹರಾಗಿರುತ್ತಾರೆ.	
		a) ಸಾಮೂಹಿಕ ಉಪದಾನ b) ಸಾಮೂಹಿಕ ವಿಮೆ c) ನೂತನ ಪಿಂಚಣಿ ಯೋಜನೆ d) ಗಳಿಕೆ ರಜೆ ನಗದೀಕರಣ ಈ ನಿರ್ಣಯಗಳಲ್ಲಿ ಏನೇ ಒಳಗೊಂಡಿದ್ದರೂ, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ನೌಕರನು ಪಿಂಚಣಿಗೆ ಅರ್ಹನಾಗಿರತಕ್ಕದ್ದಲ್ಲ.

ಅನುಸೂಚಿ-I

ಈ ಕೆಳಕಂಡ ಅನುಸೂಚಿಯ ಅಂಕಣ (2)ರಲ್ಲಿ ನಿರ್ದಿಷ್ಟಪಡಿಸಿದ ಹುದ್ದೆಯ ಪ್ರತಿಯೊಂದು ಪ್ರವರ್ಗದ ಸಂಬಂಧದಲ್ಲಿ ವೃಂದ ಮತ್ತು ನೇಮಕಾತಿ ವಿನಿಯಮಗಳು

ಕ್ರಮ ಸಂಖ್ಯೆ	ಹುದ್ದೆಗಳ ಪ್ರವರ್ಗ		ಹುದ್ದೆಗಳ ಸಂಖ್ಯೆ		ನೇಮಕಾತಿ ವಿಧಾನ	ಕನಿಷ್ಠ ವಿದ್ಯಾರ್ಹತೆ
	ಹುದ್ದೆ	ವೇತನ ಶ್ರೇಣಿ (ರೂ.ಗಳಲ್ಲಿ)	ಖಾಯಂ	ತಾತ್ಕಾಲಿಕ		
1	2	3	4	5	6	7
1	ಕಾರ್ಯನಿರ್ವಾಹಕ ನಿರ್ದೇಶಕರು	-	1	-	ಭಾರತೀಯ ಆಡಳಿತ ಸೇವೆಯ ವೃಂದದಲ್ಲಿನ ಅಥವಾ ಕರ್ನಾಟಕ ಆಡಳಿತ ಸೇವೆ (ಗರಿಷ್ಠ ವೇತನ ಶ್ರೇಣಿ) ವೃಂದದಲ್ಲಿನ ಅಧಿಕಾರಿಯನ್ನು ಪ್ರತಿನಿಯೋಜಿಸುವ ಮೂಲಕ.	-
2	ಜಂಟಿ ನಿರ್ದೇಶಕರು (ಹೆಚ್ಆರ್‌ಡಿ /ಆಡಳಿತ)	(ರೂ. 74400-109600)	1	-	ಜಂಟಿ ನಿರ್ದೇಶಕರ ವೃಂದದಲ್ಲಿನ ಸಮಾಜ ಕಲ್ಯಾಣ ಅಥವಾ ಹಿಂದುಳಿದ ವರ್ಗಗಳ ಇಲಾಖೆಯಿಂದ ಅದಕ್ಕೆ ತತ್ಸಮಾನವಾದ ವೃಂದದಲ್ಲಿನ ಅಧಿಕಾರಿಯನ್ನು ಪ್ರತಿನಿಯೋಜಿಸುವ ಮೂಲಕ.	-

3	ಜಂಟಿ ನಿರ್ದೇಶಕರು (ಶಿಕ್ಷಣ ಮತ್ತು ತರಬೇತಿ)	(ರೂ. 74400-109600)	1	-	ಜಂಟಿ ನಿರ್ದೇಶಕರ ವೃಂದದಲ್ಲಿನ ಅಥವಾ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯಿಂದ ಅದಕ್ಕೆ ತತ್ಸಮಾನವಾದ ವೃಂದದಲ್ಲಿನ ಅಧಿಕಾರಿಯನ್ನು ಪ್ರತಿನಿಯೋಜಿಸುವ ಮೂಲಕ.	-
4	ಸೂಪರಿಂಟೆಂಡಂಟ್ ಇಂಜಿನಿಯರ್	(ರೂ. 74400-109600)	1	-	ಸೂಪರಿಂಟೆಂಡಂಟ್ ಇಂಜಿನಿಯರ್ ವೃಂದದಲ್ಲಿನ ಅಥವಾ ಅದಕ್ಕೆ ತತ್ಸಮಾನವಾದ ವೃಂದದಲ್ಲಿನ ಪಿಡಬ್ಲ್ಯೂಡಿ ಇಲಾಖೆಯಲ್ಲಿನ ಅಥವಾ ಇತರೆ ಯಾವುದೇ ಇಲಾಖೆಯ ಅಧಿಕಾರಿಯನ್ನು ಪ್ರತಿನಿಯೋಜಿಸುವ ಮೂಲಕ.	-
5	ಮುಖ್ಯ ಲೆಕ್ಕಾಧಿಕಾರಿ	(ರೂ. 74400-109600)	1	-	ರಾಜ್ಯ ಲೆಕ್ಕಪತ್ರ ಇಲಾಖೆಯಿಂದ ಜಂಟಿ ನಿರ್ದೇಶಕರು ವೃಂದದಲ್ಲಿನ ಅಧಿಕಾರಿಯನ್ನು ಪ್ರತಿನಿಯೋಜಿಸುವ ಮೂಲಕ.	-
6	ಉಪ ನಿರ್ದೇಶಕರು (ಹೆಚ್‌ಆರ್‌ಡಿ/ಆಡಳಿತ)	(ರೂ. 67550-104600)	1	-	ಉಪನಿರ್ದೇಶಕರ ವೃಂದದಲ್ಲಿನ ಅಥವಾ ಸಮಾಜ ಕಲ್ಯಾಣ ಇಲಾಖೆ ಅಥವಾ ಹಿಂದುಳಿದ ವರ್ಗಗಳ ಇಲಾಖೆಯಿಂದ ಅದಕ್ಕೆ ತತ್ಸಮಾನವಾದ ವೃಂದದಲ್ಲಿನ ಅಧಿಕಾರಿಯನ್ನು ಪ್ರತಿನಿಯೋಜಿಸುವ ಮೂಲಕ.	-

7	ಉಪ ನಿರ್ದೇಶಕರು (ಶಿಕ್ಷಣ ಮತ್ತು ತರಬೇತಿ)	(ರೂ. 67550-104600)	1	-	ಉಪ ನಿರ್ದೇಶಕರ ವೃಂದದಲ್ಲಿನ ಅಥವಾ ಶಿಕ್ಷಣ ಇಲಾಖೆಯಿಂದ ಅದಕ್ಕೆ ತತ್ಸಮಾನವಾದ ವೃಂದದಲ್ಲಿನ ಅಧಿಕಾರಿಯನ್ನು ಪ್ರತಿನಿಯೋಜಿಸುವ ಮೂಲಕ.	-
8	ಕಾರ್ಯಪಾಲಕ ಇಂಜಿನಿಯರ್ (ಸಿವಿಲ್)	(ರೂ. 56800-99600)	2	-	ಲೋಕೋಪಯೋಗಿ ಇಲಾಖೆಯಿಂದ ಕಾರ್ಯಪಾಲಕ ಇಂಜಿನಿಯರ್ (ಸಿವಿಲ್) ವೃಂದದಲ್ಲಿನ ಅಥವಾ ಇತರೆ ಯಾವುದೇ ಸರ್ಕಾರಿ ಇಲಾಖೆಯಿಂದ ಅಥವಾ ಸರ್ಕಾರಿ ವಲಯ ಘಟಕಗಳಲ್ಲಿನ ಅಧಿಕಾರಿಯನ್ನು ಪ್ರತಿನಿಯೋಜಿಸುವ ಮೂಲಕ.	-
9	ಕಾರ್ಯಪಾಲಕ ಇಂಜಿನಿಯರ್ (ಎಲೆಕ್ಟ್ರಿಕಲ್)	(ರೂ. 56800-99600)	1	-	ಲೋಕೋಪಯೋಗಿ ಇಲಾಖೆಯಿಂದ ಕಾರ್ಯಪಾಲಕ ಇಂಜಿನಿಯರ್ (ಎಲೆಕ್ಟ್ರಿಕಲ್) ವೃಂದದಲ್ಲಿನ ಅಥವಾ ಇತರೆ ಯಾವುದೇ ಸರ್ಕಾರಿ ಇಲಾಖೆಯಿಂದ ಅಥವಾ ಸರ್ಕಾರಿ ವಲಯದ ಘಟಕಗಳಲ್ಲಿನ ಅಧಿಕಾರಿಯನ್ನು ಪ್ರತಿನಿಯೋಜಿಸುವ ಮೂಲಕ.	-

10	ಸಹಾಯಕ ನಿರ್ದೇಶಕರು (ಆಡಳಿತ/ಹೆಚ್ ಆರ್ ಡಿ)	(ರೂ. 52650-97100)	1	-	ಸಹಾಯಕ ನಿರ್ದೇಶಕರು ದರ್ಜೆ-Iರ ವೃಂದದಲ್ಲಿನ ಅಥವಾ ಸಮಾಜ ಕಲ್ಯಾಣ ಇಲಾಖೆಯ ಅಥವಾ ಹಿಂದುಳಿದ ವರ್ಗಗಳ ಇಲಾಖೆಯ ಅಥವಾ ಬುಡಕಟ್ಟು ಕಲ್ಯಾಣ ಇಲಾಖೆ ವೃಂದದಲ್ಲಿನ ಅದಕ್ಕೆ ತತ್ಸಮಾನವಾದ ವೃಂದದಲ್ಲಿನ ಅಧಿಕಾರಿಯನ್ನು ಪ್ರತಿನಿಯೋಜಿಸುವ ಮೂಲಕ.	-
11	ಸಹಾಯಕ ನಿರ್ದೇಶಕರು (ಶಿಕ್ಷಣ)	(ರೂ. 52650-97100)	1	-	ಸಹಾಯಕ ನಿರ್ದೇಶಕರು ದರ್ಜೆ-Iರ ವೃಂದದಲ್ಲಿನ ಅಥವಾ ಸಮಾಜ ಕಲ್ಯಾಣ ಇಲಾಖೆ ಅಥವಾ ಹಿಂದುಳಿದ ವರ್ಗಗಳ ಇಲಾಖೆ ಅಥವಾ ಬುಡಕಟ್ಟು ಕಲ್ಯಾಣ ಇಲಾಖೆ ವೃಂದದಲ್ಲಿನ ಅದಕ್ಕೆ ತತ್ಸಮಾನವಾದ ವೃಂದದಲ್ಲಿನ ಅಧಿಕಾರಿಯನ್ನು ಪ್ರತಿನಿಯೋಜಿಸುವ ಮೂಲಕ.	-
12	ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ಸಿವಿಲ್)	(ರೂ. 52650-97100)	10	-	ಲೋಕೋಪಯೋಗಿ ಇಲಾಖೆಯ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ವೃಂದದಲ್ಲಿನ ಅಥವಾ ಇತರೆ ಯಾವುದೇ ಸರ್ಕಾರಿ ಇಲಾಖೆ ಅಥವಾ ವಲಯ ಘಟಕಗಳಲ್ಲಿನ ಅಧಿಕಾರಿಯನ್ನು ಪ್ರತಿನಿಯೋಜಿಸುವ ಮೂಲಕ.	-

13	ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ಎಲೆಕ್ಟ್ರಿಕಲ್)	(ರೂ. 52650-97100)	2	-	ಲೋಕೋಪಯೋಗಿ ಇಲಾಖೆಯ ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ಎಲೆಕ್ಟ್ರಿಕಲ್) ವೃಂದದಲ್ಲಿನ ಅಥವಾ ಇತರೆ ಯಾವುದೇ ಇಲಾಖೆಯ ಅಥವಾ ಸರ್ಕಾರಿ ವಲಯ ಘಟಕಗಳಲ್ಲಿನ ಅಧಿಕಾರಿಯನ್ನು ಪ್ರತಿನಿಯೋಜಿಸುವ ಮೂಲಕ.	-
14	ಸಹಾಯಕ ಇಂಜಿನಿಯರ್ (ಸಿವಿಲ್)	(ರೂ. 43100-83900)	10	-	ಲೋಕೋಪಯೋಗಿ ಇಲಾಖೆಯಿಂದ ಸಹಾಯಕ ಇಂಜಿನಿಯರ್ (ಸಿವಿಲ್) ವೃಂದದಲ್ಲಿನ ಅಥವಾ ಇತರೆ ಯಾವುದೇ ಇಲಾಖೆ ಅಥವಾ ಸರ್ಕಾರಿ ವಲಯ ಘಟಕಗಳ ಅಧಿಕಾರಿಯನ್ನು ಪ್ರತಿನಿಯೋಜಿಸುವ ಮೂಲಕ.	-
15	ಸಹಾಯಕ ಇಂಜಿನಿಯರ್ (ಎಲೆಕ್ಟ್ರಿಕಲ್)	(ರೂ. 43100-83900)	2	-	ಕರ್ನಾಟಕ ವಿದ್ಯುಚ್ಛಕ್ತಿ ಪ್ರಸರಣ ನಿಗಮ ನಿಯಮಿತದಿಂದ, ಸಹಾಯಕ ಇಂಜಿನಿಯರ್ (ಎಲೆಕ್ಟ್ರಿಕಲ್) ವೃಂದದಲ್ಲಿನ ಅಥವಾ ಇತರೆ ಯಾವುದೇ ಸರ್ಕಾರಿ ಇಲಾಖೆ/ಸರ್ಕಾರಿ ವಲಯ ಘಟಕಗಳ ಅಧಿಕಾರಿಯನ್ನು ಪ್ರತಿನಿಯೋಜಿಸುವ ಮೂಲಕ.	-

16	ಯೋಜನಾಧಿಕಾರಿ (ಕಾರ್ಯಕ್ರಮ ಅಧಿಕಾರಿ)	(ರೂ. 43100-83900)	3	-	ಸಹಾಯಕ ನಿರ್ದೇಶಕರು- II ಮತ್ತು ಅದಕ್ಕೆ ತತ್ಸಮಾನವಾದ ವೃಂದದಲ್ಲಿನ ಅಧಿಕಾರಿಯನ್ನು ಸಮಾಜ ಕಲ್ಯಾಣ ಇಲಾಖೆ/ ಬುಡಕಟ್ಟು ಕಲ್ಯಾಣ ಇಲಾಖೆ/ ಹಿಂದುಳಿದ ವರ್ಗಗಳ/ ಸಾರ್ವಜನಿಕ ಶಿಕ್ಷಣ ಇಲಾಖೆ ವೃಂದದಲ್ಲಿನ ಅಧಿಕಾರಿಯನ್ನು ಪ್ರತಿನಿಯೋಜಿಸುವ ಮೂಲಕ.	
17	ಲೆಕ್ಕ ಪರಿಶೋಧನಾಧಿಕಾರಿಗಳು (ಲೆಕ್ಕ ಪರಿಶೋಧಕರು)	(ರೂ. 37900-70850)	2	-	ರಾಜ್ಯ ಲೆಕ್ಕಪತ್ರ ಇಲಾಖೆಯಿಂದ ಅದಕ್ಕೆ ತತ್ಸಮಾನವಾದ ವೃಂದದಲ್ಲಿನ ಅಧಿಕಾರಿಯನ್ನು ಪ್ರತಿನಿಯೋಜಿಸುವ ಮೂಲಕ.	-

18	ಕಛೇರಿ ಅಧೀಕ್ಷಕರು	(ರೂ. 33450-62600)	3	-	ಜ್ಯೇಷ್ಠತೆಯ ಆಧಾರದ ಮೇಲೆ ಕನಿಷ್ಠ ಐದು ವರ್ಷಗಳ ಕಾರ್ಯಾನುಭವದೊಂದಿಗೆ 80% : 5% : 15% ರ ಅನುಪಾತದಲ್ಲಿ ಕ್ರಮವಾಗಿ ಪ್ರಥಮ ದರ್ಜೆ ಸಹಾಯಕ ಮತ್ತು ಕಂಪ್ಯೂಟರ್ ಆಪರೇಟರ್, ಶೀಘ್ರಲಿಪಿಗಾರರ ಮತ್ತು ವಸತಿ ಶಾಲೆಗಳ ನಿಲಯಪಾಲಕರ ವೃಂದದಿಂದ ಬಡ್ತಿ ಮೂಲಕ. ಅರ್ಹ ಶೀಘ್ರಲಿಪಿಗಾರ ಅಭ್ಯರ್ಥಿಯು ಲಭ್ಯವಿಲ್ಲದಿದ್ದಲ್ಲಿ, ಪ್ರಥಮ ದರ್ಜೆ ಸಹಾಯಕ ಮತ್ತು ಕಂಪ್ಯೂಟರ್ ಆಪರೇಟರ್ ವೃಂದದಿಂದ ಕಚೇರಿ ಅಧೀಕ್ಷಕ ವೃಂದಕ್ಕೆ 85% ರಷ್ಟು ಬಡ್ತಿ ಮೂಲಕ ತುಂಬಬೇಕು. ಆಯಾ ವೃಂದದಲ್ಲಿ ಸೇವೆಯ ಅವಧಿಯ ಆಧಾರದ ಮೇಲೆ ಜ್ಯೇಷ್ಠತೆಯನ್ನು ನಿರ್ಧರಿಸಬೇಕು.	-

19	ಜೂನಿಯರ್ ಇಂಜಿನಿಯರ್ (ಸಿವಿಲ್)	(ರೂ. 33450-62600)	12	-	ಕರ್ನಾಟಕ ಲೋಕೋಪಯೋಗಿ ಇಲಾಖೆಯಿಂದ ಕಿರಿಯ ಇಂಜಿನಿಯರ್ ವೃಂದದಲ್ಲಿನ (ಸಿವಿಲ್) ಅಥವಾ ಯಾವುದೇ ಇತರೆ ಸರ್ಕಾರಿ ಇಲಾಖೆ/ಸಾರ್ವಜನಿಕ ವಲಯ ಘಟಕಗಳ ಅಧಿಕಾರಿಯನ್ನು ಪ್ರತಿನಿಯೋಜಿಸುವ ಮೂಲಕ.	-
20	ಜೂನಿಯರ್ ಇಂಜಿನಿಯರ್ (ಎಲೆಕ್ಟ್ರಿಕಲ್)	(ರೂ. 33450-62600)	2	-	ಕರ್ನಾಟಕ ಲೋಕೋಪಯೋಗಿ ಇಲಾಖೆಯಿಂದ ಕಿರಿಯ ಇಂಜಿನಿಯರ್ ವೃಂದದಲ್ಲಿನ (ಎಲೆಕ್ಟ್ರಿಕಲ್) ಅಥವಾ ಯಾವುದೇ ಇತರೆ ಸರ್ಕಾರಿ ಇಲಾಖೆ/ಸಾರ್ವಜನಿಕ ವಲಯ ಘಟಕಗಳ ಅಧಿಕಾರಿಯನ್ನು ಪ್ರತಿನಿಯೋಜಿಸುವ ಮೂಲಕ.	-
21	ಶೀಘ್ರಲಿಪಿಗಾರರು	(ರೂ. 27650-52650)	1	-	ಅನುಸೂಚಿ-II ರಲ್ಲಿ ನಿರ್ದಿಷ್ಟಪಡಿಸಿದ ಪ್ರಕ್ರಿಯೆಯ ಅನುಸಾರವಾಗಿ ನೇರ ನೇಮಕಾತಿ ಮೂಲಕ	**ನೇರ ನೇಮಕಾತಿಗಾಗಿ:-** ಪಿಯುಸಿ ಪರೀಕ್ಷೆಯಲ್ಲಿ ಮತ್ತು ಕನ್ನಡ ಹಾಗೂ ಆಂಗ್ಲಭಾಷೆ ಎರಡರಲ್ಲೂ ಹಿರಿಯ ಶೀಘ್ರಲಿಪಿಯಲ್ಲಿ ಉತ್ತೀರ್ಣನಾಗಿರತಕ್ಕದ್ದು ಮತ್ತು ಕಂಪ್ಯೂಟರ್ ಕಾರ್ಯದಲ್ಲಿ ಜ್ಞಾನವುಳ್ಳವರಾಗಿದ್ದು ಕನ್ನಡ ಹಾಗೂ ಇಂಗ್ಲೀಷ್ ಭಾಷೆಗಳ ಸೀನಿಯರ್ ಟೈಪಿಂಗ್ ಆಗಿರಬೇಕು.

						ಅಥವಾ ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದ ಸಂಸ್ಥೆಯಲ್ಲಿ ಸೆಕ್ರೆಟರಿಯಲ್ ಪ್ರಾಕ್ಟೀಸ್‌ನ ಡಿಪ್ಲೊಮೊ ಪರೀಕ್ಷೆಯಲ್ಲಿ ಉತ್ತೀರ್ಣನಾಗಿರತಕ್ಕದ್ದು ಮತ್ತು ಕರ್ನಾಟಕ ಸರ್ಕಾರದ ಅಥವಾ ಸಂಘದಿಂದ ಮಾನ್ಯತೆ ಪಡೆದ ಸಂಸ್ಥೆಯಲ್ಲಿ ಆರು ತಿಂಗಳುಗಳ ಕೋರ್ಸ್‌ಗಿಂತ ಕಡಿಮೆಯಿರದಂತೆ ಕಂಪ್ಯೂಟರ್ ಕಾರ್ಯದಲ್ಲಿ ಜ್ಞಾನವುಳ್ಳವರಾಗಿದ್ದು ಕನ್ನಡ ಹಾಗೂ ಇಂಗ್ಲೀಷ್ ಭಾಷೆಗಳಲ್ಲಿ ಸೀನಿಯರ್ ಟೈಪಿಂಗ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡಗಳು ಹಾಗೂ ಇತರೆ ಹಿಂದುಳಿದ ವರ್ಗಗಳ ಪ್ರವರ್ಗ-Iಕ್ಕೆ ಸೇರಿದ ಅಭ್ಯರ್ಥಿಗಳು, ಶೇ. ಐವತ್ತಕ್ಕೆ ಕಡಿಮೆಯಿರದಂತೆ ಅಂಕಗಳನ್ನು

						ಪಡೆದಿರಬೇಕು ಮತ್ತು ಇತರೇ ಅಭ್ಯರ್ಥಿಗಳು ಶೇ. ಅರವತ್ತಷ್ಟು ಅಂಕಗಳನ್ನುಪಡೆದಿರತಕ್ಕದ್ದು
22	ದ್ವಿತಿಯ ದರ್ಜೆ ಸಹಾಯಕ ಮತ್ತು ಕಂಪ್ಯೂಟರ್ ಆಪರೇಟರ್	(ರೂ. 21400-42000)	7	-	ಅನುಸೂಚಿ-II ರಲ್ಲಿ ನಿರ್ದಿಷ್ಟಪಡಿಸಿದ ಪ್ರಕ್ರಿಯೆಯ ಅನುಸಾರವಾಗಿ ನೇರ ನೇಮಕಾತಿ ಮೂಲಕ.	**ನೇರ ನೇಮಕಾತಿಗಾಗಿ:** ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದ ಪದವಿ ಪೂರ್ವಕೋರ್ಸ್‌ನ ಪರೀಕ್ಷೆಯಲ್ಲಿ ಅಥವಾ ಅದಕ್ಕೆ ತತ್ಸಮಾನವಾದ ಪರೀಕ್ಷೆಯಲ್ಲಿ ಉತ್ತೀರ್ಣನಾಗಿರತಕ್ಕದ್ದು. ಕರ್ನಾಟಕ ಸರ್ಕಾರದ ಅಥವಾ ಸಂಘದಿಂದ ಮಾನ್ಯತೆ ಪಡೆದ ಆರು ತಿಂಗಳುಗಳ ಕಂಪ್ಯೂಟರ್ ಕೋರ್ಸ್‌ನ ಪ್ರಮಾಣಪತ್ರ ದೊಂದಿಗೆ ಕಂಪ್ಯೂಟರ್ ಕಾರ್ಯದಲ್ಲಿ ಜ್ಞಾನವನ್ನು ಹೊಂದಿರತಕ್ಕದ್ದು.
23	ಚಾಲಕರುಗಳು	(ರೂ. 21400-42000)	-	05	ಹೊರಗುತ್ತಿಗೆ ಮೂಲಕ	1. ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ (10ನೇ ತರಗತಿ) ಅಥವಾ ಅದಕ್ಕೆ ತತ್ಸಮಾನವಾದ ಪರೀಕ್ಷೆಯಲ್ಲಿ ಉತ್ತೀರ್ಣನಾಗಿರಬೇಕು.

						2. ಪ್ರಸ್ತುತ ಸಿಂಧುವಾದ ಲಘು ಮೋಟಾರು ವಾಹನ ಲೈಸೆನ್ಸ್ ಪಡೆದಿರತಕ್ಕದ್ದು. 3.ಸಂಘದಿಂದ ಮಾನ್ಯತೆ ಪಡೆದ ಸಂಸ್ಥೆಗಳಲ್ಲಿ ಲಘು ಮೋಟಾರು ವಾಹನ ಚಾಲನೆಯಲ್ಲಿ ಐದು ವರ್ಷಗಳಿಗಿಂತ ಕಡಿಮೆಯಿರದಂತೆ ಅನುಭವವನ್ನು ಹೊಂದಿರತಕ್ಕದ್ದು.
24	ಕಾವಲುಗಾರ/ಗ್ರೂಪ್ ಡಿ	(ರೂ. 17000-28950)	-	7	ಹೊರಗುತ್ತಿಗೆ ಏಜೆನ್ಸಿಯಿಂದ ಮತ್ತು ಕರ್ನಾಟಕ ಸಿವಿಲ್ ಸೇವೆಗಳು (ಅನುಕಂಪ ಆಧಾರದ ಮೇಲೆ ನೇಮಕಾತಿ) ನಿಯಮಗಳು, 1996ರ ಉಪಬಂಧಗಳಿಗೆ ಅನುಸಾರವಾಗಿ ನೇರ ನೇಮಕಾತಿ.	ಎಸ್‌ಎಸ್‌ಎಲ್‌ಸಿ (10ನೇ ತರಗತಿ ಪರೀಕ್ಷೆಯಲ್ಲಿ) ಉತ್ತೀರ್ಣನಾಗಿರತಕ್ಕದ್ದು ಅಥವಾ ಅದರಲ್ಲಿ ಅನುತ್ತೀರ್ಣರಾದವರನ್ನು ಪರಿಗಣಿಸಬಹುದು.

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದ ವಸತಿ ಶಾಲೆಗಳ ಸಿಬ್ಬಂದಿ

ಕ್ರಮ ಸಂಖ್ಯೆ	ಹುದ್ದೆಗಳ ಪ್ರವರ್ಗ ಮತ್ತು ವೇತನ ಶ್ರೇಣಿ		ಹುದ್ದೆಗಳ ಸಂಖ್ಯೆ		ನೇಮಕಾತಿ ವಿಧಾನ	ಕನಿಷ್ಠ ವಿದ್ಯಾರ್ಹತೆ
	ಹುದ್ದೆ	ವೇತನ ಶ್ರೇಣಿ (ರೂ.ಗಳಲ್ಲಿ)	ಖಾಯಂ	ತಾತ್ಕಾಲಿಕ		
1	2	3	4	5	6	7
25	ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆಗಳ ಪ್ರಾಂಶುಪಾಲರುಗಳು	(ರೂ. 52650-97100)	14	-	ಸಂಯೋಜಿತ ಜ್ಯೇಷ್ಠತೆ ಕಮ್ ಮೆರಿಟ್ ಆಧಾರದ ಮೇಲೆ ಕೆಆರ್ಇಐಎಸ್ ವಸತಿ ಶಾಲೆಗಳ (ಕ್ರಮಸಂಖ್ಯೆ:25) ಪ್ರಾಂಶುಪಾಲರುಗಳ ವೃಂದದ ಪೈಕಿಯಿಂದ ಶೇ. ನೂರರಷ್ಟು ಬಡ್ತಿ ಮೂಲಕ ತುಂಬಬೇಕು. ಆಯಾ ವೃಂದದಲ್ಲಿ ಸೇವಾವಧಿಯ ಆಧಾರದ ಮೇಲೆ ಜ್ಯೇಷ್ಠತೆಯನ್ನು ನಿರ್ಧರಿಸಬೇಕು.	1. ಈ ಕೆಳಕಂಡ ಯಾವುದೇ ಒಂದು ವಿಷಯದಲ್ಲಿ, ಸ್ನಾತಕೋತ್ತರ ಪದವಿಯಲ್ಲಿ ಕನಿಷ್ಠ ಎರಡನೇ ದರ್ಜೆಯಲ್ಲಿ ಉತ್ತೀರ್ಣನಾಗಿರಬೇಕು. ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಈ ಕೆಳಕಂಡ ವಿಷಯಗಳಲ್ಲಿ ಅಭ್ಯಾಸಿಸಿರಬೇಕು, ಎಂದರೆ,- ಕನ್ನಡ, ಇಂಗ್ಲೀಷ್, ಹಿಂದಿ, ಭೌತಶಾಸ್ತ್ರ, ರಸಾಯನಶಾಸ್ತ್ರ ಗಣಿತ, ಕಂಪ್ಯೂಟರ್ ವಿಜ್ಞಾನ, ಎಲೆಕ್ಟ್ರಾನಿಕ್ಸ್, ಪ್ರಾಣಿಶಾಸ್ತ್ರ, ಸಸ್ಯಶಾಸ್ತ್ರ, ಇತಿಹಾಸ, ಅರ್ಥಶಾಸ್ತ್ರ, ರಾಜ್ಯ ಶಾಸ್ತ್ರ ಸಮಾಜಶಾಸ್ತ್ರ, ಭೂಗೋಳಶಾಸ್ತ್ರ ಅನ್ವಯಿಕ ಗಣಿತಶಾಸ್ತ್ರ, ಜೀವವಿಜ್ಞಾನ, ಜೈವಿಕ ವಿಜ್ಞಾನ, ಅನ್ವಯಿಕ ಸಸ್ಯಶಾಸ್ತ್ರ, ಅನ್ವಯಿಕ ಪ್ರಾಣಿಶಾಸ್ತ್ರ, ಅನ್ವಯಿಕ ಭೂಗರ್ಭಶಾಸ್ತ್ರ, ಭೌಗೋಳಿಕ ಮಾಹಿತಿ, ಭೌತಿಕ ರಸಾಯನಶಾಸ್ತ್ರ, ಕಾರ್ಬನಿಕವಲ್ಲದ ರಸಾಯನಶಾಸ್ತ್ರ, ವಿಶ್ಲೇಷಣಾ ರಸಾಯನಶಾಸ್ತ್ರ,

						ಕೈಗಾರಿಕಾ ರಸಾಯನಶಾಸ್ತ್ರ ಅಥವಾ ಅನ್ವಯಿಕ ರಸಾಯನಶಾಸ್ತ್ರ, ಪ್ರಾಚೀನ ಇತಿಹಾಸ, ಪುರಾತತ್ವ ಶಾಸ್ತ್ರ, ಕಲೆ, ವಿಜ್ಞಾನ ಮತ್ತು ಭಾಷಾ ವಿಷಯಗಳಲ್ಲಿ ಪ್ರಾಚೀನ ಭಾರತದ ಇತಿಹಾಸ ಮತ್ತು ಶಾಸನಶಾಸ್ತ್ರ. **ಮತ್ತು** ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ (ಬಿ.ಇಡಿ) ಶಿಕ್ಷಣದಲ್ಲಿ ಪದವಿ ಪಡೆದಿರಬೇಕು. **ಮತ್ತು** ಅಭ್ಯರ್ಥಿಯು ಸ್ನಾತಕೋತ್ತರ ಪದವಿಯಲ್ಲಿ ಅಥವಾ ಪದವಿಯಲ್ಲಿ ಅಥವಾ ಪದವಿ ಪೂರ್ವ ಕೋರ್ಸ್‌ನಲ್ಲಿ ಅಥವಾ ಎಸ್‌ಎಸ್‌ಎಲ್‌ಸಿಯಲ್ಲಿ ಕನ್ನಡವನ್ನು ಒಂದು ಭಾಷೆಯಾಗಿ ಅಭ್ಯಾಸಮಾಡಿರಬೇಕು. ಅಥವಾ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ/ ಕನ್ನಡ ಸಾಹಿತ್ಯ ಪರಿಷತ್ ಬೆಂಗಳೂರು ಇವರು ನಡೆಸುವ ಕನ್ನಡ ಪ್ರಮಾಣಪತ್ರ ಕೋರ್ಸ್ (ಕಾವ/ಜಾಣ/ರತ್ನ) ನಲ್ಲಿ ಉತ್ತೀರ್ಣನಾಗಿರಬೇಕು ಅಥವಾ ಕನ್ನಡದಲ್ಲಿ ಡಿಪ್ಲೊಮೊ ಪಡೆದಿರಬೇಕು **ವಯೋಮಿತಿ:-** ಅನುಸೂಚಿತ ಜಾತಿಗಳು, ಅನುಸೂಚಿತ ಪಂಗಡಗಳು ಮತ್ತು ಪ್ರವರ್ಗ-Iರ ಅಭ್ಯರ್ಥಿಗಳಿಗೆ

						ಪ್ರಾಂಶುಪಾಲರ ಹುದ್ದೆಗಾಗಿ ಗರಿಷ್ಠ ವಯೋಮಿತಿ 45 ವರ್ಷಗಳು ಮತ್ತು ಇತರೆ ಹಿಂದುಳಿದ ವರ್ಗಗಳಾದ, ಪ್ರವರ್ಗ-IIಎ, IIಬಿ, IIIಎ, IIIಬಿ, ಇವರಿಗೆ 43 ವರ್ಷಗಳು ಹಾಗೂ ಸಾಮಾನ್ಯ ವರ್ಗದವರಿಗೆ 40 ವರ್ಷಗಳು ಆಗಿರಬೇಕು. **ಪ್ರಾಂಶುಪಾಲರುಗಳ ಹುದ್ದೆಗಾಗಿ ಬಡ್ತಿಯ ವಿಧಾನ:** ಕೆಆರ್‌ಇಐಎಸ್ ವಸತಿ ಶಾಲೆಗಳಲ್ಲಿ ಪ್ರಾಂಶುಪಾಲರ ವೃಂದದಲ್ಲಿ ಐದು ವರ್ಷಗಳಿಗೆ ಕಡಿಮೆಯಿರದಂತೆ ಸೇವೆ ಸಲ್ಲಿಸಿರಬೇಕು.
26	ಕೆಆರ್‌ಇಐಎಸ್ ವಸತಿ ಶಾಲೆಗಳ ಪ್ರಾಂಶುಪಾಲರುಗಳು	(ರೂ. 43100-83900)	783	-	ಅನುಸೂಚಿ-II ರಲ್ಲಿ ನಿರ್ದಿಷ್ಟಪಡಿಸಿದ ಪ್ರಕ್ರಿಯೆಯ ಅನುಸಾರವಾಗಿ ನೇರ ನೇಮಕಾತಿ ಮೂಲಕ ಶೇ. ಇಪ್ಪತ್ತೈದರಷ್ಟು ಮತ್ತು ಸಂಯೋಜಿತ ಜ್ಯೇಷ್ಠತೆ ಕಮ್ ಮೆರಿಟ್ ಆಧಾರದ ಮೇಲೆ ಶಿಕ್ಷಕರ ವೃಂದದ ಪೈಕಿ ಬಡ್ತಿ ಮೂಲಕ ಶೇ. ಎಪ್ಪತ್ತೈದರಷ್ಟು ಹುದ್ದೆಗಳನ್ನು ತುಂಬಬೇಕು.	1. ಈ ಕೆಳಕಂಡ ಯಾವುದಾದರೊಂದು ವಿಷಯದಲ್ಲಿ, ಸಾತ್ನಕೋತ್ತರ ಪದವಿಯಲ್ಲಿ ಕನಿಷ್ಠ ಪಕ್ಷ ದ್ವಿತೀಯ ದರ್ಜೆಯಲ್ಲಿ ಉತ್ತೀರ್ಣನಾಗಿರಬೇಕು. ಮಾನ್ಯತೆ ಪಡೆದ ವಿಶ್ವವಿದ್ಯಾಲಯದಲ್ಲಿ ಈ ಕೆಳಕಂಡ ವಿಷಯದಲ್ಲಿ ಅಭ್ಯಾಸಿಸಿರತಕ್ಕದ್ದು. ಎಂದರೆ, - ಕನ್ನಡ, ಇಂಗ್ಲೀಷ್, ಹಿಂದಿ, ಭೌತಶಾಸ್ತ್ರ, ರಸಾಯನಶಾಸ್ತ್ರ ಗಣಿತ, ಕಂಪ್ಯೂಟರ್ ವಿಜ್ಞಾನ, ಎಲೆಕ್ಟ್ರಾನಿಕ್ಸ್, ಪ್ರಾಣಿಶಾಸ್ತ್ರ, ಸಸ್ಯಶಾಸ್ತ್ರ, ಇತಿಹಾಸ, ಅರ್ಥಶಾಸ್ತ್ರ, ರಾಜ್ಯ ಶಾಸ್ತ್ರ, ಸಮಾಜಶಾಸ್ತ್ರ, ಭೂಗೋಳಶಾಸ್ತ್ರ ಅನ್ವಯಕ ಗಣಿತಶಾಸ್ತ್ರ, ಜೀವವಿಜ್ಞಾನ, ಜೈವಿಕ ವಿಜ್ಞಾನ, ಅನ್ವಯಿಕ

					ಆಯಾ ವೃಂದದಲ್ಲಿನ ಸೇವಾವಧಿಯ ಆಧಾರದ ಮೇಲೆ ಜ್ಯೇಷ್ಠತೆಯನ್ನು ನಿರ್ಧರಿಸಬೇಕು.	ಸಸ್ಯಶಾಸ್ತ್ರ, ಅನ್ವಯಿಕ ಪ್ರಾಣಿಶಾಸ್ತ್ರ, ಅನ್ವಯಿಕ ಭೂಗರ್ಭಶಾಸ್ತ್ರ, ಭೌಗೋಳಿಕ ಮಾಹಿತಿ, ಭೌತಿಕ ರಸಾಯನಶಾಸ್ತ್ರ, ಕಾರ್ಬನಿಕವಲ್ಲದ ರಸಾಯನಶಾಸ್ತ್ರ, ವಿಶ್ಲೇಷಣಾ ರಸಾಯನಶಾಸ್ತ್ರ, ಕೈಗಾರಿಕಾ ರಸಾಯನಶಾಸ್ತ್ರ ಅಥವಾ ಅನ್ವಯಿಕ ರಸಾಯನಶಾಸ್ತ್ರ, ಪ್ರಾಚೀನ ಇತಿಹಾಸ, ಪುರಾತತ್ವ ಶಾಸ್ತ್ರ ಮತ್ತು ಕಲೆ, ವಿಜ್ಞಾನ ಮತ್ತು ಭಾಷಾ ವಿಷಯಗಳಲ್ಲಿ ಪ್ರಾಚೀನ ಭಾರತದ ಇತಿಹಾಸ ಮತ್ತು ಶಾಸನಶಾಸ್ತ್ರ. ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ (ಬಿ.ಇಡಿ) ಶಿಕ್ಷಣದಲ್ಲಿ ಪದವಿ ಪಡೆದಿರಬೇಕು. **ಮತ್ತು** ಅಭ್ಯರ್ಥಿಯು ಸ್ನಾತಕೋತ್ತರ ಪದವಿ ಅಥವಾ ಸ್ನಾತಕ ಪದವಿ ಅಥವಾ ಪದವಿ ಪೂರ್ವ ಕೋರ್ಸ್ ಅಥವಾ ಎಸ್‌ಎಸ್‌ಎಲ್‌ಸಿಯಲ್ಲಿ ಕನ್ನಡವನ್ನು ಒಂದು ಭಾಷೆಯಾಗಿ ಅಭ್ಯಾಸಮಾಡಿರಬೇಕು ಅಥವಾ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ/ ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು ಇವರಿಂದ ನಡೆಸಲಾಗುವ ಕನ್ನಡ ಪ್ರಮಾಣಪತ್ರ ಕೋರ್ಸ್ (ಕಾವ/ಜಾಣ/ರತ್ನ) ರಲ್ಲಿ ಉತ್ತೀರ್ಣನಾಗಿರಬೇಕು ಅಥವಾ ಕನ್ನಡದಲ್ಲಿ ಡಿಪ್ಲೊಮೊ ಪಡೆದಿರಬೇಕು. **ವಯೋಮಿತಿ:-** ಅನುಸೂಚಿತ ಜಾತಿಗಳು, ಅನುಸೂಚಿತ ಪಂಗಡಗಳು ಮತ್ತು ಪ್ರವರ್ಗ-Iರ ಅಭ್ಯರ್ಥಿಗಳಿಗೆ

						ಪ್ರಾಂಶುಪಾಲರ ಹುದ್ದೆಗಾಗಿ ಗರಿಷ್ಠ ವಯೋಮಿತಿ 45 ವರ್ಷಗಳು, ಇತರೆ ಹಿಂದುಳಿದ ವರ್ಗಗಳಾದ, ಪ್ರವರ್ಗ-IIಎ, IIಬಿ, IIIಎ, IIIಬಿ, ಇವರಿಗೆ 43 ವರ್ಷಗಳು ಹಾಗೂ ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ 40 ವರ್ಷಗಳು. **ಪ್ರಾಂಶುಪಾಲರ ಹುದ್ದೆಗಾಗಿ ಬಡ್ತಿಯ ವಿಧಾನ:** 1) ಶಿಕ್ಷಕರುಗಳ ವೃಂದದಲ್ಲಿ ಐದು ವರ್ಷಗಳಿಗೆ ಕಡಿಮೆಯಿರದಂತೆ ಸೇವೆ ಸಲ್ಲಿಸಿರತಕ್ಕದ್ದು.
27	ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆಗಳ ಉಪ ಪ್ರಾಂಶುಪಾಲರುಗಳು.	(ರೂ. 43100-83900)	14	-	ಅನುಸೂಚಿ-II ರಲ್ಲಿ ನಿರ್ದಿಷ್ಟಪಡಿಸಿದ ಪ್ರಕ್ರಿಯೆಯ ಅನುಸಾರವಾಗಿ ನೇರ ನೇಮಕಾತಿ ಮೂಲಕ ಶೇಕಡಾ ಇಪ್ಪತ್ತೈದರಷ್ಟು ಮತ್ತು ಸಂಯೋಜಿತ ಜ್ಯೇಷ್ಠತೆ ಕಮ್ ಮೇರಿಟ್ ಆಧಾರದ ಮೇಲೆ ಶಿಕ್ಷಕರುಗಳ ವೃಂದದ ಪೈಕಿಯಿಂದ ಬಡ್ತಿ ಮೂಲಕ ಶೇಕಡಾ ಎಪ್ಪತ್ತೈದರಷ್ಟು ತುಂಬಬೇಕು. ಆಯಾ ವೃಂದದಲ್ಲಿನ ಸೇವಾವಧಿಯ	1. ಈ ಕೆಳಕಂಡ ಯಾವುದಾದರೊಂದು ವಿಷಯದಲ್ಲಿ, ಸ್ನಾತಕೋತ್ತರ ಪದವಿಯಲ್ಲಿ ಕನಿಷ್ಠ ಪಕ್ಷ ದ್ವಿತೀಯ ದರ್ಜೆಯಲ್ಲಿ ಉತ್ತೀರ್ಣನಾಗಿರಬೇಕು. ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಈ ಕೆಳಕಂಡ ವಿಷಯದಲ್ಲಿ ಅಭ್ಯಾಸಿಸಿರತಕ್ಕದ್ದು, ಎಂದರೆ,- ಕನ್ನಡ, ಇಂಗ್ಲೀಷ್, ಹಿಂದಿ, ಭೌತಶಾಸ್ತ್ರ, ರಸಾಯನಶಾಸ್ತ್ರ ಗಣಿತ, ಕಂಪ್ಯೂಟರ್ ವಿಜ್ಞಾನ, ಎಲೆಕ್ಟ್ರಾನಿಕ್ಸ್, ಪ್ರಾಣಿಶಾಸ್ತ್ರ, ಸಸ್ಯಶಾಸ್ತ್ರ, ಇತಿಹಾಸ, ಅರ್ಥಶಾಸ್ತ್ರ, ರಾಜ್ಯ ಶಾಸ್ತ್ರ, ಸಮಾಜಶಾಸ್ತ್ರ, ಭೂಗೋಳಶಾಸ್ತ್ರ ಅನ್ವಯಿಕ ಗಣಿತಶಾಸ್ತ್ರ, ಜೀವವಿಜ್ಞಾನ, ಜೈವಿಕ ವಿಜ್ಞಾನ, ಅನ್ವಯಿಕ ಸಸ್ಯಶಾಸ್ತ್ರ, ಅನ್ವಯಿಕ ಪ್ರಾಣಿಶಾಸ್ತ್ರ, ಅನ್ವಯಿಕ ಭೂಗರ್ಭಶಾಸ್ತ್ರ, ಭೌಗೋಳಿಕ ಮಾಹಿತಿ, ಭೌತಿಕ ರಸಾಯನಶಾಸ್ತ್ರ, ಕಾರ್ಬನಿಕವಲ್ಲದ ರಸಾಯನಶಾಸ್ತ್ರ, ವಿಶ್ಲೇಷಣಾ ರಸಾಯನಶಾಸ್ತ್ರ,

					ಆಧಾರದ ಮೇಲೆ ಜ್ಯೇಷ್ಠತೆಯನ್ನು ನಿರ್ಧರಿಸಬೇಕು.	ಕೈಗಾರಿಕಾ ರಸಾಯನಶಾಸ್ತ್ರ ಅಥವಾ ಅನ್ವಯಿಕ ರಸಾಯನಶಾಸ್ತ್ರ, ಪ್ರಾಚೀನ ಇತಿಹಾಸ, ಪುರಾತತ್ವ ಶಾಸ್ತ್ರ ಮತ್ತು ಕಲೆ, ವಿಜ್ಞಾನ ಮತ್ತು ಭಾಷಾ ವಿಷಯಗಳಲ್ಲಿ ಪ್ರಾಚೀನ ಭಾರತದ ಇತಿಹಾಸ ಮತ್ತು ಶಾಸನಶಾಸ್ತ್ರ. **ಮತ್ತು** ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ (ಬಿ.ಇಡಿ) ಶಿಕ್ಷಣದಲ್ಲಿ ಪದವಿ ಪಡೆದಿರತಕ್ಕದ್ದು. **ಮತ್ತು** ಅಭ್ಯರ್ಥಿಯು ಸ್ನಾತಕೋತ್ತರ ಪದವಿ ಅಥವಾ ಸ್ನಾತಕ ಪದವಿ ಅಥವಾ ಪದವಿ ಪೂರ್ವ ಕೋರ್ಸ್ ಅಥವಾ ಎಸ್‌ಎಸ್‌ಎಲ್‌ಸಿಯಲ್ಲಿ ಕನ್ನಡವನ್ನು ಒಂದು ಭಾಷೆಯಾಗಿ ಅಭ್ಯಾಸಿಸಿರಬೇಕು. ಅಥವಾ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ/ ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು ಇವರಿಂದ ನಡೆಸಲಾಗುವ ಕನ್ನಡ ಪ್ರಮಾಣಪತ್ರ ಕೋರ್ಸ್ (ಕಾವ/ಜಾಣ/ರತ್ನ) ದಲ್ಲಿ ಉತ್ತೀರ್ಣನಾಗಿರಬೇಕು ಅಥವಾ ಕನ್ನಡದಲ್ಲಿ ಡಿಪ್ಲೊಮೊ ಪಡೆದಿರಬೇಕು **ವಯೋಮಿತಿ:-** ಅನುಸೂಚಿತ ಜಾತಿಗಳು, ಅನುಸೂಚಿತ ಪಂಗಡಗಳು ಮತ್ತು ಪ್ರವರ್ಗ-Iರ ಅಭ್ಯರ್ಥಿಗಳಿಗೆ ಪ್ರಾಂಶುಪಾಲರ ಹುದ್ದೆಗಾಗಿ ಗರಿಷ್ಠ ವಯೋಮಿತಿ 45 ವರ್ಷಗಳು

						ಹಾಗೂ ಇತರೆ ಹಿಂದುಳಿದ ವರ್ಗಗಳಾದ, ಪ್ರವರ್ಗ-IIಎ, IIಬಿ, IIIಎ, IIIಬಿ, ಇವರಿಗೆ 43 ವರ್ಷಗಳು ಹಾಗೂ ಸಾಮಾನ್ಯ ವರ್ಗದವರಿಗೆ 40 ವರ್ಷಗಳು. **ಉಪ ಪ್ರಾಂಶುಪಾಲರುಗಳ ಹುದ್ದೆಗಾಗಿ ಬಡ್ತಿಯ ವಿಧಾನ:** 1) ಶಿಕ್ಷಕರುಗಳ ವೃಂದದಲ್ಲಿ ಐದು ವರ್ಷಗಳಿಗೆ ಕಡಿಮೆಯಿರದಂತೆ ಸೇವೆ ಸಲ್ಲಿಸಿರಬೇಕು.
28	ಕನ್ನಡ ಭಾಷಾ ಶಿಕ್ಷಕರು	(ರೂ. 33450-62600)	811	-	ಅನುಸೂಚಿ-II ರಲ್ಲಿ ನಿರ್ದಿಷ್ಟಪಡಿಸಿದ ಪ್ರಕ್ರಿಯೆಯ ಅನುಸಾರವಾಗಿ ನೇಮಕಾತಿ ಸಮಿತಿಯ ಮುಖಾಂತರ ನೇರ ನೇಮಕಾತಿ ಮೂಲಕ.	**ಈ ಅನುಸೂಚಿಯ ಅಂಕಣ (2)ರಲ್ಲಿ ಕ್ರಮಸಂಖ್ಯೆ, 28,29, 30, 31, 32, 33, 34, ಮತ್ತು 35 ರಲ್ಲಿನ ಹುದ್ದೆಗಳಿಗಾಗಿ ನಿರ್ದಿಷ್ಟಪಡಿಸಿದ ವಿದ್ಯಾರ್ಹತೆ ಕೆಳಗಿನಂತಿದೆ:** **ಕನ್ನಡ ಭಾಷಾ ಶಿಕ್ಷಕರಿಗಾಗಿ:-** (1) ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಕನ್ನಡ ಭಾಷೆಯನ್ನು ಒಂದು ಐಚ್ಛಿಕ ವಿಷಯವನ್ನಾಗಿ ಓದಿ ಕಲಾ ವಿಭಾಗದಲ್ಲಿ ಸ್ನಾತಕ ಪದವಿಯನ್ನು ಪಡೆದಿರಬೇಕು. **ಅಥವಾ** ಅಭ್ಯರ್ಥಿಗಳು ಕರ್ನಾಟಕ ರಾಜ್ಯ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ ಬೆಂಗಳೂರು ಇವರು ನಡೆಸಲಾಗುವ ನಾಲ್ಕು ವರ್ಷಗಳ 'ಕನ್ನಡ ಪಂಡಿತ್"ಕೋರ್ಸ್‌ನಲ್ಲಿ ಉತ್ತೀರ್ಣನಾಗಿರಬೇಕು. **ಮತ್ತು** ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಕನ್ನಡದಲ್ಲಿ ಬಿ.ಇಡ್

						ಪದವಿಯನ್ನು ಪಡೆದಿರಬೇಕು. **ಅಥವಾ** (2) ಅಭ್ಯರ್ಥಿಯು ಸ್ನಾತಕ ಪದವಿಯಲ್ಲಿ ಕನ್ನಡವನ್ನು ಐಚ್ಛಿಕ ವಿಷಯವನ್ನಾಗಿ ಅಭ್ಯಸಿಸಿಲ್ಲದಿದ್ದಲ್ಲಿ, ಕನ್ನಡ ಭಾಷೆಯಲ್ಲಿ ಸ್ನಾತಕೋತ್ತರ ಪದವಿ ಪಡೆದವರನ್ನು ಪರಿಗಣಿಸಬಹುದು. **ಟಿಪ್ಪಣಿ:** ಸ್ನಾತಕ ಪದವಿ ಅಥವಾ ಅದಕ್ಕೆ ತತ್ಸಮಾನವಾದ ಮತ್ತು ಬಿ.ಇಡಿ ಪದವಿಯ ಅಂಕಗಳನ್ನು ಮೆರಿಟ್ ಪಟ್ಟಿಯನ್ನು ಸಿದ್ಧಪಡಿಸುವಲ್ಲಿ ಅನುಸೂಚಿ-IIರಲ್ಲಿ ವಿವರಿಸಿರುವಂತೆ ಸಂಯೋಜಿತ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳಿಗೆ ಸೇರಿಸಿ ಪರಿಗಣಿಸತಕ್ಕದ್ದು.
29	ಇಂಗ್ಲೀಷ್ ಭಾಷಾ ಶಿಕ್ಷಕರು	(ರೂ. 33450-62600)	811	-	ಅನುಸೂಚಿ-II ರಲ್ಲಿ ನಿರ್ದಿಷ್ಟಪಡಿಸಿದ ಪ್ರಕ್ರಿಯೆಯ ಅನುಸಾರವಾಗಿ ನೇಮಕಾತಿ ಸಮಿತಿಯ ಮುಖಾಂತರ ನೇರ ನೇಮಕಾತಿ ಮೂಲಕ.	**ಇಂಗ್ಲೀಷ್ ಭಾಷಾ ಶಿಕ್ಷಕರಿಗಾಗಿ:-** (1) ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಇಂಗ್ಲೀಷ್ ಭಾಷೆಯನ್ನು ಒಂದು ಐಚ್ಛಿಕ ವಿಷಯವನ್ನಾಗಿ ಅಭ್ಯಸಿಸಿ ಕಲಾ ವಿಭಾಗದಲ್ಲಿ ಸ್ನಾತಕ ಪದವಿಯನ್ನು ಪಡೆದಿರತಕ್ಕದ್ದು. **ಅಥವಾ** ದಕ್ಷಿಣ ಭಾರತದ ಪ್ರಾದೇಶಿಕ ಶಿಕ್ಷಣ ಸಂಸ್ಥೆಯಿಂದ ಇಂಗ್ಲೀಷ್‌ನಲ್ಲಿ ಸ್ನಾತಕೋತ್ತರ ಡಿಪ್ಲೊಮೊ ಪ್ರಮಾಣಪತ್ರ ಕೋರ್ಸ್‌ನಲ್ಲಿ ಉತ್ತೀರ್ಣನಾಗಿರುವ ಅಭ್ಯರ್ಥಿಯು ಸಹ ಅರ್ಹನಾಗಿರುತ್ತಾನೆ. **ಮತ್ತು**

						ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಪ್ರಮುಖವಾಗಿ ಇಂಗ್ಲೀಷ್ ಪದ್ಧತಿ (Methods)ಯಲ್ಲಿ ಬಿ.ಇಡಿ ಪದವಿಯನ್ನು ಪಡೆದಿರತಕ್ಕದ್ದು. (2) ಅಭ್ಯರ್ಥಿಯು ಸ್ನಾತಕ ಪದವಿಯಲ್ಲಿ ಇಂಗ್ಲೀಷನ್ನು ಐಚ್ಛಿಕ ವಿಷಯವನ್ನಾಗಿ ಅಭ್ಯಸಿಸಿಲ್ಲದಿದ್ದಲ್ಲಿ, ಇಂಗ್ಲೀಷ್ ಭಾಷೆಯಲ್ಲಿ ಸ್ನಾತಕೋತ್ತರ ಪದವಿ ಪಡೆದವರನ್ನು ಪರಿಗಣಿಸಬೇಕು. ಅಭ್ಯರ್ಥಿಯು ಸ್ನಾತಕೋತ್ತರ ಪದವಿ ಅಥವಾ ಸ್ನಾತಕ ಪದವಿ ಅಥವಾ ಪದವಿ ಪೂರ್ವ ಕೋರ್ಸ್ ಅಥವಾ ಎಸ್‌ಎಸ್‌ಎಲ್‌ಸಿಯಲ್ಲಿ ಕನ್ನಡವನ್ನು ಒಂದು ಭಾಷೆಯಾಗಿ ಅಭ್ಯಸಿಸಿರಬೇಕು ಅಥವಾ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ/ ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು ಇವರಿಂದ ನಡೆಸಲಾಗುವ ಕನ್ನಡ ಪ್ರಮಾಣಪತ್ರ ಕೋರ್ಸ್ (ಕಾವ/ಜಾಣ/ರತ್ನ) ದಲ್ಲಿ ಉತ್ತೀರ್ಣನಾಗಿರಬೇಕು ಅಥವಾ ಕನ್ನಡದಲ್ಲಿ ಡಿಪ್ಲೊಮೊ ಹೊಂದಿರಬೇಕು. **ಟಿಪ್ಪಣಿ:** ಅಭ್ಯರ್ಥಿಗಳು, ದಕ್ಷಿಣ ಭಾರತದ ಇಂಗ್ಲೀಷ್‌ನ ಪ್ರಾದೇಶಿಕ/ಶಿಕ್ಷಣ ಸಂಸ್ಥೆಗಳಿಂದ ಇಂಗ್ಲೀಷ್‌ನಲ್ಲಿ ಸ್ನಾತಕೋತ್ತರ ಡಿಪ್ಲೊಮೊ ಕೋರ್ಸ್ ಪ್ರಮಾಣಪತ್ರ ಪಡೆದು ಉತ್ತೀರ್ಣನಾಗಿರುವಲ್ಲಿ ಅಂಥ ಕೋರ್ಸ್‌ನಲ್ಲಿ ಗಳಿಸಿದ

						ಅಂಕಗಳನ್ನು ಮೆರಿಟ್ ಪಟ್ಟಿಯನ್ನು ಸಿದ್ಧಪಡಿಸುವಾಗ ಪರಿಗಣಿಸತಕ್ಕದ್ದು.
30	ಹಿಂದಿ ಭಾಷಾ ಶಿಕ್ಷಕರು	(ರೂ. 33450-62600)	811	-	ಅನುಸೂಚಿ-II ರಲ್ಲಿ ನಿರ್ದಿಷ್ಟಪಡಿಸಿದ ಪ್ರಕ್ರಿಯೆಯ ಅನುಸಾರವಾಗಿ ನೇಮಕಾತಿ ಸಮಿತಿಯ ಮುಖಾಂತರ ನೇರ ನೇಮಕಾತಿ ಮೂಲಕ.	**ಹಿಂದಿ ಭಾಷಾ ಶಿಕ್ಷಕರಿಗಾಗಿ ಅರ್ಹತೆ:-** ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಹಿಂದಿ ಭಾಷೆಯನ್ನು ಒಂದು ಐಚ್ಛಿಕ ವಿಷಯವನ್ನಾಗಿ ಅಭ್ಯಸಿಸಿ ಕಲಾವಿಭಾಗದಲ್ಲಿ ಸ್ನಾತಕ ಪದವಿ ಪಡೆದಿರಬೇಕು. **ಅಥವಾ** ಸ್ನಾತಕ ಪದವಿ ಮತ್ತು ಬಿ.ಇಡಿ ಪದವಿ ಶಿಕ್ಷಣಕ್ಕೆ ತತ್ಸಮಾನವಾದ ಕರ್ನಾಟಕ ರಾಜ್ಯ ಸರ್ಕಾರದಿಂದ ಘೋಷಿಸಲಾದ ಇತರೆ ಯಾವುದೇ ಪದವಿ **ಮತ್ತು** ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಹಿಂದಿ ಪದ್ಧತಿ (Methods)ಯಲ್ಲಿ ಬಿ.ಇಡಿ ಪದವಿ ಪಡೆದಿರಬೇಕು. ಸರ್ಕಾರ ಅದರ ಆದೇಶ ಸಂಖ್ಯೆ. **ಇಡಿ 160 ಪಿಟಿಐ 2003 ದಿನಾಂಕ: 24.02.2004ರಲ್ಲಿ** ಈ ಕೆಳಕಂಡವುಗಳನ್ನು ಹಿಂದಿಯಲ್ಲಿ ಸ್ನಾತಕ ಪದವಿ ಮತ್ತು ಬಿ.ಇಡಿ ಪದವಿಗೆ ತತ್ಸಮಾನವಾಗಿ ಘೋಷಿಸಿದೆ.

ಹಿಂದಿಯಲ್ಲಿ ಸ್ನಾತಕ ಪದವಿಗೆ ತತ್ಸಮಾನವಾದುದು	ಸಂಸ್ಥೆಗಳು
ಹಿಂದಿ ರತ್ನ	ಮೈಸೂರು ಹಿಂದಿ ಪ್ರಚಾರ ಪರಿಷತ್, ಬೆಂಗಳೂರು.
ರಾಜ ಭಾಷಾ ವಿದ್ವಾನ್	ಕರ್ನಾಟಕ ಹಿಂದಿ ಪ್ರಚಾರ ಸಮಿತಿ, ಬೆಂಗಳೂರು
ಹಿಂದಿ ಭಾಷಾ ಪ್ರವೀಣ್	ಕರ್ನಾಟಕ ಹಿಂದಿ ಸೇವಾ ಸಮಿತಿ, ಬೆಂಗಳೂರು
ರಾಷ್ಟ್ರಭಾಷಾ ಪ್ರವೀಣ್	ದಕ್ಷಿಣ ಭಾರತ ಹಿಂದಿ ಪ್ರಚಾರ ಸಭಾ, ಮದ್ರಾಸ್.

ಸರ್ಕಾರಿ ಆದೇಶ ಸಂಖ್ಯೆ. ಇಡಿ **125** ಪಿಟಿಐ **2003, ದಿನಾಂಕ: 16.08.2003**ರನ್ವಯ ಈ ಕೆಳಕಂಡವುಗಳು ಹಿಂದಿ ಭಾಷೆಯಲ್ಲಿ ಬಿ.ಇಡಿ ಪದವಿಗೆ ತತ್ಸಮಾನವಾದುವು.

							ಹಿಂದಿ ಶಿಕ್ಷಕ ಕೋರ್ಸ್	ಕರ್ನಾಟಕ ಮಹಿಳಾ ಹಿಂದಿ ಸೇವಾ ಸಮಿತಿ, ಬೆಂಗಳೂರು. ಕರ್ನಾಟಕ ಹಿಂದಿ ಪ್ರಚಾರ ಸಮಿತಿ, ಬೆಂಗಳೂರು. ಮೈಸೂರು ಹಿಂದಿ ಪ್ರಚಾರ ಪರಿಷತ್, ಬೆಂಗಳೂರು. ಮಾನಸ ಎಜುಕೇಷನ್ ಸೊಸೈಟಿ, ತುಮಕೂರು. ಕರ್ನಾಟಕ ಕಾರ್ಮಿಕ ಶಿಕ್ಷಣ ಸೊಸೈಟಿ, ಬೀದರ್.	
							ಹಿಂದಿ ಶಿಕ್ಷಕ್ ಪಾರಂಗತ್ ಕೋರ್ಸ್	ಸರ್ಕಾರಿ ಹಿಂದಿ ಶಿಕ್ಷಕರ ಕಾಲೇಜು, ಮೈಸೂರು	
							ಹಿಂದಿ ಶಿಕ್ಷಕ್	ದಕ್ಷಿಣ ಭಾರತ ಹಿಂದಿ ಪ್ರಚಾರ ಸಭಾ, ಮದ್ರಾಸ್	
							ಹಿಂದಿ ಬಿ.ಇಡಿ	ಹಿಂದಿ ಶಿಕ್ಷಕರ ತರಬೇತಿ ಕಾಲೇಜು, ಕರ್ನಾಟಕ ಹಿಂದಿ ಸಭಾ, ಮಂಡ್ಯ	

						ಮತ್ತು ಕನ್ನಡ ಭಾಷೆಯನ್ನು ಒಂದು ವಿಷಯವನ್ನಾಗಿ ಅಥವಾ ಕನ್ನಡ ಶಿಕ್ಷಣ ಮಾಧ್ಯಮದಲ್ಲಿ ಅಭ್ಯಸಿಸಿ–ಪಿಯುಸಿಯಲ್ಲಿ ಉತ್ತೀರ್ಣನಾಗಿರಬೇಕು. ಹಿಂದಿ ಶಿಕ್ಷಕ ಮತ್ತು ಹಿಂದಿ ಶಿಕ್ಷಕ ಪಾರಂಗತ್ ಅಭ್ಯರ್ಥಿಗಳು, ಕೋರ್ಸ್‌ಗೆ ಸೇರುವುದಕ್ಕೆ ಮೊದಲು, ಕನ್ನಡ ಭಾಷೆಯನ್ನು ಒಂದು ವಿಷಯವನ್ನಾಗಿ ತೆಗೆದುಕೊಳ್ಳುವ ಮೂಲಕ ಅಥವಾ ಕನ್ನಡ ಶಿಕ್ಷಣ ಮಾಧ್ಯಮದಲ್ಲಿ ಅಭ್ಯಸಿಸಿ ಪಿಯುಸಿಯಲ್ಲಿ ಉತ್ತೀರ್ಣನಾಗಿರಬೇಕು. ಅಭ್ಯರ್ಥಿಯು, ಬಿ.ಇಡಿಗೆ ತತ್ಸಮಾನವಾದ ಪರೀಕ್ಷೆಯಲ್ಲಿ ಹಿಂದಿ ಮತ್ತು ಇತರೆ ಯಾವುದೇ ಒಂದು ಭಾಷೆಯನ್ನು ಪದ್ಧತಿಯ [Method] ವಿಷಯವಾಗಿ ಅಭ್ಯಸಿಸಿರಬೇಕು. **ಮತ್ತು** ಅಭ್ಯರ್ಥಿಯು ಮೇಲೆ ಅಗತ್ಯಪಡಿಸಲಾದ ಅರ್ಹತೆಯೊಂದಿಗೆ ಹಿಂದಿ ಶಿಕ್ಷಕ ಹುದ್ದೆಗೆ ಅರ್ಜಿ ಸಲ್ಲಿಸಬೇಕು. ಅರ್ಹತಾ ಪರೀಕ್ಷೆಯಲ್ಲಿ ಕನ್ನಡವನ್ನು ಒಂದು ಭಾಷೆಯಾಗಿ ಅವನು ಅಭ್ಯಸಿಸಿರದಿದ್ದಲ್ಲಿ, ಅವನು ಪದವಿ ಪೂರ್ವ ಕೋರ್ಸ್‌ನಲ್ಲಿ

						ಅಥವಾ ಎಸ್‌ಎಸ್‌ಎಲ್‌ಸಿಯಲ್ಲಿ ಕನ್ನಡವನ್ನು ಒಂದು ಭಾಷೆಯನ್ನಾಗಿ ಅಭ್ಯಾಸ ಮಾಡಿರಬೇಕು ಅಥವಾ ಕನ್ನಡದಲ್ಲಿ ಡಿಪ್ಲೊಮೊ ಮಾಡಿರಬೇಕು ಅಥವಾ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ/ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು ಇವರು ನಡೆಸುವ (ಕಾವ/ಜಾಣ/ರತ್ನ) ಕನ್ನಡ ಪ್ರಮಾಣಪತ್ರ ಕೋರ್ಸ್‌ನಲ್ಲಿ ಉತ್ತೀರ್ಣನಾಗಿರಬೇಕು.
31	ವಿಜ್ಞಾನ ವಿಷಯ ಶಿಕ್ಷಕರು	(ರೂ. 33450-62600)	839	-	ಅನುಸೂಚಿ-II ರಲ್ಲಿ ನಿರ್ದಿಷ್ಟಪಡಿಸಿದ ಪ್ರಕ್ರಿಯೆಯ ಅನುಸಾರವಾಗಿ ನೇಮಕಾತಿ ಸಮಿತಿಯ ಮುಖಾಂತರ ನೇರ ನೇಮಕಾತಿ ಮೂಲಕ	**ವಿಜ್ಞಾನ ವಿಷಯ ಶಿಕ್ಷಕರ ನೇರ ನೇಮಕಾತಿ:-** (1) ಕಡ್ಡಾಯವಾಗಿ ರಸಾಯನಶಾಸ್ತ್ರ ವಿಷಯದೊಂದಿಗೆ ಮತ್ತು ಈ ಕೆಳಕಂಡ ಯಾವುದೇ ಒಂದು ಐಚ್ಛಿಕ ವಿಷಯಗಳೊಂದಿಗೆ, ಎಂದರೆ:- ಸಸ್ಯ ಶಾಸ್ತ್ರ, ಪ್ರಾಣಿ ಶಾಸ್ತ್ರ ವಿಜ್ಞಾನದಲ್ಲಿ ಸ್ನಾತಕ ಪದವಿಯನ್ನು ಪಡೆದಿರಬೇಕು. **ಮತ್ತು** (2) ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ವಿಜ್ಞಾನ ವಿಷಯದ ಪದ್ಧತಿ [Method]ಯಲ್ಲಿ ಬಿ.ಇಡಿ ಪದವಿಯನ್ನು ಪಡೆದಿರಬೇಕು. **ಮತ್ತು** ಅಭ್ಯರ್ಥಿಯು, ಸ್ನಾತಕ ಪದವಿ ಅಥವಾ ಪದವಿ ಪೂರ್ವ ಕೋರ್ಸ್ ಅಥವಾ ಎಸ್‌ಎಸ್‌ಎಲ್‌ಸಿಯಲ್ಲಿ ಕನ್ನಡವನ್ನು ಒಂದು

						ಭಾಷೆಯನ್ನಾಗಿ ಅಭ್ಯಸಿಸಿರಬೇಕು ಅಥವಾ ಕನ್ನಡದಲ್ಲಿ ಡಿಪ್ಲೊಮೊ ಹೊಂದಿರಬೇಕು ಅಥವಾ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ/ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು ಇವರು ನಡೆಸುವ ಕನ್ನಡ ಪ್ರಮಾಣಪತ್ರ ಕೋರ್ಸ್‌ನಲ್ಲಿ (ಕಾವ/ಜಾಣ/ರತ್ನ) ಉತ್ತೀರ್ಣನಾಗಿರಬೇಕು.
32	ಗಣಿತ ವಿಷಯ ಶಿಕ್ಷಕರು	(ರೂ. 33450-62600)	811	-	ಅನುಸೂಚಿ-II ರಲ್ಲಿ ನಿರ್ದಿಷ್ಟಪಡಿಸಿದ ಪ್ರಕ್ರಿಯೆಯ ಅನುಸಾರವಾಗಿ ನೇಮಕಾತಿ ಸಮಿತಿಯ ಮುಖಾಂತರ ನೇರ ನೇಮಕಾತಿ ಮೂಲಕ	**ಗಣಿತ ವಿಷಯ ಶಿಕ್ಷಕರಿಗಾಗಿ ವಿದ್ಯಾರ್ಹತೆ:-** (1) ಗಣಿತ ಮತ್ತು ಭೌತಶಾಸ್ತ್ರ ಕಡ್ಡಾಯ ವಿಷಯಗಳೊಂದಿಗೆ ವಿಜ್ಞಾನ ವಿಷಯದಲ್ಲಿ ಸ್ನಾತಕ ಪದವಿಯನ್ನು ಪಡೆದಿರಬೇಕು. ಮತ್ತು ಇದರ ಜೊತೆಗೆ, ಈ ಕೆಳಕಂಡ ಯಾವುದೇ ಒಂದನ್ನು ಐಚ್ಛಿಕ ವಿಷಯವಾಗಿ ಅಭ್ಯಸಿಸಿರಬೇಕು ಎಂದರೆ: ರಸಾಯನಶಾಸ್ತ್ರ, **ಮತ್ತು** ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ವಿಜ್ಞಾನ ಪದ್ಧತಿ[Method]ಯಲ್ಲಿ ಬಿ.ಇಡಿ ಪದವಿಯನ್ನು ಪಡೆದಿರಬೇಕು. **ಮತ್ತು** ಅಭ್ಯರ್ಥಿಯು, ಸ್ನಾತಕ ಪದವಿ ಅಥವಾ ಪದವಿ ಪೂರ್ವ ಕೋರ್ಸ್ ಅಥವಾ ಎಸ್‌ಎಸ್‌ಎಲ್‌ಸಿಯಲ್ಲಿ ಕನ್ನಡವನ್ನು ಒಂದು ಭಾಷೆಯನ್ನಾಗಿ ಅಭ್ಯಾಸ ಮಾಡಿರಬೇಕು ಅಥವಾ ಕನ್ನಡದಲ್ಲಿ ಡಿಪ್ಲೊಮೊ ಹೊಂದಿರಬೇಕು ಅಥವಾ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ/ಕನ್ನಡ ಸಾಹಿತ್ಯ ಪರಿಷತ್ ಬೆಂಗಳೂರು

						ಇವರು ನಡೆಸುವ ಕನ್ನಡ ಪ್ರಮಾಣಪತ್ರ ಕೋರ್ಸ್‌ನಲ್ಲಿ (ಕಾವ/ಜಾಣ/ರತ್ನ) ಉತ್ತೀರ್ಣನಾಗಿರಬೇಕು.
33	ಸಮಾಜ ವಿಜ್ಞಾನ ವಿಷಯ ಶಿಕ್ಷಕರು	(ರೂ. 33450-62600)	811	-	ಅನುಸೂಚಿ-II ರಲ್ಲಿ ನಿರ್ದಿಷ್ಟಪಡಿಸಿದ ಪ್ರಕ್ರಿಯೆಯ ಅನುಸಾರವಾಗಿ ನೇಮಕಾತಿ ಸಮಿತಿಯ ಮುಖಾಂತರ ನೇರ ನೇಮಕಾತಿ ಮೂಲಕ	**ಸಮಾಜ ವಿಜ್ಞಾನ ವಿಷಯ ಶಿಕ್ಷಕರಿಗಾಗಿ ವಿದ್ಯಾರ್ಹತೆ:** ಈ ಕೆಳಕಂಡ ಯಾವುದೇ ಎರಡು ವಿಷಯಗಳನ್ನು ಐಚ್ಛಿಕ ವಿಷಯವಾಗಿ ತೆಗೆದುಕೊಂಡು ಕಲಾವಿಭಾಗದಲ್ಲಿ ಸ್ನಾತಕ ಪದವಿಯನ್ನು ಪಡೆದಿರಬೇಕು. ಎಂದರೆ,- ಇತಿಹಾಸ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಸಮಾಜ ಶಾಸ್ತ್ರ ಮತ್ತು ಭೂಗೋಳ ಶಾಸ್ತ್ರ. ಮತ್ತು ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಕಲಾವಿಭಾಗದಲ್ಲಿ (Arts Method)ನಲ್ಲಿ ಬಿ.ಇಡಿ ಪದವಿಯನ್ನು ಪಡೆದಿರಬೇಕು. **ಮತ್ತು** ಅಭ್ಯರ್ಥಿಯು ಸ್ನಾತಕ ಪದವಿ ಅಥವಾ ಪದವಿ ಪೂರ್ವ ಕೋರ್ಸ್ ಅಥವಾ ಎಸ್‌ಎಸ್‌ಎಲ್‌ಸಿಯಲ್ಲಿ ಕನ್ನಡವನ್ನು ಒಂದು ಭಾಷೆಯನ್ನಾಗಿ ಅಭ್ಯಾಸ ಮಾಡಿರಬೇಕು ಅಥವಾ ಕನ್ನಡದಲ್ಲಿ ಡಿಪ್ಲೊಮೊ ಹೊಂದಿರಬೇಕು ಅಥವಾ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ/ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು ಇವರು ನಡೆಸುವ ಕನ್ನಡ ಪ್ರಮಾಣಪತ್ರ ಕೋರ್ಸ್‌ನಲ್ಲಿ (ಕಾವ/ಜಾಣ/ರತ್ನ) ಉತ್ತೀರ್ಣನಾಗಿರಬೇಕು. **ಇಂಗ್ಲೀಷ್ ಮಾಧ್ಯಮ ಶಾಲೆಗಳ ನೇಮಕಾತಿಗಾಗಿ:** ಇಂಗ್ಲೀಷ್

						ಮಾಧ್ಯಮ ಶಾಲೆಗಳಿಗಾಗಿ, ಅಭ್ಯರ್ಥಿಯು ಸ್ನಾತಕ ಪದವಿಯಲ್ಲಿ ಇಂಗ್ಲೀಷ್ ಮಾಧ್ಯಮದಲ್ಲಿ ಅಭ್ಯಾಸ ಮಾಡಿರಬೇಕು.
34	ಕಂಪ್ಯೂಟರ್ ಶಿಕ್ಷಕರು	(ರೂ. 33450-62600)	811	-	ಅನುಸೂಚಿ-II ರಲ್ಲಿ ನಿರ್ದಿಷ್ಟಪಡಿಸಿದ ಪ್ರಕ್ರಿಯೆಯ ಅನುಸಾರವಾಗಿ ನೇಮಕಾತಿ ಸಮಿತಿಯ ಮುಖಾಂತರ ನೇರ ನೇಮಕಾತಿ ಮೂಲಕ	**ಕಂಪ್ಯೂಟರ್ ಶಿಕ್ಷಕರಿಗಾಗಿ ವಿದ್ಯಾರ್ಹತೆ:** ಈ ಕೆಳಕಂಡ ಇಂಜಿನಿಯರಿಂಗ್ ವಿಷಯದಲ್ಲಿ ಸ್ನಾತಕ ಪದವಿಯನ್ನು ಪಡೆದಿರಬೇಕು ಎಂದರೆ:- (1) ಗಣಕ ವಿಜ್ಞಾನ, ಮಾಹಿತಿ ವಿಜ್ಞಾನ. **ಅಥವಾ** (2)ಬ್ಯಾಚುಲರ್ ಆಫ್ ಕಂಪ್ಯೂಟರ್ ಅಪ್ಲಿಕೇಶನ್ (ಬಿಸಿಎ) **ಅಥವಾ** (3) ಗಣಕ ವಿಜ್ಞಾನದೊಂದಿಗೆ ಅಥವಾ ಬಿ.ಎಸ್ಸಿ ಅಥವಾ ಅದಕ್ಕೆ ತತ್ಸಮಾನವಾದ ವಿದ್ಯಾರ್ಹತೆ ಹೊಂದಿರಬೇಕು. **ಮತ್ತು** ಸ್ನಾತಕ ಪದವಿ ಅಥವಾ ಪದವಿ ಪೂರ್ವ ಕೋರ್ಸ್ ಅಥವಾ ಎಸ್‌ಎಸ್‌ಎಲ್‌ಸಿಯಲ್ಲಿ ಕನ್ನಡವನ್ನು ಒಂದು ಭಾಷೆಯನ್ನಾಗಿ ಅಭ್ಯಾಸ ಮಾಡಿರಬೇಕು ಅಥವಾ ಕನ್ನಡದಲ್ಲಿ ಡಿಪ್ಲೊಮೊ ಹೊಂದಿರಬೇಕು ಅಥವಾ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ/ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು ಇವರು ನಡೆಸುವ ಕನ್ನಡ ಪ್ರಮಾಣಪತ್ರ ಕೋರ್ಸ್‌ನಲ್ಲಿ (ಕಾವ/ಜಾಣ/ರತ್ನ) ಉತ್ತೀರ್ಣನಾಗಿರಬೇಕು.

35	ದೈಹಿಕ ಶಿಕ್ಷಣ ಶಿಕ್ಷಕರು	(ರೂ. 33450-62600)	811	-	ಅನುಸೂಚಿ-II ರಲ್ಲಿ ನಿರ್ದಿಷ್ಟಪಡಿಸಿದ ಪ್ರಕ್ರಿಯೆಯ ಅನುಸಾರವಾಗಿ ನೇಮಕಾತಿ ಸಮಿತಿಯ ಮುಖಾಂತರ ನೇರ ನೇಮಕಾತಿ ಮೂಲಕ	**ದೈಹಿಕ ಶಿಕ್ಷಣ ಶಿಕ್ಷಕರಿಗಾಗಿ ವಿದ್ಯಾರ್ಹತೆ:** (1) ಸ್ನಾತಕ ಪದವಿಯನ್ನು ಪಡೆದಿರಬೇಕು. **ಮತ್ತು** (2) ದೈಹಿಕ ಶಿಕ್ಷಣ ಸ್ನಾತಕ ಪದವಿಯನ್ನು ಪಡೆದಿರಬೇಕು. **ಅಥವಾ** ಸರ್ಕಾರಿ ದೈಹಿಕ ಶಿಕ್ಷಣ ಕಾಲೇಜಿನಿಂದ ದೈಹಿಕ ಶಿಕ್ಷಣದಲ್ಲಿ ಡಿಪ್ಲೊಮೊ ಹೊಂದಿರಬೇಕು. **ಮತ್ತು** ಅಭ್ಯರ್ಥಿಯು ಸ್ನಾತಕ ಪದವಿ ಅಥವಾ ಪದವಿ ಪೂರ್ವ ಕೋರ್ಸ್ ಅಥವಾ ಎಸ್‌ಎಸ್‌ಎಲ್‌ಸಿಯಲ್ಲಿ ಕನ್ನಡವನ್ನು ಒಂದು ಭಾಷೆಯನ್ನಾಗಿ ಅಭ್ಯಾಸ ಮಾಡಿರಬೇಕು ಅಥವಾ ಕನ್ನಡದಲ್ಲಿ ಡಿಪ್ಲೊಮೊ ಹೊಂದಿರಬೇಕು ಅಥವಾ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ/ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು ಇವರು ನಡೆಸುವ ಕನ್ನಡ ಪ್ರಮಾಣಪತ್ರ ಕೋರ್ಸ್‌ನಲ್ಲಿ (ಕಾವ/ಜಾಣ/ರತ್ನ) ಉತ್ತೀರ್ಣನಾಗಿರಬೇಕು. **ಟಿಪ್ಪಣಿ: ವಯೋಮಿತಿ:** 23ರಿಂದ 31ರ ವರೆಗಿನ ಸಂಖ್ಯೆಯ ಹುದ್ದೆಗಳಿಗಾಗಿ ಅನುಸೂಚಿತ ಜಾತಿಗಳು, ಅನುಸೂಚಿತ ಪಂಗಡಗಳು ಮತ್ತು ಹಿಂದುಳಿದ ವರ್ಗಗಳ ಪ್ರವರ್ಗ-I ಇವರಿಗೆ ಗರಿಷ್ಠ ವಯೋಮಿತಿಯು 45 ವರ್ಷಗಳು. ಇತರೆ ಹಿಂದುಳಿದ

						ವರ್ಗಗಳಾದ IIಎ, IIಬಿ IIIಎ, IIIಬಿ, ಇವರಿಗೆ 43 ವರ್ಷಗಳು ಹಾಗೂ ಸಾಮಾನ್ಯ ವರ್ಗದವರಿಗೆ 40 ವರ್ಷಗಳು.
36	ಕಲೆ ಮತ್ತು ಕರಕುಶಲ ಶಿಕ್ಷಕರು (ಡ್ರಾಯಿಂಗ್ ಮಾಸ್ಟರ್)	(ರೂ. 30350-58250)	797	-	ಅನುಸೂಚಿ-II ರಲ್ಲಿ ನಿರ್ದಿಷ್ಟಪಡಿಸಿದ ಪ್ರಕ್ರಿಯೆಯ ಅನುಸಾರವಾಗಿ ನೇಮಕಾತಿ ಸಮಿತಿಯ ಮುಖಾಂತರ ನೇರ ನೇಮಕಾತಿ ಮೂಲಕ	**ಕಲೆ ಮತ್ತು ಕರಕುಶಲ ಶಿಕ್ಷಕರಿಗಾಗಿ ವಿದ್ಯಾರ್ಹತೆ:-** (1) ಲಲಿತ ಕಲೆ ವಿಷಯ (ಬಿಎಫ್‌ಎ)ದಲ್ಲಿ ಸ್ನಾತಕ ಪದವಿಯನ್ನು ಪಡೆದಿರಬೇಕು. **ಅಥವಾ** ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ದೃಶ್ಯಕಲೆಯಲ್ಲಿ (ಬಿವಿಎ) ಸ್ನಾತಕ ಪದವಿಯನ್ನು ಪಡೆದಿರಬೇಕು. **ಅಥವಾ** ಕರ್ನಾಟಕ ಸರ್ಕಾರದ ಸರ್ಕಾರಿ ಆದೇಶ ಸಂಖ್ಯೆ. 27 ಎಸ್‌ಎಲ್‌ವಿ 2004 ದಿನಾಂಕ: 21.03.2006ರನ್ವಯ ಕಲೆ ಮತ್ತು ರೇಖಾಚಿತ್ರ ಶಿಕ್ಷಕರಿಗೆ ತತ್ಸಮಾನ ವಿದ್ಯಾರ್ಹತೆಯೆಂದು ಪರಿಗಣಿಸಲಾಗುವ ತಾಂತ್ರಿಕ ಪರೀಕ್ಷಾ ಮಂಡಳಿಯಿಂದ ನಡೆಸಲಾಗುವ ಮುಖ್ಯ ಕಲಾ ಪರೀಕ್ಷೆಯ (Art Master) ರೇಖಾಚಿತ್ರ ಮತ್ತು ಚಿತ್ರಕಲೆಯಲ್ಲಿ ಡಿಪ್ಲೊಮೊ/ವಾಣಿಜ್ಯದಲ್ಲಿ ಡಿಪ್ಲೊಮೊ/ಅನ್ವಯಿಕ ಕಲೆ ಮತ್ತು ಅಂಗೀಕೃತ ವಿಶ್ವವಿದ್ಯಾನಿಲಯಗಳಿಂದ ವಿಶೇಷ ಪರಿಣತಿ ಹೊಂದಿದ ಚಿತ್ರಕಲೆ ಮತ್ತು ವಿಶೇಷ ಪರಿಣಿತಿ ಹೊಂದಿದ ಚಿತ್ರಕಲೆಯಲ್ಲಿ ಡಿಪ್ಲೋಮಾ ರಲ್ಲಿ ಉತ್ತೀರ್ಣನಾಗಿರಬೇಕು.

						ಮತ್ತು ಅಭ್ಯರ್ಥಿಯು ಸ್ನಾತಕೋತ್ತರ ಪದವಿ ಅಥವಾ ಸ್ನಾತಕ ಪದವಿ ಅಥವಾ ಪದವಿ ಪೂರ್ವ ಕೋರ್ಸ್ ಅಥವಾ ಎಸ್‌ಎಸ್‌ಎಲ್‌ಸಿಯಲ್ಲಿ ಕನ್ನಡವನ್ನು ಒಂದು ಭಾಷೆಯಾಗಿ ಅಭ್ಯಾಸಮಾಡಿರಬೇಕು ಅಥವಾ ಕನ್ನಡ ಡಿಪ್ಲೊಮೊ ಹೊಂದಿರಬೇಕು ಅಥವಾ ಕರ್ನಾಟಕ ಪರೀಕ್ಷಾ ಮಂಡಳಿ/ ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು ಇವರಿಂದ ನಡೆಸಲಾದ ಕನ್ನಡ ಪ್ರಮಾಣಪತ್ರ ಕೋರ್ಸ್‌ನಲ್ಲಿ (ಕಾವ/ಜಾಣ /ರತ್ನ) ಉತ್ತೀರ್ಣನಾಗಿರಬೇಕು. **ಟಿಪ್ಪಣಿ:** ಸರ್ಕಾರಿ ಆದೇಶ ಸಂಖ್ಯೆ ಜಿ.ಓ. ನಂ. ಇಡಿ 27 ಎಸ್‌ಎಲ್‌ವಿ 2004, ದಿನಾಂಕ : 21.03.2006ರನ್ವಯ ತಾಂತ್ರಿಕ ಪರೀಕ್ಷಾ ಮಂಡಳಿಯಿಂದ ನಡೆಸಲಾದ ಚಿತ್ರಕಲೆಯಲ್ಲಿ ಡಿಪ್ಲೊಮೊ/ವಾಣಿಜ್ಯ/ಅನ್ವಯಿಕ ಕಲೆಯಲ್ಲಿ ಡಿಪ್ಲೊಮೊಗಳು ಅಥವಾ ತತ್ಸಮಾನವಾದ ಪರೀಕ್ಷೆಗಳು.
37	ಸಂಗೀತ ಶಿಕ್ಷಕರು	(ರೂ. 33450-62600)	499	-		**ಸಂಗೀತ ಶಿಕ್ಷಕರಿಗಾಗಿ:-** 1) ಕರ್ನಾಟಕ ಸರ್ಕಾರದಿಂದ ನಡೆಸಲಾಗುವ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅಥವಾ ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದ ಅದಕ್ಕೆ ತತ್ಸಮಾನದ ಪರೀಕ್ಷೆಯಲ್ಲಿ ಉತ್ತೀರ್ಣನಾಗಿರಬೇಕು.

						ಮತ್ತು ಸರ್ಕಾರದಿಂದ ನಡೆಸಲಾಗುವ ಸಂಗೀತ ಪರೀಕ್ಷೆಯಲ್ಲಿ ಪ್ರವೀಣ್ಯತಾ/ಪ್ರವೀಣ್/ ವಿದ್ವಾನ್‌ನಲ್ಲಿ ಅಥವಾ ಅದಕ್ಕೆ ತತ್ಸಮಾನವಾದ ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದ ಪರೀಕ್ಷೆಯಲ್ಲಿ ಉತ್ತೀರ್ಣನಾಗಿರಬೇಕು. ಅಭ್ಯರ್ಥಿಯು, ಸ್ನಾತಕೋತ್ತರ ಪದವಿ ಅಥವಾ ಸ್ನಾತಕ ಪದವಿ ಅಥವಾ ಪದವಿ ಪೂರ್ವ ಕೋರ್ಸ್ ಅಥವಾ ಎಸ್‌ಎಸ್‌ಎಲ್‌ಸಿಯಲ್ಲಿ ಕನ್ನಡವನ್ನು ಒಂದು ಭಾಷೆಯಾಗಿ ಅಭ್ಯಾಸಮಾಡಿರಬೇಕು ಅಥವಾ ಕನ್ನಡ ಡಿಪ್ಲೊಮೊ ಹೊಂದಿರಬೇಕು ಅಥವಾ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ/ ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು ಇವರು ನಡೆಸುವ ಕನ್ನಡ ಪ್ರಮಾಣಪತ್ರ ಕೋರ್ಸ್ (ಕಾವ/ಜಾಣ/ರತ್ನ) ನಲ್ಲಿ ಉತ್ತೀರ್ಣನಾಗಿರಬೇಕು. ಸರ್ಕಾರಿ ಆದೇಶ ಸಂಖ್ಯೆ. **ಇಡಿ 310 ಎಸ್‌ಎಲ್‌ಬಿ 91, ದಿನಾಂಕ: 16.03.1992**ರನ್ವಯ ಈ ಕೆಳಕಂಡವುಗಳು ಮೇಲೆ ನಿರ್ದಿಷ್ಟಪಡಿಸಿದ ವಿದ್ಯಾರ್ಹತೆಗಳಿಗೆ ತತ್ಸಮಾನವಾದವು. (ಎ) 3 ವರ್ಷಗಳ ಸಂಗೀತ ವಿದ್ವಾನ್ ತಮಿಳುನಾಡು ರಾಜ್ಯದ (ಗಾಯನ ಪರೀಕ್ಷೆ) (ಇರೈ ತಾಲಿ ಮನಿ) (ಬಿ) ಕರ್ನಾಟಕ ಸಂಗೀತದ ಸೆಂಟ್ರಲ್ ಕಾಲೇಜ್, ಮದ್ರಾಸ್

						ಇವರು ನಡೆಸುವ 2 ವರ್ಷಗಳ ಸಂಗೀತ ವಿದ್ವಾನ್ ಕೋರ್ಸ್. (ಸಿ) ಬೆಂಗಳೂರು ವಿಶ್ವವಿದ್ಯಾಲಯ ಸೇರಿದಂತೆ ವಿಶ್ವವಿದ್ಯಾಲಯಗಳಿಂದ ಮಾನ್ಯತೆ ಪಡೆದ ಸಂಗೀತದಲ್ಲಿ (ಗಾಯನ) ಸ್ನಾತಕೋತ್ತರ ಪದವಿ. **ಟಿಪ್ಪಣಿ:** ಎಲ್ಲಾ ವಿಷಯಗಳಲ್ಲಿ ಸಮಾನವಾದ, ಕಾರ್ಯಸಾಧನೆ ತೋರಿದ ಅಂಧ ವ್ಯಕ್ತಿಗಳಿಗೆ [Visually impaired persons] ಆದ್ಯತೆ ನೀಡಬೇಕು. **ವಯೋಮಿತಿ:** ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ, ಪ್ರವರ್ಗ-I ಇವರಿಗಾಗಿ ಗರಿಷ್ಠ ವಯೋಮಿತಿ ಕ್ರಮಸಂಖ್ಯೆ 37 ಮತ್ತು 38ರಲ್ಲಿರುವ ಹುದ್ದೆಗಳಿಗಾಗಿ 45 ವರ್ಷಗಳು ಮತ್ತು ಇತರೆ ಹಿಂದುಳಿದ ವರ್ಗಗಳಾದ IIಎ, IIಬಿ III ಎ, IIIಬಿ, ಇವರಿಗೆ 43 ವರ್ಷಗಳು ಹಾಗೂ ಸಾಮಾನ್ಯ ವರ್ಗದವರಿಗೆ 40 ವರ್ಷಗಳು.
38	ಕಛೇರಿ ಅಧೀಕ್ಷಕರು	(ರೂ. 33450-62600)	14	-	ಜ್ಯೇಷ್ಠತೆಯ ಆಧಾರದ ಮೇಲೆ ಕನಿಷ್ಠ ಐದು ವರ್ಷಗಳ ಕಾರ್ಯಾನುಭವದೊಂದಿಗೆ 80% : 5% : 15% ರ ಅನುಪಾತದಲ್ಲಿ ಕ್ರಮವಾಗಿ ಪ್ರಥಮ ದರ್ಜೆ ಸಹಾಯಕ	-

					ಮತ್ತು ಕಂಪ್ಯೂಟರ್ ಆಪರೇಟರ್, ಶೀಘ್ರಲಿಪಿಗಾರರ ಮತ್ತು ವಸತಿ ಶಾಲೆಗಳ ನಿಲಯಪಾಲಕರ ವೃಂದದಿಂದ ಬಡ್ತಿ ಮೂಲಕ. ಅರ್ಹ ಶೀಘ್ರಲಿಪಿಗಾರ ಅಭ್ಯರ್ಥಿಯು ಲಭ್ಯವಿಲ್ಲದಿದ್ದಲ್ಲಿ, ಪ್ರಥಮ ದರ್ಜೆ ಸಹಾಯಕ ಮತ್ತು ಕಂಪ್ಯೂಟರ್ ಆಪರೇಟರ್ ವೃಂದದಿಂದ ಕಚೇರಿ ಅಧೀಕ್ಷಕ ವೃಂದಕ್ಕೆ 85% ರಷ್ಟು ಬಡ್ತಿ ಮೂಲಕ ತುಂಬಬೇಕು. ಆಯಾ ವೃಂದದಲ್ಲಿ ಸೇವೆಯ ಅವಧಿಯ ಆಧಾರದ ಮೇಲೆ ಜ್ಯೇಷ್ಠತೆಯನ್ನು	
39	ವಿದ್ಯಾರ್ಥಿ ನಿಲಯ ಮೇಲ್ವಿಚಾರಕ (ವಾರ್ಡನ್)	(ರೂ. 27650-52650)	712	-	ಅನುಸೂಚಿ-II ರಲ್ಲಿ ನಿರ್ದಿಷ್ಟಪಡಿಸಿದ ಪ್ರಕ್ರಿಯೆಯ ಅನುಸಾರವಾಗಿ ನೇಮಕಾತಿ ಸಮಿತಿಯ ಮುಖಾಂತರ ನೇರ ನೇಮಕಾತಿ ಮೂಲಕ	**ವಿದ್ಯಾರ್ಥಿ ನಿಲಯ ಮೇಲ್ವಿಚಾರಕ (ವಾರ್ಡನ್)ಗಾಗಿ ವಿದ್ಯಾರ್ಹತೆ:-** 1. ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಕಲೆ ಅಥವಾ ವಿಜ್ಞಾನದಲ್ಲಿ ಸ್ನಾತಕ ಪದವಿಯನ್ನು ಪಡೆದಿರಬೇಕು. **ಮತ್ತು**

						2. ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಕಲೆ ಅಥವಾ ವಿಜ್ಞಾನದಲ್ಲಿ ಬಿ.ಇಡಿ ಪದವಿ ಪಡೆದಿರಬೇಕು. 3. ಅಭ್ಯರ್ಥಿಗಳು ಸ್ನಾತಕೋತ್ತರ ಪದವಿ ಅಥವಾ ಸ್ನಾತಕ ಪದವಿ ಅಥವಾ ಪದವಿ ಪೂರ್ವ ಕೋರ್ಸ್ ಅಥವಾ ಎಸ್‌ಎಸ್‌ಎಲ್‌ಸಿಯಲ್ಲಿ ಕನ್ನಡವನ್ನು ಒಂದು ಭಾಷೆಯಾಗಿ ಅಭ್ಯಾಸಮಾಡಿರತಕ್ಕದ್ದು ಅಥವಾ ಕನ್ನಡ ಡಿಪ್ಲೊಮೊ ಹೊಂದಿರಬೇಕು ಅಥವಾ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ/ ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು ಇವರು ನಡೆಸುವ ಕನ್ನಡ ಪ್ರಮಾಣಪತ್ರ ಕೋರ್ಸ್ (ಕಾವ/ಜಾಣ/ರತ್ನ) ನಲ್ಲಿ ಉತ್ತೀರ್ಣನಾಗಿರಬೇಕು.
40	ಪ್ರಥಮ ದರ್ಜೆ ಸಹಾಯಕರು ಮತ್ತು ಕಂಪ್ಯೂಟರ್ ಆಪರೇಟರ್	(ರೂ. 27650-52650)	716	-	ಅನುಸೂಚಿ-II ರಲ್ಲಿ ನಿರ್ದಿಷ್ಟಪಡಿಸಿದ ಪ್ರಕ್ರಿಯೆಯ ಅನುಸಾರ ನೇರ ನೇಮಕಾತಿ ಮೂಲಕ ಶೇ. ಐವತ್ತರಷ್ಟು ಮತ್ತು ಸಂಬಂಧಪಟ್ಟ ವೃಂದದಲ್ಲಿನ ಸೇವಾವಧಿಯ ಆಧಾರದ ಮೇಲೆ ನಿರ್ಧರಿಸಲಾದ ಸಂಯೋಜಿತ ಜ್ಯೇಷ್ಠತೆಯ ಆಧಾರದ ಮೇಲೆ ದ್ವಿತೀಯ ದರ್ಜೆ ಸಹಾಯಕ	**ನೇರ ನೇಮಕಾತಿಗಾಗಿ:-** ಕರ್ನಾಟಕ ಸರ್ಕಾರದ ಅಥವಾ ಸರ್ಕಾರದ ಮಾನ್ಯತೆ ಪಡೆದ ಸಂಸ್ಥೆಯಿಂದ ಒಂದು ವರ್ಷದ ಕಂಪ್ಯೂಟರ್ ಕೋರ್ಸ್‌ನಲ್ಲಿ ಪ್ರಮಾಣಪತ್ರ ಪಡೆಯುವುದರೊಂದಿಗೆ ಕಂಪ್ಯೂಟರ್ ಕಾರ್ಯದಲ್ಲಿ ಜ್ಞಾನವುಳ್ಳವರಾಗಿದ್ದು ಪದವಿಯನ್ನು ಪಡೆದಿರತಕ್ಕದ್ದು. **ಬಡ್ತಿಗಾಗಿ:-** ಕಂಪ್ಯೂಟರ್ ಜ್ಞಾನ/ ಕೌಶಲ್ಯದೊಂದಿಗೆ ದ್ವಿತೀಯ ದರ್ಜೆ ಸಹಾಯಕ ವೃಂದದಲ್ಲಿ, ಐದು ವರ್ಷಗಳಿಗೆ ಕಡಿಮೆಯಿರದಂತೆ ಸೇವೆಯನ್ನು ಸಲ್ಲಿಸಿರತಕ್ಕದ್ದು.

					ಮತ್ತು ಕಂಪ್ಯೂಟರ್ ಆಪರೇಟರ್ ವೃಂದದಿಂದ ಬಡ್ತಿ ಮೂಲಕ ಶೇ. ಐವತ್ತರಷ್ಟು ತುಂಬಬೇಕು. ಸದರಿ ಹುದ್ದೆಯಲ್ಲಿ ಬಡ್ತಿಗೆ ಸೂಕ್ತ ವ್ಯಕ್ತಿಯು ಲಭ್ಯವಿಲ್ಲದಿದ್ದಲ್ಲಿ, ನೇರ ನೇಮಕಾತಿ ಮೂಲಕ ಭರ್ತಿ ಮಾಡಬಹುದು.	
41	ಶುಶ್ರೂಷಾಧಿಕಾರಿ	(ರೂ. 33450-62600)	405	311	ಅನುಸೂಚಿ-II ರಲ್ಲಿ ನಿರ್ದಿಷ್ಟಪಡಿಸಿದ ಪ್ರಕ್ರಿಯೆಯ ಅನುಸಾರವಾಗಿ ನೇಮಕಾತಿ ಸಮಿತಿಯ ಮುಖಾಂತರ ನೇರ ನೇಮಕಾತಿ ಮೂಲಕ	**ಶುಶ್ರೂಷಾಧಿಕಾರಿಗಾಗಿ ವಿದ್ಯಾರ್ಹತೆ:-** (1) ಭಾರತೀಯ ನರ್ಸಿಂಗ್ ಕೌನ್ಸಿಲ್‌ನಿಂದ ಮಾನ್ಯತೆ ಪಡೆದ ಸಂಸ್ಥೆಯಿಂದ ಬಿ.ಎಸ್ಸಿ ನರ್ಸಿಂಗ್ ಪದವಿ ಪರೀಕ್ಷೆಯಲ್ಲಿ ಉತ್ತೀರ್ಣನಾಗಿರಬೇಕು. **ಅಥವಾ** ಪಿಯುಸಿ ಅಥವಾ ಅದಕ್ಕೆ ತತ್ಸಮಾನವಾದ ಪರೀಕ್ಷೆಯಲ್ಲಿ ಉತ್ತೀರ್ಣನಾಗಿರಬೇಕು ಮತ್ತು ಭಾರತೀಯ ನರ್ಸಿಂಗ್ ಕೌನ್ಸಿಲ್/ ಕರ್ನಾಟಕ ನರ್ಸಿಂಗ್ ಕೌನ್ಸಿಲ್‌ನಿಂದ ಮಾನ್ಯತೆ ಪಡೆದ ಸಂಸ್ಥೆಯಿಂದ ಮೂರು ವರ್ಷಗಳ (ಜನರಲ್ ನರ್ಸಿಂಗ್)/ಮೂರು ವರ್ಷಗಳ (ಜನರಲ್ ನರ್ಸಿಂಗ್) ಜಿಎನ್‌ಎಂ ಮತ್ತು ಆರು ತಿಂಗಳ ಮಿಡ್‌ವೈಫರಿ ಕೋರ್ಸ್‌ನಲ್ಲಿ ಉತ್ತೀರ್ಣನಾಗಿರಬೇಕು.

						(2) ಅಭ್ಯರ್ಥಿಗಳು ಸ್ನಾತಕೋತ್ತರ ಪದವಿ ಅಥವಾ ಸ್ನಾತಕ ಪದವಿ ಅಥವಾ ಪದವಿ ಪೂರ್ವ ಕೋರ್ಸ್ ಅಥವಾ ಎಸ್‌ಎಸ್‌ಎಲ್‌ಸಿಯಲ್ಲಿ ಕನ್ನಡವನ್ನು ಒಂದು ಭಾಷೆಯಾಗಿ ಅಭ್ಯಾಸಮಾಡಿರಬೇಕು ಅಥವಾ ಕನ್ನಡ ಡಿಪ್ಲೊಮೊ ಹೊಂದಿರಬೇಕು ಅಥವಾ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ/ ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು ಇವರು ನಡೆಸುವ ಕನ್ನಡ ಪ್ರಮಾಣಪತ್ರ ಕೋರ್ಸ್ (ಕಾವ/ಜಾಣ/ರತ್ನ) ನಲ್ಲಿ ಉತ್ತೀರ್ಣನಾಗಿರಬೇಕು.
42	ಅಡುಗೆಯವರು	(ರೂ. 18600-32600)	-	2081	ಹೊರಗುತ್ತಿಗೆ ಮೂಲಕ	**ವಿದ್ಯಾರ್ಹತೆ:** ಅಡುಗೆ ಮಾಡುವುದರಲ್ಲಿ ಎರಡು ವರ್ಷಗಳ ಅನುಭವದೊಂದಿಗೆ ಎಸ್‌ಎಸ್‌ಎಲ್‌ಸಿ ಯಲ್ಲಿ ಉತ್ತೀರ್ಣನಾಗಿರಬೇಕು.
43	ಸಹಾಯಕ ಅಡುಗೆಯವರು	(ರೂ. 17000-28950)	-	1390	ಹೊರಗುತ್ತಿಗೆ ಮೂಲಕ	**ವಿದ್ಯಾರ್ಹತೆ:** ಎಸ್‌ಎಸ್‌ಎಲ್‌ಸಿ (ಹತ್ತನೇ ತರಗತಿ ಪರೀಕ್ಷೆ)ಯಲ್ಲಿ ಉತ್ತೀರ್ಣನಾಗಿರಬೇಕು ಅಥವಾ ಅನುತ್ತೀರ್ಣರಾದವರನ್ನು ಪರಿಗಣಿಸಬಹುದು.
44	ಕಸ ಗುಡಿಸುವವರು (ಜಾಡಮಾಲಿ)	(ರೂ. 17000-28950)	-	2053	ಹೊರಗುತ್ತಿಗೆ ಮೂಲಕ	ಎಸ್‌ಎಸ್‌ಎಲ್‌ಸಿಯಲ್ಲಿಉತ್ತೀರ್ಣನಾಗಿರಬೇಕು.

45	ಗ್ರಂಥ ಪಾಲಕರು	(ರೂ. 30350-58250)	14	-	ನೇಮಕಾತಿ ಸಮಿತಿಯ ಮುಖಾಂತರ ನೇರ ನೇಮಕಾತಿ ಮೂಲಕ	**ವಿದ್ಯಾರ್ಹತೆ:** 1) ಮಾನ್ಯತೆ ಪಡೆದ ಸಂಸ್ಥೆಯಿಂದ ಗ್ರಂಥಾಲಯ ವಿಜ್ಞಾನದಲ್ಲಿ ವಿಶ್ವವಿದ್ಯಾಲಯ ಪದವಿಯನ್ನು ಪಡೆದಿರಬೇಕು. **ಅಥವಾ** ಮಾನ್ಯತೆ ಪಡೆದ ಸಂಸ್ಥೆಯಿಂದ ಗ್ರಂಥಾಲಯ ವಿಜ್ಞಾನದಲ್ಲಿ ಒಂದು ವರ್ಷದ ಡಿಪ್ಲೊಮಾ ಪದವಿಯನ್ನು ಪಡೆದಿರಬೇಕು. 2) ಇಂಗ್ಲೀಷ್/ಹಿಂದಿ/ಪ್ರಾದೇಶಿಕ ಭಾಷೆಯ ಕಾರ್ಯದಲ್ಲಿ ಜ್ಞಾನವನ್ನು ಹೊಂದಿರುವುದು ಅಪೇಕ್ಷಣೀಯ. 1) ವಸತಿ ಶಾಲೆಗಳಲ್ಲಿ ಕೆಲಸ ಮಾಡಿದ ಅನುಭವ. 2) ಕಂಪ್ಯೂಟರ್ ಬಳಕೆ ಬಗ್ಗೆ ಜ್ಞಾನ ಹೊಂದಿರಬೇಕು.

46	ಉಗ್ರಾಣ ಮೇಲ್ವಿಚಾರಕ (ಸ್ಟೋರ್ ಕಂಟ್ರೋಲರ್)	(ರೂ. 30350-58250)	-	14	ಹೊರಗುತ್ತಿಗೆ ಮೂಲಕ	**ವಿದ್ಯಾರ್ಹತೆ:** - ಕರ್ನಾಟಕ ಸರ್ಕಾರದ ಅಥವಾ ಸಂಘದಿಂದ ಮಾನ್ಯತೆ ಪಡೆದ ಸಂಸ್ಥೆಯಿಂದ ಪಡೆದ ಒಂದು ವರ್ಷದ ಕಂಪ್ಯೂಟರ್ ಕೋರ್ಸ್ ಪ್ರಮಾಣ ಪತ್ರದೊಂದಿಗೆ ಕಂಪ್ಯೂಟರ್ ಕೆಲಸದ ಜ್ಞಾನದೊಂದಿಗೆ ಸ್ನಾತಕ ಪದವಿಯನ್ನು ಪಡೆದಿರಬೇಕು. **ಮತ್ತು** ಕರ್ನಾಟಕ ಸರ್ಕಾರದ ಅಥವಾ ಸಂಘದಿಂದ ಮಾನ್ಯತೆ ಪಡೆದ ಸಂಸ್ಥೆಯಿಂದ ಪಡೆದ ಒಂದು ವರ್ಷದ ಕಂಪ್ಯೂಟರ್ ಕೋರ್ಸ್ ಪ್ರಮಾಣ ಪತ್ರದೊಂದಿಗೆ ಕಂಪ್ಯೂಟರ್ ಕೆಲಸದ ಬಗ್ಗೆ ಜ್ಞಾನವುಳ್ಳವರಾಗಿರಬೇಕು.
47	ಗಣಕಯಂತ್ರ ಸಹಾಯಕ	(ರೂ. 21400-42000)	-	14	ಹೊರಗುತ್ತಿಗೆ ಮೂಲಕ	**ವಿದ್ಯಾರ್ಹತೆ:** ಪದವಿ ಪೂರ್ವ ಕೋರ್ಸ್ ಪರೀಕ್ಷೆಯಲ್ಲಿ ಅಥವಾ ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದ ತತ್ಸಮಾನವಾದ ಪರೀಕ್ಷೆಯಲ್ಲಿ ಉತ್ತೀರ್ಣನಾಗಿರಬೇಕು. ಕರ್ನಾಟಕ ಸರ್ಕಾರ ಅಥವಾ ಸಂಘದಿಂದ ಮಾನ್ಯತೆ ಪಡೆದ ಸಂಸ್ಥೆಯಿಂದ ಪಡೆದ ಆರು ತಿಂಗಳ ಕಂಪ್ಯೂಟರ್ ಕೋರ್ಸ್ ಪ್ರಮಾಣ ಪತ್ರದೊಂದಿಗೆ ಕಂಪ್ಯೂಟರ್ ಕೆಲಸದ ಬಗ್ಗೆ ಜ್ಞಾನವುಳ್ಳವರಾಗಿರಬೇಕು.

48	ಪ್ರಯೋಗಾಲಯ ಸಹಾಯಕ	(ರೂ. 21400-42000)	14	-	ನೇಮಕಾತಿ ಸಮಿತಿಯ ಮುಖಾಂತರ ನೇರ ನೇಮಕಾತಿ ಮೂಲಕ	**ವಿದ್ಯಾರ್ಹತೆ:** ಪ್ರಯೋಗಾಲಯ ತಾಂತ್ರಿಕತೆಯಲ್ಲಿ ಪ್ರಮಾಣ ಪತ್ರ/ಡಿಪ್ಲೊಮೊದೊಂದಿಗೆ ದ್ವಿತೀಯ ಪಿಯುಸಿಯಲ್ಲಿ ಉತ್ತೀರ್ಣನಾಗಿರಬೇಕು. **ಅಥವಾ** ಮಾನ್ಯತೆ ಪಡೆದ ಮಂಡಳಿ/ ವಿಶ್ವವಿದ್ಯಾಲಯದಿಂದ ವಿಜ್ಞಾನ ವಿಷಯದಲ್ಲಿ 12ನೇ ತರಗತಿಯಲ್ಲಿ ಉತ್ತೀರ್ಣನಾಗಿರಬೇಕು.
49	ಚಾಲಕರುಗಳು	(ರೂ. 21400-42000)	-	14	ಹೊರಗುತ್ತಿಗೆ ಮೂಲಕ	**ವಿದ್ಯಾರ್ಹತೆ:** 1. ಎಸ್ಎಸ್ಎಲ್‌ಸಿ ಪರೀಕ್ಷೆಯಲ್ಲಿ (10ನೇ ತರಗತಿ) **ಅಥವಾ** ಅದಕ್ಕೆ ತತ್ಸಮಾನವಾದ ಪರೀಕ್ಷೆಯಲ್ಲಿ ಉತ್ತೀರ್ಣನಾಗಿರಬೇಕು. 2. ಪ್ರಸ್ತುತ ಸಿಂಧುವಾದ ಲಘು ಮೋಟಾರು ವಾಹನ ಲೈಸೆನ್ಸ್ ಪಡೆದಿರತಕ್ಕದ್ದು. 3.ಸಂಘದಿಂದ ಮಾನ್ಯತೆ ಪಡೆದ ಸಂಸ್ಥೆಗಳಲ್ಲಿ ಲಘು ಮೋಟಾರು ವಾಹನ ಚಾಲನೆಯಲ್ಲಿ ಐದು ವರ್ಷಗಳಿಗಿಂತ ಕಡಿಮೆಯಿರದಂತೆ ಅನುಭವವನ್ನು ಹೊಂದಿರತಕ್ಕದ್ದು.
50	ಎಲೆಕ್ಟ್ರಿಕಲ್/ಪ್ಲಂಬರ್ (ಕೊಳಾಯಿಗಾರ)	(ರೂ. 17000-28950)	-	10	ಹೊರಗುತ್ತಿಗೆ ಮೂಲಕ	**ವಿದ್ಯಾರ್ಹತೆ:** ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದ ಯಾವುದೇ ಸಂಸ್ಥೆಯಿಂದ ಐಟಿಐ ಅಥವಾ ಅದಕ್ಕೆ ತತ್ಸಮಾನವಾದ ವಿದ್ಯಾರ್ಹತೆ ಹೊಂದಿರಬೇಕು.

51	ಕಾವಲುಗಾರ/ಗ್ರೂಪ್ ಡಿ	(ರೂ. 17000-28950)	-	2109	ಹೊರಗುತ್ತಿಗೆಯಿಂದ ಮತ್ತು ಕರ್ನಾಟಕ ಸಿವಿಲ್ ಸೇವೆಗಳು (ಅನುಕಂಪ ಆಧಾರದ ಮೇಲೆ ನೇಮಕಾತಿ) ನಿಯಮಗಳು, 1996ರ ಉಪಬಂಧಗಳಿಗೆ ಅನುಸಾರವಾಗಿ ನೇರ ನೇಮಕಾತಿ.	**ವಿದ್ಯಾರ್ಹತೆ:** ಎಸ್‌ಎಸ್‌ಎಲ್‌ಸಿ (10ನೇ ತರಗತಿ ಪರೀಕ್ಷೆಯಲ್ಲಿ) ಉತ್ತೀರ್ಣನಾಗಿರತಕ್ಕದ್ದು ಅಥವಾ ಅದರಲ್ಲಿ ಅನುತ್ತೀರ್ಣರಾದವರನ್ನು ಪರಿಗಣಿಸಬಹುದು.

"ಮೊರಾರ್ಜಿ ದೇಸಾಯಿ ವಸತಿ ಪದವಿ ಪೂರ್ವ ಕಾಲೇಜುಗಳಿಗಾಗಿ ಸಿಬ್ಬಂದಿ"

ಕ್ರಮ ಸಂಖ್ಯೆ	ಹುದ್ದೆಗಳ ಪ್ರವರ್ಗ ಮತ್ತು ವೇತನ ಶ್ರೇಣಿ		ಹುದ್ದೆಗಳ ಸಂಖ್ಯೆ		ನೇಮಕಾತಿ ವಿಧಾನ	ಹುದ್ದೆಗಾಗಿ ಪ್ರಸ್ತಾವಿಸಲಾದ ವಿದ್ಯಾರ್ಹತೆ
	ಹುದ್ದೆ	ವೇತನ ಶ್ರೇಣಿ (ರೂಪಾಯಿಗಳಲ್ಲಿ)	ಖಾಯಂ	ತಾತ್ಕಾಲಿಕ		
1	2	3	4	5	6	7
52	ಮೊರಾರ್ಜಿ ದೇಸಾಯಿ ವಸತಿ ಪದವಿ ಪೂರ್ವ ವಿಜ್ಞಾನ ಕಾಲೇಜುಗಳ ಪ್ರಾಂಶುಪಾಲರು	(ರೂ. 56800-99600)	26	-	ಅನುಸೂಚಿ-II ರಲ್ಲಿ ನಿರ್ದಿಷ್ಟಪಡಿಸಿದ ಪ್ರಕ್ರಿಯೆಯ ಅನುಸಾರವಾಗಿ ನೇಮಕಾತಿ ಸಮಿತಿಯ ಮುಖಾಂತರ ನೇರ ನೇಮಕಾತಿ ಮೂಲಕ ಶೇ. ಐವತ್ತರಷ್ಟು ಮತ್ತು ಉಪನ್ಯಾಸಕರುಗಳ ಸಂಯೋಜಿತ ಜ್ಯೇಷ್ಠತೆಯಿಂದ ಬಡ್ತಿ ಮೂಲಕ ಶೇ. ಐವತ್ತರಷ್ಟು ತುಂಬಬೇಕು.	**ನೇರ ನೇಮಕಾತಿಗಾಗಿ:-** (1) ಈ ಕೆಳಕಂಡ ಯಾವುದೇ ಒಂದು ವಿಷಯದಲ್ಲಿ ಕನಿಷ್ಠ ದ್ವಿತೀಯ ದರ್ಜೆಯಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದಿರಬೇಕು. ಎಂದರೆ;- ಭೌತಶಾಸ್ತ್ರ, ರಸಾಯನಶಾಸ್ತ್ರ, ಗಣಿತ, ಸಸ್ಯಶಾಸ್ತ್ರ , ಪ್ರಾಣಿಶಾಸ್ತ್ರ ಮತ್ತು ಕಂಪ್ಯೂಟರ್ ವಿಜ್ಞಾನದ ವಿಷಯದ ಸಂಬಂಧದಲ್ಲಿ

						ಕಂಪ್ಯೂಟರ್ ವಿಜ್ಞಾನ. ಅಭ್ಯರ್ಥಿಯು ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಗಣಕ ವಿಜ್ಞಾನದಲ್ಲಿ ಎಂ.ಎಸ್ಸಿ ಅಥವಾ ಎಂ.ಸಿಎ ಪರೀಕ್ಷೆಯಲ್ಲಿ ಉತ್ತೀರ್ಣನಾಗಿರಬೇಕು ಅಥವಾ ಗಣಕ ವಿಜ್ಞಾನ ಅಥವಾ ಮಾಹಿತಿ ವಿಜ್ಞಾನ ಇಂಜಿನಿಯರಿಂಗ್‌ನಲ್ಲಿ ಮಾಸ್ಟರ್ ಪದವಿಯನ್ನು ಪಡೆದಿರಬೇಕು. ಸಸ್ಯಶಾಸ್ತ್ರ ಅಥವಾ ಪ್ರಾಣಿಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿಯಲ್ಲಿ ಉತ್ತೀರ್ಣರಾಗಿರುವ ಅಭ್ಯರ್ಥಿಗಳು, ಸ್ನಾತಕ ಪದವಿ ಕೋರ್ಸ್‌ನಲ್ಲಿ ಸಸ್ಯಶಾಸ್ತ್ರ ಮತ್ತು ಪ್ರಾಣಿಶಾಸ್ತ್ರ ಎರಡರನ್ನೂ ಐಚ್ಛಿಕ ವಿಷಯಗಳನ್ನಾಗಿ ಅಭ್ಯಾಸ ಮಾಡಿರಬೇಕು. **ಮತ್ತು** (2) ಕಂಪ್ಯೂಟರ್ ವಿಜ್ಞಾನದ ಅಭ್ಯರ್ಥಿಗಳನ್ನು ಹೊರತುಪಡಿಸಿ, ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ವಿಜ್ಞಾನ ಪದ್ಧತಿ [Method]ಯಲ್ಲಿ ಬಿ.ಇಡಿ

						ಸ್ನಾತಕ ಪದವಿಯನ್ನು ಪಡೆದಿರಬೇಕು. **ಮತ್ತು** (3) ಸ್ನಾತಕ ಪದವಿ ಮತ್ತು ಸ್ನಾತಕೋತ್ತರ ಪದವಿಯಲ್ಲಿ ಇಂಗ್ಲೀಷ್ ಮಾಧ್ಯಮದಲ್ಲಿಯೇ ಅಭ್ಯಸಿಸಿರಬೇಕು. (4) ಅಭ್ಯರ್ಥಿಯು, ಸ್ನಾತಕ ಪದವಿ ಅಥವಾ ಪದವಿ ಪೂರ್ವ ಕೋರ್ಸ್ ಅಥವಾ ಎಸ್‌ಎಸ್‌ಎಲ್‌ಸಿಯಲ್ಲಿ ಕನ್ನಡವನ್ನು ಒಂದು ಭಾಷೆಯಾಗಿ ಅಭ್ಯಾಸಮಾಡಿರಬೇಕು ಅಥವಾ ಕನ್ನಡದಲ್ಲಿ ಡಿಪ್ಲೊಮೊ ಪಡೆದಿರಬೇಕು. ಅಥವಾ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ/ ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು ಇವರು ನಡೆಸುವ ಕನ್ನಡ ಪ್ರಮಾಣಪತ್ರ ಕೋರ್ಸ್‌ನಲ್ಲಿ (ಕಾವ/ಜಾಣ/ರತ್ನ) ಉತ್ತೀರ್ಣನಾಗಿರಬೇಕು. (5) ಈ ಕೆಳಕಂಡ ಯಾವುದೇ ಒಂದು ವಿಷಯದಲ್ಲಿ ಎಂದರೆ,- ಭೌತಶಾಸ್ತ್ರ

						ಅಥವಾ ರಸಾಯನಶಾಸ್ತ್ರ ಅಥವಾ ಗಣಿತ ಶಾಸ್ತ್ರ ಅಥವಾ ಜೀವ ಶಾಸ್ತ್ರ ಅಥವಾ ಗಣಕ ವಿಜ್ಞಾನ. ಸರ್ಕಾರಿ ಅಥವಾ ಅನುದಾನಿತ ಅಥವಾ ಅನುದಾನ ರಹಿತ ಪದವಿ ಪೂರ್ವ ಅಥವಾ ಪದವಿ ಕಾಲೇಜುಗಳಲ್ಲಿ ಉಪನ್ಯಾಸಕರಾಗಿ ಐದು ವರ್ಷಗಳಿಗೆ ಕಡಿಮೆಯಿರದಂತೆ ಸೇವೆ ಸಲ್ಲಿಸಿರತಕ್ಕದ್ದು. **ವಯೋಮಿತಿ:** ಎಸ್‌ಸಿ, ಎಸ್‌ಟಿ ಮತ್ತುಪ್ರವರ್ಗ-Iರ ಅಭ್ಯರ್ಥಿಗಳಿಗೆ ಪ್ರಾಂಶುಪಾಲರ ಹುದ್ದೆಗಾಗಿ ಗರಿಷ್ಠ ವಯೋಮಿತಿ 45 ವರ್ಷಗಳು ಮತ್ತು ಇತರೆ ಹಿಂದುಳಿದ ವರ್ಗಗಳಾದ ಪ್ರವರ್ಗ IIಎ, IIಬಿ III ಎ, IIIಬಿ, ಇವರಿಗೆ 43 ವರ್ಷಗಳು ಮತ್ತು ಸಾಮಾನ್ಯ ವರ್ಗದವರಿಗೆ 40 ವರ್ಷಗಳು. **ಬಡ್ತಿಗಾಗಿ:** ಕನ್ನಡ ಅಥವಾ ಇಂಗ್ಲೀಷ್ ಅಥವಾ

						ಭೌತಶಾಸ್ತ್ರ ಅಥವಾ ಗಣಿತ ಶಾಸ್ತ್ರ ಅಥವಾ ಜೀವಶಾಸ್ತ್ರ ಅಥವಾ ಸಂದರ್ಭಾನುಸಾರ ಗಣಕ ವಿಜ್ಞಾನದಲ್ಲಿ ಉಪನ್ಯಾಸಕ ಹುದ್ದೆಯ ಪ್ರವರ್ಗದಲ್ಲಿ ಐದು ವರ್ಷಗಳಿಗೆ ಕಡಿಮೆಯಿರದಂತೆ ಸೇವೆ ಸಲ್ಲಿಸಿರಬೇಕು.
53	ಕನ್ನಡ ಭಾಷಾ ಉಪನ್ಯಾಸಕರು	(ರೂ. 43100-83900)	26	-	ಅನುಸೂಚಿ-II ರಲ್ಲಿ ನಿರ್ದಿಷ್ಟಪಡಿಸಿದ ಪ್ರಕ್ರಿಯೆಯ ಅನುಸಾರವಾಗಿ ನೇಮಕಾತಿ ಸಮಿತಿಯ ಮುಖಾಂತರ ನೇರ ನೇಮಕಾತಿ ಮೂಲಕ ಶೇ. ಐವತ್ತರಷ್ಟು. ಮತ್ತು ಕೆಆರ್‌ಇಐಎಸ್ ವಸತಿ ಶಾಲೆಗಳಲ್ಲಿನ ಕನ್ನಡ ಭಾಷಾ ಶಿಕ್ಷಕರುಗಳ ವೃಂದದಿಂದ ಬಡ್ತಿ ಮೂಲಕ ಶೇ. ಐವತ್ತರಷ್ಟು ತುಂಬಬೇಕು. ಪರಂತು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ (ವೃಂದ ಮತ್ತು ನೇಮಕಾತಿ) (2ನೇ ತಿದ್ದುಪಡಿ) ವಿನಿಯಮಗಳು, 2011ರ ಪ್ರಾರಂಭದಂದು ಇದ್ದಂತೆ 26 ಹುದ್ದೆಗಳಿಗಾಗಿನ ನೇಮಕಾತಿ ಭರ್ತಿಯನ್ನು ನೇರ ನೇಮಕಾತಿಯ ಮೂಲಕ ಮಾಡತಕ್ಕದ್ದು.	**ನೇರ ನೇಮಕಾತಿಗಾಗಿ:** 1. ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಕನ್ನಡ ವಿಷಯದಲ್ಲಿ ಕನಿಷ್ಠ ದ್ವಿತೀಯ ದರ್ಜೆಯಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದಿರಬೇಕು ಅಥವಾ ಕನ್ನಡ ಮತ್ತು ಜಾನಪದ ಅಥವಾ ಜನಪದ ಸಾಹಿತ್ಯ, ಕನ್ನಡ ಸಾಹಿತ್ಯ ಮತ್ತು ಶಾಸನ ಶಾಸ್ತ್ರ, ಕನ್ನಡ ಸಾಹಿತ್ಯ ಮತ್ತು ಭಾಷಾ ಶಾಸ್ತ್ರ, ಕನ್ನಡ ಸಾಹಿತ್ಯ ಭಾಷಾಂತರ ಮತ್ತು ತೌಲನಿಕ ಅಧ್ಯಯನ ವಿಷಯದಲ್ಲಿ ಕನ್ನಡ ಭಾಷಾ ಶಿಕ್ಷಕರಾಗಿರಬೇಕು. 2. ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಕನ್ನಡ ಪದ್ಧತಿ [Method] ಯಲ್ಲಿ ಬಿ.ಇಡಿ

						ಪದವಿಯನ್ನು ಪಡೆದಿರಬೇಕು. **ಬಡ್ತಿಗಾಗಿ:** 1. ನೇರ ನೇಮಕಾತಿಗಾಗಿ ನಿರ್ದಿಷ್ಟಪಡಿಸಿದ ವಿದ್ಯಾರ್ಹತೆಯನ್ನು ಹೊಂದಿರಬೇಕು. **ಮತ್ತು** ಕೆಆರ್‌ಇಐಎಸ್ ವಸತಿ ಶಾಲೆಗಳಲ್ಲಿ ಕನ್ನಡ ಭಾಷಾ ಶಿಕ್ಷಕರಾಗಿ ಏಳು ವರ್ಷಗಳಿಗೆ ಕಡಿಮೆಯಿರದಂತೆ ಸೇವೆ ಸಲ್ಲಿಸಿರಬೇಕು.
54	ಇಂಗ್ಲೀಷ್ ಭಾಷಾ ಉಪನ್ಯಾಸಕರು	(ರೂ. 43100-83900)	26	-	ಅನುಸೂಚಿ-II ರಲ್ಲಿ ನಿರ್ದಿಷ್ಟಪಡಿಸಿದ ಪ್ರಕ್ರಿಯೆಯ ಅನುಸಾರವಾಗಿ ನೇಮಕಾತಿ ಸಮಿತಿಯ ಮುಖಾಂತರ ನೇರ ನೇಮಕಾತಿ ಮೂಲಕ ಶೇ. ಐವತ್ತರಷ್ಟು.	**ನೇರ ನೇಮಕಾತಿಗಾಗಿ:** 1. ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಇಂಗ್ಲೀಷ್ ಭಾಷೆಯಲ್ಲಿ ಕನಿಷ್ಠ ದ್ವಿತೀಯ ದರ್ಜೆಯಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದಿರಬೇಕು.
					ಮತ್ತು ಕೆಆರ್‌ಇಐಎಸ್ ವಸತಿ ಶಾಲೆಗಳಲ್ಲಿನ ಇಂಗ್ಲೀಷ್ ಭಾಷಾ ಶಿಕ್ಷಕರುಗಳ ವೃಂದದಿಂದ ಬಡ್ತಿ ಮೂಲಕ ಶೇ. ಐವತ್ತರಷ್ಟು ತುಂಬಬೇಕು.	2. ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಇಂಗ್ಲೀಷ್ ಪದ್ಧತಿ [Method] ಯಲ್ಲಿ ಬಿ.ಇಡಿ ಪದವಿಯನ್ನು ಪಡೆದಿರಬೇಕು.

					ಪರಂತು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ (ವೃಂದ ಮತ್ತು ನೇಮಕಾತಿ) (2ನೇ ತಿದ್ದುಪಡಿ) ವಿನಿಯಮಗಳು, 2011ರ ಪ್ರಾರಂಭದಂದು ಇದ್ದಂತೆ 26 ಹುದ್ದೆಗಳಿಗಾಗಿನ ನೇಮಕಾತಿಯನ್ನು ನೇರ ನೇಮಕಾತಿಯ ಮೂಲಕ ಮಾಡತಕ್ಕದ್ದು.	**ಮತ್ತು** 3. ಅಭ್ಯರ್ಥಿಯು ಸ್ನಾತಕೋತ್ತರ ಪದವಿ ಅಥವಾ ಸ್ನಾತಕ ಪದವಿ ಅಥವಾ ಪದವಿ ಪೂರ್ವ ಕೋರ್ಸ್‌ನಲ್ಲಿ ಅಥವಾ ಎಸ್‌ಎಸ್‌ಎಲ್‌ಸಿಯಲ್ಲಿ ಕನ್ನಡವನ್ನು ಒಂದು ಭಾಷೆಯಾಗಿ ಅಧ್ಯಯನ ಮಾಡಿರಬೇಕು ಅಥವಾ ಕನ್ನಡದಲ್ಲಿ ಡಿಪ್ಲೊಮೊ ಪಡೆದಿರಬೇಕು ಅಥವಾ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ/ ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು ಇವರು ನಡೆಸುವ ಕನ್ನಡ ಪ್ರಮಾಣಪತ್ರ ಕೋರ್ಸ್‌ನಲ್ಲಿ (ಕಾವ/ಜಾಣ/ರತ್ನ) ಉತ್ತೀರ್ಣನಾಗಿರಬೇಕು. **ಬಡ್ತಿಗಾಗಿ:** 1. ನೇರ ನೇಮಕಾತಿಗಾಗಿ ನಿರ್ದಿಷ್ಟಪಡಿಸಿದ ವಿದ್ಯಾರ್ಹತೆಯನ್ನು ಹೊಂದಿರಬೇಕು. **ಮತ್ತು** 2. ಕೆಆರ್‌ಇಐಎಸ್ ವಸತಿ ಶಿಕ್ಷಣ

						ಶಾಲೆಗಳಲ್ಲಿ ಇಂಗ್ಲೀಷ್ ಭಾಷಾ ಶಿಕ್ಷಕರಾಗಿ ಏಳು ವರ್ಷಗಳಿಗೆ ಕಡಿಮೆಯಿರದಂತೆ ಸೇವೆ ಸಲ್ಲಿಸಿರಬೇಕು.
55	ಭೌತಶಾಸ್ತ್ರ ಉಪನ್ಯಾಸಕರು	(ರೂ. 43100-83900)	26	-	ಅನುಸೂಚಿ-II ರಲ್ಲಿ ನಿರ್ದಿಷ್ಟಪಡಿಸಿದ ಪ್ರಕ್ರಿಯೆಯ ಅನುಸಾರವಾಗಿ ನೇಮಕಾತಿ ಸಮಿತಿಯ ಮುಖಾಂತರ ನೇರ ನೇಮಕಾತಿ ಮೂಲಕ ಶೇ. ಐವತ್ತರಷ್ಟು. ಮತ್ತು ಕೆಆರ್‌ಇಐಎಸ್ ವಸತಿ ಶಾಲೆಗಳಲ್ಲಿನ ಶಿಕ್ಷಕರ ವೃಂದದಿಂದ ಬಡ್ತಿ ಮೂಲಕ ಶೇ. ಐವತ್ತರಷ್ಟು ತುಂಬಬೇಕು. (ಭೌತಶಾಸ್ತ್ರ ಮತ್ತು ಗಣಿತಶಾಸ್ತ್ರದಲ್ಲಿ ಬೋಧನೆ ಮಾಡಿರಬೇಕು) ಪರಂತು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ (ವೃಂದ ಮತ್ತು ನೇಮಕಾತಿ) (2ನೇ ತಿದ್ದುಪಡಿ) ವಿನಿಯಮಗಳು, 2011ರ ಪ್ರಾರಂಭದಂದು ಇದ್ದಂತೆ 26 ಹುದ್ದೆಗಳಿಗಾಗಿನ ನೇಮಕಾತಿಯನ್ನು ನೇರ ನೇಮಕಾತಿಯ ಮೂಲಕ ಮಾಡತಕ್ಕದ್ದು.	**ನೇರ ನೇಮಕಾತಿಗಾಗಿ:** 1. ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಭೌತಶಾಸ್ತ್ರದಲ್ಲಿ ಕನಿಷ್ಠ ದ್ವಿತೀಯ ದರ್ಜೆಯಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದಿರಬೇಕು. 2.ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ವಿಜ್ಞಾನ ಪದ್ಧತಿ [Method] ಯಲ್ಲಿ ಬಿ.ಇಡಿ ಪದವಿಯನ್ನು ಪಡೆದಿರಬೇಕು. 3. ಸ್ನಾತಕ ಪದವಿ ಮತ್ತು ಸ್ನಾತಕೋತ್ತರ ಪದವಿಯನ್ನು ಇಂಗ್ಲೀಷ್ ಮಾಧ್ಯಮದಲ್ಲಿ ಮಾತ್ರ ಅಧ್ಯಯನ ಮಾಡಿರಬೇಕು. **ಮತ್ತು** 4. ಅಭ್ಯರ್ಥಿಯು, ಸ್ನಾತಕ ಪದವಿ ಅಥವಾ ಪದವಿ ಪೂರ್ವ ಕೋರ್ಸ್‌ನಲ್ಲಿ ಅಥವಾ ಎಸ್‌ಎಸ್‌ಎಲ್‌ಸಿಯಲ್ಲಿ ಕನ್ನಡವನ್ನು ಒಂದು ಭಾಷೆಯಾಗಿ

						ಅಧ್ಯಯನ ಮಾಡಿರಬೇಕು ಅಥವಾ ಕನ್ನಡದಲ್ಲಿ ಡಿಪ್ಲೊಮೊ ಪಡೆದಿರಬೇಕು ಅಥವಾ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ/ ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು ಇವರು ನಡೆಸುವ ಕನ್ನಡ ಪ್ರಮಾಣಪತ್ರ ಕೋರ್ಸ್‌ನಲ್ಲಿ(ಕಾವ/ ಜಾಣ/ರತ್ನ) ಉತ್ತೀರ್ಣ ನಾಗಿರಬೇಕು. **ಬಡ್ತಿಗಾಗಿ:** 1. ನೇರ ನೇಮಕಾತಿಗಾಗಿ ನಿರ್ದಿಷ್ಟಪಡಿಸಿದ ವಿದ್ಯಾರ್ಹತೆಯನ್ನು ಹೊಂದಿರಬೇಕು. **ಮತ್ತು** 2. ಕೆಆರ್‌ಇಐಎಸ್ ವಸತಿ ಶಾಲೆಗಳಲ್ಲಿ ಭೌತಶಾಸ್ತ್ರ ಮತ್ತು ಗಣಿತ ಶಾಸ್ತ್ರ ಶಿಕ್ಷಕರಾಗಿ ಏಳು ವರ್ಷಗಳಿಗೆ ಕಡಿಮೆಯಿರದಂತೆ ಬೋಧನೆ ಮಾಡಿ ಸೇವೆ ಸಲ್ಲಿಸಿರಬೇಕು.
56	ರಸಾಯನಶಾಸ್ತ್ರ ಉಪನ್ಯಾಸಕರು	(ರೂ. 43100-83900)	26	-	ಅನುಸೂಚಿ-II ರಲ್ಲಿ ನಿರ್ದಿಷ್ಟಪಡಿಸಿದ ಪ್ರಕ್ರಿಯೆಯ ಅನುಸಾರವಾಗಿ ನೇಮಕಾತಿ ಸಮಿತಿಯ ಮುಖಾಂತರ ನೇರ ನೇಮಕಾತಿ ಮೂಲಕ ಶೇ. ಐವತ್ತರಷ್ಟು.	**ನೇರ ನೇಮಕಾತಿಗಾಗಿ:** 1. ರಸಾಯನಶಾಸ್ತ್ರ ಅಥವಾ ಭೌತಿಕ ರಸಾಯನಶಾಸ್ತ್ರ ಅಥವಾ ಸಾವಯವ ರಸಾಯನಶಾಸ್ತ್ರ ಅಥವಾ ವಿಶ್ಲೇಷಣಾ

					ಮತ್ತು ಕೆಆರ್‌ಇಐಎಸ್ ವಸತಿ ಶಾಲೆಗಳಲ್ಲಿ ರಸಾಯನ ಶಾಸ್ತ್ರದಲ್ಲಿ ಬೋಧನೆ ಮಾಡಿರುವ ಶಿಕ್ಷಕರ ವೃಂದದಿಂದ ಬಡ್ತಿ ಮೂಲಕ ಶೇ. ಐವತ್ತರಷ್ಟು ತುಂಬಬೇಕು. ಪರಂತು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ (ವೃಂದ ಮತ್ತು ನೇಮಕಾತಿ) (2[ನೇ] ತಿದ್ದುಪಡಿ) ವಿನಿಯಮಗಳು, 2011ರ ಪ್ರಾರಂಭದಂದು ಇದ್ದಂತೆ 26 ಹುದ್ದೆಗಳಿಗಾಗಿನ ನೇಮಕಾತಿಯನ್ನು ನೇರ ನೇಮಕಾತಿಯ ಮೂಲಕ ಮಾಡತಕ್ಕದ್ದು.	ರಸಾಯನಶಾಸ್ತ್ರ ಅಥವಾ ಜೈವಿಕ ರಸಾಯನಶಾಸ್ತ್ರ ಅಥವಾ ಅನ್ವಯಿಕ ರಸಾಯನ ಶಾಸ್ತ್ರದಲ್ಲಿ ಕನಿಷ್ಠ ದ್ವಿತೀಯ ದರ್ಜೆಯಲ್ಲಿಸ್ನಾತಕೋತ್ತರ ಪದವಿಯನ್ನು ಪಡೆದಿರತಕ್ಕದ್ದು. **ಅಥವಾ** ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ರಸಾಯನಶಾಸ್ತ್ರ ಅಥವಾ ಅನ್ವಯಿಕ ರಸಾಯನಶಾಸ್ತ್ರದಲ್ಲಿ ಐದು ವರ್ಷಗಳ ಇಂಟಿಗ್ರೇಟೆಡ್ ಎಂ.ಎಸ್‌ಸಿ ಕೋರ್ಸ್ ಪೂರ್ಣಗೊಳಿಸಿರುವ ಅಭ್ಯರ್ಥಿಗಳಾಗಿರಬೇಕು 2. ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ವಿಜ್ಞಾನ ಪದ್ಧತಿ [Method] ನಲ್ಲಿ ಬಿ.ಇಡಿ ಪದವಿಯನ್ನು ಪಡೆದಿರಬೇಕು. 3. ಸ್ನಾತಕ ಪದವಿ ಮತ್ತು ಸ್ನಾತಕೋತ್ತರ ಪದವಿಯಲ್ಲಿ ಇಂಗ್ಲೀಷ್ ಮಾಧ್ಯಮದಲ್ಲಿ ಮಾತ್ರ ಅಧ್ಯಯನ ಮಾಡಿರಬೇಕು.

						4. ಅಭ್ಯರ್ಥಿಯು, ಸ್ನಾತಕ ಪದವಿ ಅಥವಾ ಪದವಿ ಪೂರ್ವ ಕೋರ್ಸ್ ಅಥವಾ ಎಸ್‌ಎಸ್‌ಎಲ್‌ಸಿಯಲ್ಲಿ ಕನ್ನಡವನ್ನು ಒಂದು ಭಾಷೆಯಾಗಿ ಅಧ್ಯಯನ ಮಾಡಿರಬೇಕು ಅಥವಾ ಕನ್ನಡದಲ್ಲಿ ಡಿಪ್ಲೊಮೊ ಪಡೆದಿರಬೇಕು ಅಥವಾ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ/ ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು ಇವರು ನಡೆಸುವ ಕನ್ನಡ ಪ್ರಮಾಣಪತ್ರ ಕೋರ್ಸ್‌ನಲ್ಲಿ (ಕಾವ/ಜಾಣ/ರತ್ನ) ಉತ್ತೀರ್ಣನಾಗಿರಬೇಕು. **ಬಡ್ತಿಗಾಗಿ:** 1. ನೇರ ನೇಮಕಾತಿಗಾಗಿ ನಿರ್ದಿಷ್ಟಪಡಿಸಿದ ವಿದ್ಯಾರ್ಹತೆಯನ್ನು ಹೊಂದಿರಬೇಕು. **ಮತ್ತು** 2. ಕೆಆರ್‌ಇಐಎಸ್ ವಸತಿ ಶಾಲೆಗಳಲ್ಲಿ ರಸಾಯನಶಾಸ್ತ್ರದಲ್ಲಿ ಭೋದನೆ ಮಾಡಿರುವ ಶಿಕ್ಷಕರಾಗಿದ್ದು ಏಳು

						ವರ್ಷಗಳಿಗೆ ಕಡಿಮೆಯಿರದಂತೆ ಸೇವೆ ಸಲ್ಲಿಸಿರಬೇಕು.
57	ಗಣಿತ ಶಾಸ್ತ್ರ ಉಪನ್ಯಾಸಕರು	(ರೂ. 43100-83900)	26	-	ಅನುಸೂಚಿ-II ರಲ್ಲಿ ನಿರ್ದಿಷ್ಟಪಡಿಸಿದ ಪ್ರಕ್ರಿಯೆಯ ಅನುಸಾರವಾಗಿ ನೇಮಕಾತಿ ಸಮಿತಿಯ ಮುಖಾಂತರ ನೇರ ನೇಮಕಾತಿ ಮೂಲಕ ಶೇ. ಐವತ್ತರಷ್ಟು. ಮತ್ತು ಕೆಆರ್‌ಇಐಎಸ್ ವಸತಿ ಶಾಲೆಗಳಲ್ಲಿನ ಶಿಕ್ಷಕರ ವೃಂದದಿಂದ ಬಡ್ತಿ ಮೂಲಕ ಶೇ. ಐವತ್ತರಷ್ಟು ತುಂಬಬೇಕು. (ಗಣಿತಶಾಸ್ತ್ರ ಮತ್ತು ಭೌತಶಾಸ್ತ್ರದಲ್ಲಿ ಬೋಧನೆ ಮಾಡಿರಬೇಕು) ಪರಂತು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ (ವೃಂದ ಮತ್ತು ನೇಮಕಾತಿ) (2ನೇ ತಿದ್ದುಪಡಿ) ನಿಯಮಗಳು, 2011ರ ಪ್ರಾರಂಭದಂದು ಇದ್ದಂತೆ, 26 ಹುದ್ದೆಗಳಿಗಾಗಿನ ನೇಮಕಾತಿಯನ್ನು ನೇರ ನೇಮಕಾತಿಯ ಮೂಲಕ ಮಾಡತಕ್ಕದ್ದು.	**ನೇರ ನೇಮಕಾತಿಗಾಗಿ:** 1. ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಗಣಿತ ಮತ್ತು ಅನ್ವಯಿಕ ಗಣಿತಶಾಸ್ತ್ರದಲ್ಲಿ ಕನಿಷ್ಠ ದ್ವಿತೀಯ ದರ್ಜೆಯಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದಿರಬೇಕು. 2.ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಪ್ರಮುಖವಾಗಿ ವಿಜ್ಞಾನ ಪದ್ಧತಿ [Method] ಯಲ್ಲಿ ಬಿ.ಇಡಿ ಪದವಿಯನ್ನು ಪಡೆದಿರಬೇಕು. 3. ಸ್ನಾತಕ ಪದವಿ ಮತ್ತು ಸ್ನಾತಕೋತ್ತರ ಪದವಿಯಲ್ಲಿ ಇಂಗ್ಲೀಷ್ ಮಾಧ್ಯಮದಲ್ಲಿ ಮಾತ್ರ ಅಧ್ಯಯನ ಮಾಡಿರಬೇಕು. **ಮತ್ತು** 4. ಅಭ್ಯರ್ಥಿಯು, ಸ್ನಾತಕ ಪದವಿ ಅಥವಾ ಪದವಿ ಪೂರ್ವ ಕೋರ್ಸ್ ಅಥವಾ ಎಸ್‌ಎಸ್‌ಎಲ್‌ಸಿಯಲ್ಲಿ

						ಕನ್ನಡವನ್ನು ಒಂದು ಭಾಷೆಯನ್ನಾಗಿ ಅಧ್ಯಯನ ಮಾಡಿರಬೇಕು ಅಥವಾ ಕನ್ನಡ ಡಿಪ್ಲೊಮೊ ಪಡೆದಿರಬೇಕು ಅಥವಾ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ/ ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು ಇವರು ನಡೆಸುವ ಕನ್ನಡ ಪ್ರಮಾಣಪತ್ರ ಕೋರ್ಸ್‌ನಲ್ಲಿ (ಕಾವ/ಜಾಣ/ರತ್ನ) ಉತ್ತೀರ್ಣನಾಗಿರಬೇಕು. **ಬಡ್ತಿಗಾಗಿ:** 1. ನೇರ ನೇಮಕಾತಿಗಾಗಿ ನಿರ್ದಿಷ್ಟಪಡಿಸಿದ ವಿದ್ಯಾರ್ಹತೆಯನ್ನು ಹೊಂದಿರಬೇಕು. **ಮತ್ತು** 2. ಕೆಆರ್‌ಇಐಎಸ್ ವಸತಿ ಶಾಲೆಗಳಲ್ಲಿ ಗಣಿತಶಾಸ್ತ್ರ ಮತ್ತು ಭೌತಶಾಸ್ತ್ರ ಬೋಧಿಸುವ ಶಿಕ್ಷಕರಾಗಿ ಏಳು ವರ್ಷಗಳಿಗೆ ಕಡಿಮೆಯಿರದಂತೆ ಸೇವೆ ಸಲ್ಲಿಸಿರಬೇಕು.

58	ಜೀವಶಾಸ್ತ್ರ ಉಪನ್ಯಾಸಕರು	(ರೂ. 43100-83900)	26	-	ಅನುಸೂಚಿ-II ರಲ್ಲಿ ನಿರ್ದಿಷ್ಟಪಡಿಸಿದ ಪ್ರಕ್ರಿಯೆಯ ಅನುಸಾರವಾಗಿ ನೇಮಕಾತಿ ಸಮಿತಿಯ ಮುಖಾಂತರ ನೇರ ನೇಮಕಾತಿ ಮೂಲಕ ಶೇ. ಐವತ್ತರಷ್ಟು. ಮತ್ತು ಕೆಆರ್‌ಇಐಎಸ್ ವಸತಿ ಶಾಲೆಗಳಲ್ಲಿನ ಶಿಕ್ಷಕರ ವೃಂದದಿಂದ ಬಡ್ತಿ ಮೂಲಕ ಶೇ. ಐವತ್ತರಷ್ಟು ತುಂಬಬೇಕು. (ಜೀವಶಾಸ್ತ್ರದಲ್ಲಿ ಬೋಧನೆ ಮಾಡಿರಬೇಕು) ಪರಂತು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ (ವೃಂದ ಮತ್ತು ನೇಮಕಾತಿ) (2ನೇ ತಿದ್ದುಪಡಿ) ವನಿಯಮಗಳು, 2011ರ ಪ್ರಾರಂಭದಂದು ಇದ್ದಂತೆ, 26 ಹುದ್ದೆಗಳಿಗಾಗಿನ ನೇಮಕಾತಿಯನ್ನು ನೇರ ನೇಮಕಾತಿಯ ಮೂಲಕ ಮಾಡತಕ್ಕದ್ದು.	**ನೇರ ನೇಮಕಾತಿಗಾಗಿ:** 1. ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಸಸ್ಯಶಾಸ್ತ್ರ ಅಥವಾ ಪ್ರಾಣಿಶಾಸ್ತ್ರ ಅಥವಾ ಜೀವವಿಜ್ಞಾನ ಅಥವಾ ಜೈವಿಕ ವಿಜ್ಞಾನ ಅಥವಾ ಅನ್ವಯಿಕ ಸಸ್ಯಶಾಸ್ತ್ರ ಅಥವಾ ಅನ್ವಯಿಕ ಪ್ರಾಣಿಶಾಸ್ತ್ರದಲ್ಲಿ ಕನಿಷ್ಠಪಕ್ಷ ದ್ವಿತೀಯ ದರ್ಜೆಯಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದಿರಬೇಕು. 2.ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ವಿಜ್ಞಾನ ಪದ್ಧತಿ [Method] ಯಲ್ಲಿ ಬಿ.ಇಡಿ ಪದವಿಯನ್ನು ಪಡೆದಿರಬೇಕು. 3. ಸ್ನಾತಕ ಪದವಿ ಮತ್ತು ಸ್ನಾತಕೋತ್ತರ ಪದವಿಯಲ್ಲಿ ಇಂಗ್ಲೀಷ್ ಮಾಧ್ಯಮದಲ್ಲಿ ಮಾತ್ರ ಅಧ್ಯಯನ ಮಾಡಿರಬೇಕು. 4. ಅಭ್ಯರ್ಥಿಯು, ಸ್ನಾತಕೋತ್ತರ ಪದವಿ ಅಥವಾ ಸ್ನಾತಕ ಪದವಿ ಅಥವಾ ಪದವಿ ಪೂರ್ವ ಕೋರ್ಸ್ ಅಥವಾ ಎಸ್‌ಎಸ್‌ಎಲ್‌ಸಿಯಲ್ಲಿ ಕನ್ನಡವನ್ನು ಒಂದು ಭಾಷೆಯಾಗಿ ಅಧ್ಯಯನ

						ಅಭ್ಯಾಸಮಾಡಿರಬೇಕು ಅಥವಾ ಕನ್ನಡದಲ್ಲಿ ಡಿಪ್ಲೊಮೊ ಹೊಂದಿರಬೇಕು ಅಥವಾ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ/ ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು ಇವರು ನಡೆಸುವ ಕನ್ನಡ ಪ್ರಮಾಣಪತ್ರ ಕೋರ್ಸ್‌ನಲ್ಲಿ (ಕಾವ/ ಜಾಣ/ರತ್ನ) ಉತ್ತೀರ್ಣನಾಗಿರಬೇಕು. **ಬಡ್ತಿಗಾಗಿ:** 1. ನೇರ ನೇಮಕಾತಿಗಾಗಿ ನಿರ್ದಿಷ್ಟಪಡಿಸಿದ ವಿದ್ಯಾರ್ಹತೆಯನ್ನು ಹೊಂದಿರಬೇಕು. **ಮತ್ತು** 2. ಕೆಆರ್‌ಇಐಎಸ್ ವಸತಿ ಶಾಲೆಗಳಲ್ಲಿ ಜೀವಶಾಸ್ತ್ರ ಶಿಕ್ಷಕರಾಗಿ ಏಳು ವರ್ಷಗಳಿಗೆ ಕಡಿಮೆಯಿರದಂತೆ ಸೇವೆ ಸಲ್ಲಿಸಿರಬೇಕು.
59	ಕಂಪ್ಯೂಟರ್ ವಿಜ್ಞಾನ ಉಪನ್ಯಾಸಕರು	(ರೂ. 43100-83900)	26	-	ಅನುಸೂಚಿ-II ರಲ್ಲಿ ನಿರ್ದಿಷ್ಟಪಡಿಸಿದ ಪ್ರಕ್ರಿಯೆಯ ಅನುಸಾರವಾಗಿ ನೇಮಕಾತಿ ಸಮಿತಿಯ ಮುಖಾಂತರ ನೇರ ನೇಮಕಾತಿ ಮೂಲಕ ಶೇ. ಐವತ್ತರಷ್ಟು.	**ನೇರ ನೇಮಕಾತಿಗಾಗಿ:** 1. ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಎಂ. ಎಸ್‌ಸಿ ಗಣಕ ವಿಜ್ಞಾನ ಅಥವಾ ಎಂಸಿಎ ಅಥವಾ ಗಣಕ ವಿಜ್ಞಾನದಲ್ಲಿ

					ಮತ್ತು ಕೆಆರ್‌ಇಐಎಸ್ ವಸತಿ ಶಾಲೆಗಳಲ್ಲಿ ಶಿಕ್ಷಕರ ವೃಂದದಿಂದ ಬಡ್ತಿ ಮೂಲಕ ಶೇ. ಐವತ್ತರಷ್ಟು ತುಂಬಬೇಕು. (ಕಂಪ್ಯೂಟರ್ ವಿಜ್ಞಾನದಲ್ಲಿ ಬೋಧನೆ ಮಾಡಿರಬೇಕು) ಪರಂತು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ (ವೃಂದ ಮತ್ತು ನೇಮಕಾತಿ) (2ನೇ ತಿದ್ದುಪಡಿ) ವಿನಿಯಮಗಳು, 2011ರ ಪ್ರಾರಂಭದಂದು ಇದ್ದಂತೆ 26 ಹುದ್ದೆಗಳಿಗಾಗಿನ ನೇಮಕಾತಿಯನ್ನು ನೇರ ನೇಮಕಾತಿಯ ಮೂಲಕ ಮಾಡತಕ್ಕದ್ದು.	ಅಥವಾ ಮಾಹಿತಿ ವಿಜ್ಞಾನದ ಇಂಜಿನಿಯರಿಂಗ್‌ನಲ್ಲಿ ಮಾಸ್ಟರ್ ಪದವಿಯನ್ನು ಕನಿಷ್ಠ ಪಕ್ಷ ದ್ವಿತೀಯ ದರ್ಜೆಯಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದಿರಬೇಕು ಅಥವಾ ಗಣಕ ವಿಜ್ಞಾನ ಬಿ.ಇ ನಲ್ಲಿ ಅಥವಾ ಮಾಹಿತಿ ವಿಜ್ಞಾನ ಬಿ.ಇ ನಲ್ಲಿ ಪದವಿ ಪಡೆದಿರಬೇಕು. 2. ಸ್ನಾತಕ ಪದವಿ ಮತ್ತು ಸ್ನಾತಕೋತ್ತರ ಪದವಿಯಲ್ಲಿ ಇಂಗ್ಲೀಷ್ ಮಾಧ್ಯಮದಲ್ಲಿಯೇ ಅಧ್ಯಯನ ಮಾಡಿರಬೇಕು. 3. ಅಭ್ಯರ್ಥಿಗಳು, ಸ್ನಾತಕೋತ್ತರ ಪದವಿ ಅಥವಾ ಸ್ನಾತಕ ಪದವಿ ಅಥವಾ ಪದವಿ ಪೂರ್ವ ಕೋರ್ಸ್ ಅಥವಾ ಎಸ್‌ಎಸ್‌ಎಲ್‌ಸಿಯಲ್ಲಿ ಕನ್ನಡವನ್ನು ಒಂದು ಭಾಷೆಯಾಗಿ ಅಧ್ಯಯನ ಮಾಡಿರಬೇಕು ಅಥವಾ ಕನ್ನಡದಲ್ಲಿ ಡಿಪ್ಲೊಮೊ ಪಡೆದಿರಬೇಕು ಅಥವಾ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ

						ಮಂಡಳಿಯಿಂದ ನಡೆಸಲಾದ ಕನ್ನಡ ಪ್ರಮಾಣಪತ್ರ ಕೋರ್ಸ್‌ನಲ್ಲಿ (ಕಾವ/ ಜಾಣ/ರತ್ನ) ಉತ್ತೀರ್ಣ ನಾಗಿರಬೇಕು. **ಬಡ್ತಿಗಾಗಿ:** 1. ನೇರ ನೇಮಕಾತಿಗಾಗಿ ನಿರ್ದಿಷ್ಟಪಡಿಸಿದ ವಿದ್ಯಾರ್ಹತೆಯನ್ನು ಪಡೆದಿರಬೇಕು. **ಮತ್ತು** 2. ಕೆಆರ್‌ಇಐಎಸ್ ವಸತಿ ಶಾಲೆಗಳಲ್ಲಿ ಗಣಕ ವಿಜ್ಞಾನ ಶಿಕ್ಷಕರಾಗಿ ಏಳು ವರ್ಷಗಳಿಗೆ ಕಡಿಮೆಯಿರದಂತೆ ಬೋಧಿಸಿ ಸೇವೆ ಸಲ್ಲಿಸಿರಬೇಕು.
60	ಮೊರಾರ್ಜಿ ದೇಸಾಯಿ ವಸತಿ ಪದವಿ ಪೂರ್ವ ಕಾಲೇಜುಗಳ ವಾರ್ಡನ್ (ವಿದ್ಯಾರ್ಥಿ ನಿಲಯ ಮೇಲ್ವಿಚಾರಕ)	(ರೂ. 37900-70850)	26	-	ಜ್ಯೇಷ್ಠತೆಯ ಆಧಾರದ ಮೇಲೆ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವಸತಿ ಶಾಲೆಗಳ ನಿಲಯಪಾಲಕರ ವೃಂದದಿಂದ ಕನಿಷ್ಠ 100% ರ ಅನುಪಾತದಲ್ಲಿ ಬಡ್ತಿ ಮೂಲಕ ತುಂಬತಕ್ಕದ್ದು. ಆಯಾ ವೃಂದದಲ್ಲಿ ಸೇವೆಯ ಅವಧಿಯ ಆಧಾರದ ಮೇಲೆ ಜ್ಯೇಷ್ಠತೆಯನ್ನು ನಿರ್ಧರಿಸತಕ್ಕದ್ದು.	**ನೇರ ನೇಮಕಾತಿಗಾಗಿ:** 1.ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಕಲೆ ಅಥವಾ ವಿಜ್ಞಾನದಲ್ಲಿ ಸ್ನಾತಕ ಪದವಿಯನ್ನು ಪಡೆದಿರಬೇಕು. **ಮತ್ತು** 2. ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಕಲೆ ಅಥವಾ ವಿಜ್ಞಾನದಲ್ಲಿ ಬಿ.ಇಡಿ ಪದವಿಯನ್ನು ಪಡೆದಿರಬೇಕು. 3. ಅಭ್ಯರ್ಥಿಗಳು, ಸ್ನಾತಕ ಪದವಿ ಅಥವಾ

						ಪದವಿ ಪೂರ್ವ ಕೋರ್ಸ್ ಅಥವಾ ಎಸ್‌ಎಸ್‌ಎಲ್‌ಸಿಯಲ್ಲಿ ಕನ್ನಡವನ್ನು ಒಂದು ಭಾಷೆಯಾಗಿ ಅಧ್ಯಯನ ಮಾಡಿರಬೇಕು ಅಥವಾ ಕನ್ನಡದಲ್ಲಿ ಡಿಪ್ಲೊಮೊ ಹೊಂದಿರಬೇಕು. ಅಥವಾ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ/ ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು ಇವರು ನಡೆಸುವ ಕನ್ನಡ ಪ್ರಮಾಣಪತ್ರ ಕೋರ್ಸ್‌ನಲ್ಲಿ (ಕಾವ/ಜಾಣ/ರತ್ನ) ಉತ್ತೀರ್ಣನಾಗಿರಬೇಕು.
						ಮುಂಬಡ್ತಿ:- ಜ್ಯೇಷ್ಠತೆಯ ಆಧಾರದ ಮೇಲೆ ಕನಿಷ್ಠ ಐದು ವರ್ಷಗಳ ಕಾರ್ಯಾನುಭವದೊಂದಿಗೆ ವಸತಿ ಶಾಲೆಗಳ ನಿಲಯಪಾಲಕರ ವೃಂದದಿಂದ ಬಡ್ತಿ ಮೂ ಲಕ ತುಂಬಬೇಕು.
61	ದ್ವಿತೀಯ ದರ್ಜೆ ಸಹಾಯಕ ಮತ್ತು ಕಂಪ್ಯೂಟರ್ ಆಪರೇಟರ್	(ರೂ. 21400-42000)	26	-	ಅನುಸೂಚಿ-II ರಲ್ಲಿ ನಿರ್ದಿಷ್ಟಪಡಿಸಿದ ಪ್ರಕ್ರಿಯೆಯ ಅನುಸಾರವಾಗಿ ನೇರ ನೇಮಕಾತಿ ಮೂಲಕ.	**ನೇರ ನೇಮಕಾತಿಗಾಗಿ:** ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದ ಪದವಿ ಪೂರ್ವ ಕೋರ್ಸ್‌ನ ಪರೀಕ್ಷೆಯಲ್ಲಿ ಅಥವಾ ಅದಕ್ಕೆ ತತ್ಸಮಾನವಾದ ಪರೀಕ್ಷೆಯಲ್ಲಿ ಉತ್ತೀರ್ಣನಾಗಿರತಕ್ಕದ್ದು. ಕರ್ನಾಟಕ ಸರ್ಕಾರದ ಅಥವಾ ಸಂಘದಿಂದ ಮಾನ್ಯತೆ ಪಡೆದ ಆರು ತಿಂಗಳುಗಳ ಕಂಪ್ಯೂಟರ್ ಕೋರ್ಸ್‌ನ

						ಪ್ರಮಾಣಪತ್ರದೊಂದಿಗೆ ಕಂಪ್ಯೂಟರ್ ಕಾರ್ಯದಲ್ಲಿ ಜ್ಞಾನವನ್ನು ಹೊಂದಿರತಕ್ಕದ್ದು.
62	ಅಡುಗೆಯವರು	(ರೂ. 18600-32600)	-	52	ಹೊರಗುತ್ತಿಗೆ ಮೂಲಕ	**ವಿದ್ಯಾರ್ಹತೆ:** ಅಡುಗೆ ಮಾಡುವುದರಲ್ಲಿ ಎರಡು ವರ್ಷಗಳ ಅನುಭವದೊಂದಿಗೆ ಎಸ್‌ಎಸ್‌ಎಲ್‌ಸಿಯಲ್ಲಿ ಉತ್ತೀರ್ಣನಾಗಿರಬೇಕು.
63	ಸಹಾಯಕ ಅಡುಗೆಯವರು	(ರೂ. 17000-28950)	-	78	ಹೊರಗುತ್ತಿಗೆ ಮೂಲಕ	ಎಸ್‌ಎಸ್‌ಎಲ್‌ಸಿ (ಹತ್ತನೇ ತರಗತಿ ಪರೀಕ್ಷೆ)ಯಲ್ಲಿ ಉತ್ತೀರ್ಣನಾಗಿರಬೇಕು ಅಥವಾ ಅನುತ್ತೀರ್ಣರಾದವರನ್ನು ಪರಿಗಣಿಸಬಹುದು.
64	ಕಸ ಗುಡಿಸುವವರು (ಜಾಡಮಾಲಿ)	(ರೂ. 17000-28950)	-	52	ಹೊರಗುತ್ತಿಗೆ ಮೂಲಕ	ಎಸ್‌ಎಸ್‌ಎಲ್‌ಸಿಯಲ್ಲಿ ಉತ್ತೀರ್ಣನಾಗಿರಬೇಕು.
65	ಕಾವಲುಗಾರ/ಗ್ರೂಪ್ ಡಿ	(ರೂ. 17000-28950)	-	52	ಹೊರಗುತ್ತಿಗೆ ಏಜೆನ್ಸಿಯಿಂದ ಮತ್ತು ಕರ್ನಾಟಕ ಸಿವಿಲ್ ಸೇವೆಗಳು (ಅನುಕಂಪ ಆಧಾರದ ಮೇಲೆ ನೇಮಕಾತಿ) ನಿಯಮಗಳು, 1996ರ ಉಪಬಂಧಗಳಿಗೆ ಅನುಸಾರವಾಗಿ ನೇರ ನೇಮಕಾತಿ.	ಎಸ್‌ಎಸ್‌ಎಲ್‌ಸಿ (10ನೇ ತರಗತಿ ಪರೀಕ್ಷೆಯಲ್ಲಿ) ಉತ್ತೀರ್ಣನಾಗಿರತಕ್ಕದ್ದು **ಅಥವಾ** ಅದರಲ್ಲಿ ಅನುತ್ತೀರ್ಣರಾದವರನ್ನು ಪರಿಗಣಿಸಬಹುದು.

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ

ಅನುಸೂಚಿ-II

ಅನುಸೂಚಿ-I ರಲ್ಲಿ ವಿವರಿಸಿರುವ ಹುದ್ದೆಗಳಿಗೆ ನೇರ ನೇಮಕಾತಿಯ ವಿಧಾನ

ಕ್ರಮ ಸಂಖ್ಯೆ	ಅನುಸೂಚಿ-I ರಲ್ಲಿನ ಹುದ್ದೆಯ ಕ್ರಮ ಸಂಖ್ಯೆ	ಅನುಸೂಚಿ-I ರಲ್ಲಿರುವಂತೆ ಹುದ್ದೆಗಳ ಪ್ರವರ್ಗ	ನೇರ ನೇಮಕಾತಿಯ ವಿಧಾನ
1	40	ಪ್ರಥಮ ದರ್ಜೆ ಸಹಾಯಕ ಕಮ್ ಕಂಪ್ಯೂಟರ್ ಆಪರೇಟರ್	22, 40, ಮತ್ತು 61ನೇ ಕ್ರಮಸಂಖ್ಯೆಯಲ್ಲಿರುವ ಹುದ್ದೆಗಳಿಗಾಗಿ ನೇಮಕಾತಿ.- ಆಡಳಿತ ಮಂಡಳಿಯಿಂದ ರಚಿಸಲಾದ ನೇಮಕಾತಿ ಸಮಿತಿಯ ಮುಖಾಂತರ ನೇರ ನೇಮಕಾತಿ. ನೇಮಕಾತಿ ಸಮಿತಿಯು, ಈ ಕೆಳಕಂಡ ರೀತಿಯಲ್ಲಿ ಸಂಯೋಜಿತ ಸ್ಪರ್ಧಾತ್ಮಕ ಪರೀಕ್ಷೆಯ ಮುಖಾಂತರ ನೇಮಕಾತಿ ಮಾಡಿಕೊಳ್ಳಲು ವ್ಯವಸ್ಥೆ ಮಾಡತಕ್ಕದ್ದು. ನೇಮಕಾತಿ ಸಮಿತಿಯು, ಕರ್ನಾಟಕ ರಾಜ್ಯಪತ್ರದಲ್ಲಿ ಅಧಿಸೂಚನೆಯನ್ನು ಪ್ರಕಟಿಸುವುದರ ಜೊತೆಗೆ ಪ್ರಾದೇಶಿಕ ಭಾಷೆಯಲ್ಲಿ ವ್ಯಾಪಕ ಪ್ರಸಾರ ಹೊಂದಿರುವ ಎರಡು ಪ್ರಮುಖ ವೃತ್ತ ಪತ್ರಿಕೆಗಳಲ್ಲಿ ಮತ್ತು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧಿಕೃತ ವೆಬ್‌ಸೈಟಿನಲ್ಲಿ ಪ್ರಕಟಿಸಿ ವ್ಯಾಪಕ ಪ್ರಚಾರವನ್ನು ನೀಡುವ ಮೂಲಕ ಮತ್ತು ಅರ್ಹತಾ ಷರತ್ತುಗಳು, ನಿಯಮಿಸಲಾದ ವಿದ್ಯಾರ್ಹತೆ, ನೇಮಕಾತಿ ವಿಧಾನ ಭರ್ತಿ ಮಾಡಬೇಕಾದ ಖಾಲಿಸ್ಥಾನಗಳ ತಾತ್ಕಾಲಿಕ ಸಂಖ್ಯೆ ಹಾಗೂ ಅನುಸೂಚಿತ ಪಂಗಡ, ಅನುಸೂಚಿತ ಜಾತಿ ಮತ್ತು ಇತರೆ ಹಿಂದುಳಿದ ವರ್ಗಗಳು ಮತ್ತು ಸಾಮಾನ್ಯ ವರ್ಗ ಮುಂತಾದವುಗಳ ಮೀಸಲಾತಿಗೆ ಸಂಬಂಧಿಸಿದಂತೆ ಜಾರಿಯಲ್ಲಿರುವ ಆದೇಶಗಳ ಅನುಸಾರವಾಗಿ ಅವುಗಳನ್ನು ವರ್ಗೀಕರಿಸುವ ಮೂಲಕ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸತಕ್ಕದ್ದು. ನೇಮಕಾತಿ ಸಮಿತಿಯು, ಅಧಿಸೂಚನೆಯಲ್ಲಿ ಪರೀಕ್ಷೆಯ ಪಠ್ಯಕ್ರಮ, ಪರೀಕ್ಷೆಯ ದಿನಾಂಕ, ಸಮಯ, ಸ್ಥಳ
2	22 & 61	ದ್ವಿತೀಯ ದರ್ಜೆ ಸಹಾಯಕ ಕಮ್ ಕಂಪ್ಯೂಟರ್ ಆಪರೇಟರ್	

			ಮೊದಲಾದಂಥ ಸ್ಪರ್ಧಾತ್ಮಕ ಪರೀಕ್ಷೆಗೆ ಸಂಬಂಧಿಸಿದ ಎಲ್ಲ ಅವಶ್ಯಕ ವಿವರಗಳನ್ನು ನೀಡತಕ್ಕದ್ದು. ನೇಮಕಾತಿ ಸಮಿತಿಯು, ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಮತ್ತು ಅರ್ಹತಾ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳ ಆಧಾರದ ಮೇಲೆ ಮತ್ತು ಪ್ರತಿಶತ ಒಟ್ಟು ಶೇಕಡಾವಾರು ಆಧಾರದ ಮೇಲೆ ಕೆಳಕಂಡ ರೀತಿಯಲ್ಲಿ ಮೆರಿಟ್ ಲಿಸ್ಟ್ (ಪಟ್ಟಿ)ಯನ್ನು ಸಿದ್ಧಪಡಿಸತಕ್ಕದ್ದು, ಎಂದರೆ:- (1) ಸಂಯೋಜಿತ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳನ್ನು, ಶೇಕಡಾ ಎಪ್ಪತ್ತೈದರಷ್ಟು ಲೆಕ್ಕ ಹಾಕತಕ್ಕದ್ದು. (2) ಅರ್ಹತಾ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳನ್ನು, ಶೇಕಡಾ ಮೂವತ್ತರಷ್ಟು ಲೆಕ್ಕ ಹಾಕತಕ್ಕದ್ದು. (3) ಯಾವುದೇ ಸಂದರ್ಶನಗಳಿರತಕ್ಕದ್ದಲ್ಲ. ಮೆರಿಟ್ ಲಿಸ್ಟ್ (ಪಟ್ಟಿ)ಯನ್ನು ಸಿದ್ಧಪಡಿಸುವಲ್ಲಿ ನೇಮಕಾತಿ ಸಮಿತಿ ನಿರ್ಣಯವು ಅಂತಿಮವಾಗಿರುತ್ತದೆ. ನೇಮಕಾತಿ ಸಮಿತಿ, ಸೂಚನಾ ಅಧಿಸೂಚಿಸಿದ ಖಾಲಿಸ್ಥಾನಗಳ ಸಂಖ್ಯೆಗೆ ಸಮಾನವಾಗಿ ಅಭ್ಯರ್ಥಿಗಳ ಆಯ್ಕೆ ಸಂಖ್ಯೆಯನ್ನು ಸೂಚನಾ ಫಲಕದಲ್ಲಿ ಪ್ರಕಟಿಸತಕ್ಕದ್ದು ನಂತರ ಅದನ್ನು ಆಯ್ಕೆಯಾದ ಸಂಖ್ಯೆಯ ಅಭ್ಯರ್ಥಿಗಳಿಗೆ ಅದನ್ನು ತಿಳಿಸತಕ್ಕದ್ದು ಮತ್ತು ನೇಮಕಾತಿ ಪ್ರಾಧಿಕಾರಕ್ಕೆ ಆಯ್ಕೆ ಪಟ್ಟಿಯನ್ನು ಕಳುಹಿಸತಕ್ಕದ್ದು. ನೇಮಕಾತಿ ಪ್ರಾಧಿಕಾರವು, ಅವಶ್ಯಕ ವಿವರಗಳನ್ನು ಪರಿಶೀಲಿಸಿದ ತರುವಾಯ ನೇಮಕಾತಿ ನಿಬಂಧನೆಗಳು ಮತ್ತು ಷರತ್ತುಗಳಿಗೊಳಪಟ್ಟು ನೇಮಕಾತಿ ಆದೇಶವನ್ನು ಹೊರಡಿಸತಕ್ಕದ್ದು. ಆಯ್ಕೆಯಾದ ಅಭ್ಯರ್ಥಿಗಳ ಅಂತರ್ ಜ್ಯೇಷ್ಠತೆಯು, ಮೆರಿಟ್ ಲಿಸ್ಟ್‌ನ ಅನುಸಾರವಾಗಿರಬೇಕು. ಆಯ್ಕೆ ಪಟ್ಟಿಯಲ್ಲಿನ ಅಭ್ಯರ್ಥಿಗಳ ಹೆಸರುಗಳ ಸೇರ್ಪಡೆ ಮಾತ್ರವೇ, ನೇಮಕಾತಿಯ ಯಾವುದೇ ಹಕ್ಕನ್ನು ನೀಡುವುದಿಲ್ಲ. ಕರ್ನಾಟಕ ನಾಗರೀಕ ಸೇವಾ ಅಧಿನಿಯಮ, 1978 ರ (1990 ರ ಕರ್ನಾಟಕ ಅಧಿನಿಯಮ-14) ನಿಯಮಗಳನ್ವಯ ನೇಮಕಾತಿ ಪ್ರಾಧಿಕಾರವು ಅಧಿಸೂಚಿಸಿದ ಹುದ್ದೆಗಳಿಗೆ ಶೇ 30 ರಷ್ಟು ಮೀರದಂತೆ ಹೆಚ್ಚುವರಿ

			ಪಟ್ಟಿಯನ್ನು ಪ್ರಕಟಿಸುವುದು. ಸಿದ್ದಪಡಿಸಿರುವ ಹೆಚ್ಚುವರಿ ಪಟ್ಟಿಯು ಅದರ ಪ್ರಕಟಣೆಯ ದಿನಾಂಕದಿಂದ ಎರಡು ವರ್ಷದ ಅವಧಿಯವರೆಗೆ ಅಥವಾ ಮುಂದಿನ ಆಯ್ಕೆಯ ಆಧಾರದ ಮೇಲೆ ಸಿದ್ದಪಡಿಸಿದ ಪಟ್ಟಿಯ ಪ್ರಕಟಣೆಯ ದಿನಾಂಕದಂದು ಅಥವಾ ಆ ದಿನಾಂಕಕ್ಕೆ ಮೊದಲು, ಇದರಲ್ಲಿ ಯಾವುದು ಮೊದಲೋ ಆ ದಿನದಿಂದ ಪ್ರವರ್ತನೆಯಲ್ಲಿರುವುದು ನಿಂತುಹೋಗತಕ್ಕದ್ದು.
3	18 & 38	ಕಚೇರಿ ಅಧೀಕ್ಷಕರು	ಎಫ್‌ಡಿಎ ಕಮ್ ಕಂಪ್ಯೂಟರ್ ಆಪರೇಟರ್/ಶೀಘ್ರಲಿಪಿಗಾರರ/ವಸತಿ ಶಾಲೆಗಳ ನಿಲಯಪಾಲಕರ ವೃಂದದಿಂದ ಮುಂಬಡ್ತಿ ನೀಡುವ ಮೂಲಕ.
4	21	ಶೀಘ್ರಲಿಪಿಗಾರರು	ನೇಮಕಾತಿ ಸಮಿತಿಯು ಪಿಯುಸಿ, ಶೀಘ್ರಲಿಪಿ ಮತ್ತು ಬೆರಳಚ್ಚುಗಳಂತಹ ಅರ್ಹತಾ ಪರೀಕ್ಷೆಗಳಲ್ಲಿ ಗಳಿಸಿದ ಅಂಕಗಳನ್ನು ಅಥವಾ ಪಿಯುಸಿ ಮತ್ತು ಸಂದರ್ಭಾನುಸಾರ ಸೆಕ್ರೆಟರಿಯಲ್ ಪ್ರಾಕ್ಟೀಸ್ ಕೋರ್ಸ್‌ನಲ್ಲಿ ಗಳಿಸಿದ ಅಂಕಗಳನ್ನು ಪರಿಗಣಿಸಿ ಮೆರಿಟ್ ಲಿಸ್ಟ್ ಅನ್ನು ಸಿದ್ಧಪಡಿಸತಕ್ಕದ್ದು.
5	23 & 49	ಚಾಲಕರು	ಹೊರಗುತ್ತಿಗೆ ಮೂಲಕ
6	24, 51 & 65	ಕಾವಲುಗಾರ/ಜವಾನರು	ಹೊರಗುತ್ತಿಗೆ ಮೂಲಕ ಮತ್ತು ಕರ್ನಾಟಕ ಸಿವಿಲ್ ಸೇವೆಗಳ (ಅನುಕಂಪ ಆಧಾರದ ಮೇಲೆ ನೇಮಕಾತಿ) ನಿಯಮಗಳು, 1996ರ ಉಪಬಂಧಗಳಿಗನುಸಾರವಾಗಿ ನೇರ ನೇಮಕಾತಿ.
7	25	ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆಗಳ ಪ್ರಾಂಶುಪಾಲರು	**ಪ್ರಾಂಶುಪಾಲರ ಹುದ್ದೆಗಳಿಗೆ ನೇಮಕಾತಿ:** ನೇಮಕಾತಿ ಸಮಿತಿಯು, ಸಂಯೋಜಿತ ಸ್ಪರ್ಧಾತ್ಮಕ ಪರೀಕ್ಷೆ ಮತ್ತು ಮೌಖಿಕ ಸಂದರ್ಶನ ವನ್ನು ನಡೆಸುವುದರ ಮೂಲಕ ಪ್ರಾಂಶುಪಾಲರನ್ನು ನೇಮಕಾತಿ ಮಾಡಲು ವ್ಯವಸ್ಥೆ ಮಾಡತಕ್ಕದ್ದು.
			ನೇಮಕಾತಿ ಸಮಿತಿಯು, ಕರ್ನಾಟಕ ರಾಜ್ಯಪತ್ರದಲ್ಲಿ ಅಧಿಸೂಚನೆಯನ್ನು ಪ್ರಕಟಿಸುವುದರ ಜೊತೆಗೆ ಪ್ರಾದೇಶಿಕ ಭಾಷೆಯಲ್ಲಿ ವ್ಯಾಪಕ ಪ್ರಸಾರವನ್ನು ಹೊಂದಿರುವ ಎರಡು ಪ್ರಮುಖ ವೃತ್ತಪತ್ರಿಕೆಗಳಲ್ಲಿ ಮತ್ತು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸೊಸೈಟಿಯ ಅಧಿಕೃತ ವೆಬ್‌ಸೈಟಿನಲ್ಲಿ ಪ್ರಕಟಿಸಿ ವ್ಯಾಪಕ ಪ್ರಚಾರವನ್ನು ನೀಡುವ ಮೂಲಕ ಮತ್ತು ಅರ್ಹತಾ ಷರತ್ತುಗಳು, ನಿಯಮಿಸಲಾದ ವಿದ್ಯಾರ್ಹತೆ, ನೇಮಕಾತಿ ವಿಧಾನ ಭರ್ತಿ ಮಾಡಬೇಕಾದ ಖಾಲಿಸ್ಥಾನಗಳ ತಾತ್ಕಾಲಿಕ ಸಂಖ್ಯೆಯೆ, ಮತ್ತು ಅನುಸೂಚಿತ ಜಾತಿಗಳು, ಅನುಸೂಚಿತ ಪಂಗಡಗಳು ಮತ್ತು ಹಿಂದುಳಿದ ವರ್ಗಗಳು ಮತ್ತು ಇತರರಿಗೆ ಇರುವ ಮೀಸಲಾತಿಗೆ ಸಂಬಂಧಿಸಿದಂತೆ ಜಾರಿಯಲ್ಲಿರುವ ಆದೇಶದ
8	26	ಕೆಆರ್‌ಇಐಎಸ್ ವಸತಿ ಶಾಲೆಗಳ ಪ್ರಾಂಶುಪಾಲರು	
9	27	ಉಪ ಪ್ರಾಂಶುಪಾಲರು	

			ಅನುಸಾರವಾಗಿ ಅವುಗಳನ್ನು ವರ್ಗೀಕರಿಸುವ ಮೂಲಕ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸತಕ್ಕದ್ದು. ನೇಮಕಾತಿ ಸಮಿತಿಯು, ಅಧಿಸೂಚನೆಯಲ್ಲಿ ಪರೀಕ್ಷೆಯ ಪಠ್ಯಕ್ರಮ, ಪರೀಕ್ಷೆಯ ದಿನಾಂಕ, ಸಮಯ, ಸ್ಥಳ ಮೊದಲಾದಂಥ ಸ್ಪರ್ಧಾತ್ಮಕ ಪರೀಕ್ಷೆಗೆ ಸಂಬಂಧಿಸಿದ ಎಲ್ಲಾ ಅವಶ್ಯಕ ವಿವರಗಳನ್ನು ನೀಡತಕ್ಕದ್ದು. ನೇಮಕಾತಿ ಸಮಿತಿಯು, ಈ ಕೆಳಕಂಡವುಗಳ ಒಟ್ಟು ಅಂಕಗಳ ಆಧಾರದ ಮೇಲೆ ಶೇಕಡಾ 100ರಷ್ಟರ ಅರ್ಹತಾ ಪಟ್ಟಿಯನ್ನು ಸಿದ್ಧಪಡಿಸತಕ್ಕದ್ದು, ಎಂದರೆ,- ಎ) ಸಂಯೋಜಿತ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳನ್ನು ಶೇಕಡಾ ಐವತ್ತೇಳೂವರೆಯಷ್ಟಕ್ಕೆ ಲೆಕ್ಕ ಹಾಕತಕ್ಕದ್ದು. ಬಿ) ಸ್ನಾತಕೋತ್ತರ ಪದವಿ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳನ್ನು ಶೇಕಡಾ ಇಪ್ಪತ್ತಕ್ಕೆ ಲೆಕ್ಕಹಾಕತಕ್ಕದ್ದು. ಸಿ) ಬಿ.ಇಡಿ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳನ್ನು ಶೇಕಡಾ ಹತ್ತಕ್ಕೆಲೆಕ್ಕಹಾಕತಕ್ಕದ್ದು. ಡಿ) ಸಂದರ್ಶನದಲ್ಲಿ ಗಳಿಸಿದ ಅಂಕಗಳನ್ನು ಶೇಕಡಾ ಹನ್ನೆರಡುವರೆಗೆ ಲೆಕ್ಕಹಾಕತಕ್ಕದ್ದು. ಮೆರಿಟ್ ಪಟ್ಟಿಯನ್ನು ಸಿದ್ಧಪಡಿಸುವಲ್ಲಿ ನೇಮಕಾತಿ ಸಮಿತಿಯ ನಿರ್ಣಯವೇ ಅಂತಿಮವಾಗಿರುತ್ತದೆ. ನೇಮಕಾತಿ ಸಮಿತಿಯು, ಸೂಚನಾ ಫಲಕದಲ್ಲಿ ಅಧಿಸೂಚಿಸಿದ ಖಾಲಿಹುದ್ದೆಗಳ ಸಂಖ್ಯೆಯಗೆ ಸಮನಾಗಿ ಅಭ್ಯರ್ಥಿಗಳ ಆಯ್ಕೆ ಪಟ್ಟಿಯನ್ನು ಪ್ರಕಟಿಸತಕ್ಕದ್ದು ಮತ್ತು ನಂತರ ಎಲ್ಲಾ ಆಯ್ಕೆಯಾದ ಅಭ್ಯರ್ಥಿಗಳಿಗೆ ಅದನ್ನು ತಿಳಿಸತಕ್ಕದ್ದು ಮತ್ತು ಆಯ್ಕೆ ಪಟ್ಟಿಯನ್ನು ನೇಮಕಾತಿ ಪ್ರಾಧಿಕಾರಕ್ಕೆ ಕಳುಹಿಸತಕ್ಕದ್ದು. ನೇಮಕಾತಿ ಪ್ರಾಧಿಕಾರವು ಅವಶ್ಯಕ ವಿವರಗಳ ಪರಿಶೀಲಿಸಿದ ನಂತರ ಮತ್ತು ನೇಮಕಾತಿಯ ನಿಬಂಧನೆಗಳು ಮತ್ತು ಷರತ್ತುಗಳಿಗೆ ಒಳಪಟ್ಟು, ನೇಮಕಾತಿ ಆದೇಶವನ್ನು ಹೊರಡಿಸತಕ್ಕದ್ದು. ಆಯ್ಕೆಯಾದ ಅಭ್ಯರ್ಥಿಗಳ ಅಂತರ್ ಜ್ಯೇಷ್ಠತೆಯು ಮೆರಿಟ್ ಪಟ್ಟಿಯ ಪ್ರಕಾರ ಇರಬೇಕು. ಆಯ್ಕೆ ಪಟ್ಟಿಯಲ್ಲಿ ಅಭ್ಯರ್ಥಿಗಳ ಹೆಸರುಗಳನ್ನು ಸೇರ್ಪಡೆಗೊಳಿಸಿದ ಮಾತ್ರಕ್ಕೆ ನೇಮಕಾತಿಯ ಯಾವುದೇ ಹಕ್ಕನ್ನು ನೀಡುವುದಿಲ್ಲ. ಕರ್ನಾಟಕ ನಾಗರೀಕ ಸೇವಾ ಅಧಿನಿಯಮ, 1978 ರ (1990 ರ ಕರ್ನಾಟಕ ಅಧಿನಿಯಮ-14) ನಿಯಮಗಳನ್ವಯ ನೇಮಕಾತಿ ಪ್ರಾಧಿಕಾರವು ಅಧಿಸೂಚಿಸಿದ ಹುದ್ದೆಗಳಿಗೆ ಶೇ 30 ರಷ್ಟು ಮೀರದಂತೆ ಹೆಚ್ಚುವರಿ ಪಟ್ಟಿಯನ್ನು ಪ್ರಕಟಿಸುವುದು. ಸಿದ್ದಪಡಿಸಿರುವ ಹೆಚ್ಚುವರಿ ಪಟ್ಟಿಯು ಅದರ ಪ್ರಕಟಣೆಯ ದಿನಾಂಕದಿಂದ ಎರಡು ವರ್ಷದ ಅವಧಿಯವರೆಗೆ ಅಥವಾ ಮುಂದಿನ ಆಯ್ಕೆಯ ಆಧಾರದ ಮೇಲೆ ಸಿದ್ದಪಡಿಸಿದ ಪಟ್ಟಿಯ ಪ್ರಕಟಣೆಯ ದಿನಾಂಕದಂದು ಅಥವಾ ಆ ದಿನಾಂಕಕ್ಕೆ ಮೊದಲು, ಇದರಲ್ಲಿ ಯಾವುದು ಮೊದಲೋ ಆ ದಿನದಿಂದ ಪ್ರವರ್ತನೆಯಲ್ಲಿರುವುದು ನಿಂತುಹೋಗತಕ್ಕದ್ದು.

<table>
<tr><td>10</td><td>28</td><td>ಕನ್ನಡ ಭಾಷಾ ಶಿಕ್ಷಕರು</td><td rowspan="8">28 ರಿಂದ 60 ರ ವರೆಗಿನ ಕ್ರಮ ಸಂಖ್ಯೆಯಲ್ಲಿನ ಹುದ್ದೆಗಳಿಗೆ ನೇಮಕಾತಿ
ನೇಮಕಾತಿ ಸಮಿತಿಯು 28, 29,30, 31, 32, 33, 34, 35, ರ ಕ್ರಮಾಂಕಗಳಲ್ಲಿನ ಹುದ್ದೆಗಳಿಗಾಗಿ ಸಂಯೋಜಿತ ಸ್ಪರ್ಧಾತ್ಮಕ ಪರೀಕ್ಷೆಯ ಮೂಲಕ ಹೊಸದಾಗಿ ನೇಮಕಾತಿ ಮಾಡಲು ವ್ಯವಸ್ಥೆ ಮಾಡತಕ್ಕದ್ದು, ಅವುಗಳಿಗೆ ಸಂದರ್ಶನ (ಮೌಖಿಕ ಸಂದರ್ಶನ) ವಿರತಕ್ಕದ್ದಲ್ಲ.
ನೇಮಕಾತಿ ಸಮಿತಿಯು, ಪ್ರಾದೇಶಿಕ ಭಾಷೆಯಲ್ಲಿ ವ್ಯಾಪಕ ಪ್ರಸಾರವನ್ನು ಹೊಂದಿರುವ ಎರಡು ಪ್ರಮುಖ ವೃತ್ತಪತ್ರಿಕೆಗಳಲ್ಲಿ ಮತ್ತು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸೊಸೈಟಿಯ ವೆಬ್‌ಸೈಟಿನಲ್ಲಿ ಅಂತಹ ಅಧಿಸೂಚನೆಯನ್ನು ಪ್ರಕಟಿಸುವ ಮೂಲಕ ಪ್ರಚಾರ ಮಾಡಿ ಅರ್ಹ ಅಭ್ಯರ್ಥಿಗಳಿಂದ ಹುದ್ದೆಗಳ ಪ್ರತಿಯೊಂದು ಪ್ರವರ್ಗಗಳಿಗಾಗಿ ಅರ್ಜಿಗಳನ್ನು ಆಹ್ವಾನಿಸತಕ್ಕದ್ದು.
ಅಲ್ಲದೆ, ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸುವುದು ಮತ್ತು ಅರ್ಹತಾ, ಷರತ್ತುಗಳನ್ನು ನಿಯಮಿಸುವುದು, ನಿಯಮಿಸಿದ ವಿದ್ಯಾರ್ಹತೆ, ಭರ್ತಿಮಾಡಬೇಕಾದ ಖಾಲಿಹುದ್ದೆಗಳ ತಾತ್ಕಾಲಿಕ ಸಂಖ್ಯೆ, ನೇಮಕಾತಿ ವಿಧಾನ ಮತ್ತು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗ ಮುಂತಾದವುಗಳಿಗಾಗಿನ ಮೀಸಲಾತಿಗೆ ಸಂಬಂಧಿಸಿದಂತೆ ಜಾರಿಯಲ್ಲಿರುವ ಆದೇಶಗಳಿಗೆ ಅನುಸಾರವಾಗಿ ಅವುಗಳ ವರ್ಗೀಕರಣದ ಷರತ್ತುಗಳನ್ನು ನಿರ್ದಿಷ್ಟಪಡಿಸುವುದು.
ನೇಮಕಾತಿ ಸಮಿತಿಯು, ಅಧಿಸೂಚನೆಯಲ್ಲಿ ಪರೀಕ್ಷೆಯ ಪಠ್ಯಕ್ರಮ, ದಿನಾಂಕ, ಸಮಯ, ಸ್ಥಳ ಮುಂತಾದವುಗಳಂತಹ ಸ್ಪರ್ಧಾತ್ಮಕ ಪರೀಕ್ಷೆಗೆ ಸಂಬಂಧಿಸಿದ ಎಲ್ಲಾ ಅವಶ್ಯಕ ವಿವರಗಳನ್ನು ಒದಗಿಸತಕ್ಕದ್ದು.
ನೇಮಕಾತಿ ಸಮಿತಿಯು, ಈ ಕೆಳಗಿನವುಗಳ ಒಟ್ಟು ಆಧಾರದ ಮೇಲೆ ಶೇಕಡಾ 100ರ ಒಟ್ಟು ಮೊತ್ತಕ್ಕೆ ಮೆರಿಟ್ ಪಟ್ಟಿಯನ್ನು ಸಿದ್ಧಪಡಿಸತಕ್ಕದ್ದು.
(ಎ) ಸಂಯೋಜಿತ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಪಡೆದ ಅಂಕಗಳನ್ನು ಶೇಕಡಾ ಎಪ್ಪತ್ತಕ್ಕೆ ಲೆಕ್ಕಹಾಕತಕ್ಕದ್ದು.
(ಬಿ) ಸ್ನಾತಕ ಪದವಿ ಪರೀಕ್ಷೆಯಲ್ಲಿ ಪಡೆದ ಅಂಕಗಳನ್ನು ಶೇಕಡಾ ಇಪ್ಪತ್ತಕ್ಕೆ ಲೆಕ್ಕಹಾಕತಕ್ಕದ್ದು.
(ಸಿ) ಬಿ.ಇಡಿ ಪರೀಕ್ಷೆಯಲ್ಲಿ ಪಡೆದ ಅಂಕಗಳನ್ನು ಶೇಕಡಾ ಹತ್ತಕ್ಕೆ ಲೆಕ್ಕಹಾಕತಕ್ಕದ್ದು.
ಪರಂತು: ದೈಹಿಕ ಶಿಕ್ಷಣ ಶಿಕ್ಷಕರ ಹುದ್ದೆಗಾಗಿ ಆಯ್ಕೆಯ ಸಂದರ್ಭದಲ್ಲಿ ಬಿಪಿ.ಇಡಿ ನಲ್ಲಿ ಪಡೆದ ಅಂಕಗಳ ಶೇಕಡಾ ಹತ್ತನ್ನು, ಬಿ.ಇಡಿ ಪದವಿಯ ಬದಲಾಗಿ ಪರಿಗಣನೆಗೆ ತೆಗೆದುಕೊಳ್ಳತಕ್ಕದ್ದು.
ಟಿಪ್ಪಣಿ: 34ನೇ ಕ್ರಮಸಂಖ್ಯೆಯಲ್ಲಿರುವ ಗಣಕಯಂತ್ರ (ಕಂಪ್ಯೂಟರ್) ಶಿಕ್ಷಕರ ಸಂದರ್ಭದಲ್ಲಿ, ಬಿ.ಇಡಿ ವಿದ್ಯಾರ್ಹತೆಯು ಅತ್ಯಾವಶ್ಯಕವಲ್ಲದಿರುವಲ್ಲಿ, ಸಂಯೋಜಿತ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಪಡೆದ ಅಂಕಗಳ ಶೇಕಡಾ</td></tr>
<tr><td>11</td><td>29</td><td>ಇಂಗ್ಲೀಷ್ ಭಾಷಾ ಶಿಕ್ಷಕರು</td></tr>
<tr><td>12</td><td>30</td><td>ಹಿಂದಿ ಭಾಷಾ ಶಿಕ್ಷಕರು</td></tr>
<tr><td>13</td><td>31</td><td>ವಿಜ್ಞಾನ ಭಾಷಾ ಶಿಕ್ಷಕರು</td></tr>
<tr><td>14</td><td>32</td><td>ಗಣಿತ ಭಾಷಾ ಶಿಕ್ಷಕರು</td></tr>
<tr><td>15</td><td>33</td><td>ಸಮಾಜ ವಿಜ್ಞಾನ ಭಾಷಾ ಶಿಕ್ಷಕರು</td></tr>
<tr><td>16</td><td>34</td><td>ಗಣಕ ವಿಜ್ಞಾನ ಶಿಕ್ಷಕರು</td></tr>
<tr><td>17</td><td>35</td><td>ದೈಹಿಕ ಶಿಕ್ಷಣ ಶಿಕ್ಷಕರು</td></tr>
</table>

			ಎಪ್ಪತ್ತನ್ನು ಮತ್ತು ಅರ್ಹತಾ ಪರೀಕ್ಷೆಯಲ್ಲಿ ಪಡೆದ ಅಂಕಗಳ ಶೇಕಡಾ ಮೂವತ್ತನ್ನು ಪರಿಗಣಿಸತಕ್ಕದ್ದು. ಮೆರಿಟ್ ಪಟ್ಟಿಯನ್ನು ಸಿದ್ಧಪಡಿಸುವಲ್ಲಿ ನೇಮಕಾತಿ ಸಮಿತಿಯ ನಿರ್ಣಯವೇ ಅಂತಿಮವಾಗಿರುತ್ತದೆ. ನೇಮಕಾತಿ ಸಮಿತಿಯು ಸೂಚನಾ ಫಲಕದಲ್ಲಿ, ಅಧಿಸೂಚಿಸಿದ ಖಾಲಿಹುದ್ದೆಗಳ ಸಂಖ್ಯೆಗೆ ಸಮನಾದ ಸಂಖ್ಯೆಯ ಅಭ್ಯರ್ಥಿಗಳ ಆಯ್ಕೆ ಪಟ್ಟಿಯನ್ನು ಪ್ರಕಟಿಸತಕ್ಕದ್ದು ಮತ್ತು ಆಯ್ಕೆಯಾದ ಎಲ್ಲಾ ಅಭ್ಯರ್ಥಿಗಳಿಗೆ ಅದನ್ನು ತಿಳಿಸತಕ್ಕದ್ದು ಮತ್ತು ನೇಮಕಾತಿ ಪ್ರಾಧಿಕಾರಕ್ಕೆ ಆಯ್ಕೆ ಪಟ್ಟಿಯನ್ನು ಕಳುಹಿಸತಕ್ಕದ್ದು. ನೇಮಕಾತಿ ಪ್ರಾಧಿಕಾರವು, ಅವಶ್ಯಕ ವಿವರಗಳನ್ನು ಪರಿಶೀಲಿಸಿದ ನಂತರ ಮತ್ತು ನೇಮಕಾತಿಯ ನಿಬಂಧನೆಗಳು ಮತ್ತು ಷರತ್ತುಗಳಿಗೆ ಒಳಪಟ್ಟು ನೇಮಕಾತಿ ಆದೇಶವನ್ನು ನೀಡತಕ್ಕದ್ದು. ಆಯ್ಕೆಯಾದ ಅಭ್ಯರ್ಥಿಗಳ ಅಂತರ್ ಜ್ಯೇಷ್ಠತೆಯು ಮೆರಿಟ್ ಪಟ್ಟಿಯ ಪ್ರಕಾರ ಇರುವುದು. ಆಯ್ಕೆ ಪಟ್ಟಿಯಲ್ಲಿ ಕೇವಲ ಅಭ್ಯರ್ಥಿಗಳ ಹೆಸರುಗಳ ಸೇರ್ಪಡೆಯಿಂದ ನೇಮಕಾತಿಯ ಯಾವುದೇ ಹಕ್ಕನ್ನು ಪ್ರದತ್ತ ಮಾಡುವುದಿಲ್ಲ. ಕರ್ನಾಟಕ ನಾಗರೀಕ ಸೇವಾ ಅಧಿನಿಯಮ, 1978 ರ (1990 ರ ಕರ್ನಾಟಕ ಅಧಿನಿಯಮ-14) ನಿಯಮಗಳನ್ವಯ ನೇಮಕಾತಿ ಪ್ರಾಧಿಕಾರವು ಅಧಿಸೂಚಿಸಿದ ಹುದ್ದೆಗಳಿಗೆ ಶೇ 30 ರಷ್ಟು ಮೀರದಂತೆ ಹೆಚ್ಚುವರಿ ಪಟ್ಟಿಯನ್ನು ಪ್ರಕಟಿಸುವುದು. ಸಿದ್ದಪಡಿಸಿರುವ ಹೆಚ್ಚುವರಿ ಪಟ್ಟಿಯು ಅದರ ಪ್ರಕಟಣೆಯ ದಿನಾಂಕದಿಂದ ಎರಡು ವರ್ಷದ ಅವಧಿಯವರೆಗೆ ಅಥವಾ ಮುಂದಿನ ಆಯ್ಕೆಯ ಆಧಾರದ ಮೇಲೆ ಸಿದ್ದಪಡಿಸಿದ ಪಟ್ಟಿಯ ಪ್ರಕಟಣೆಯ ದಿನಾಂಕದಂದು ಅಥವಾ ಆ ದಿನಾಂಕಕ್ಕೆ ಮೊದಲು, ಇದರಲ್ಲಿ ಯಾವುದು ಮೊದಲೋ ಆ ದಿನದಿಂದ ಪ್ರವರ್ತನೆಯಲ್ಲಿರುವುದು ನಿಂತುಹೋಗತಕ್ಕದ್ದು.
18	36	ಕಲೆ ಮತ್ತು ಕರಕುಶಲ ಶಿಕ್ಷಕರು (ಚಿತ್ರಕಲಾ ಶಿಕ್ಷಕರು) ಕಲೆ ಮತ್ತು ಚಿತ್ರಕಲಾ ಶಿಕ್ಷಕರು	ಕರ್ನಾಟಕ ಲೋಕಸೇವಾ ಆಯೋಗ/ಕರ್ನಾಟಕ ಪರೀಕ್ಷಾ ಪ್ರಾಧಿಕಾರ/ ಇತರೆ ನೇಮಕಾತಿ ಪ್ರಾಧಿಕಾರ ಮುಖಾಂತರ ನೇರ ನೇಮಕಾತಿ. ನೇಮಕಾತಿ ಪ್ರಾಧಿಕಾರವು, ಈ ಕೆಳಕಂಡ ರೀತಿಯಲ್ಲಿ ಸಂಯೋಜಿತ ಸ್ಪರ್ಧಾತ್ಮಕ ಪರೀಕ್ಷೆಯ ಮುಖಾಂತರ ನೇಮಕಾತಿ ಮಾಡಿಕೊಳ್ಳಲು ವ್ಯವಸ್ಥೆ ಮಾಡತಕ್ಕದ್ದು. ನೇಮಕಾತಿ ಪ್ರಾಧಿಕಾರವು ಕರ್ನಾಟಕ ರಾಜ್ಯಪತ್ರದಲ್ಲಿ ಅಧಿಸೂಚನೆಯನ್ನು ಪ್ರಕಟಿಸುವುದರ ಜೊತೆಗೆ ಪ್ರಾದೇಶಿಕ ಭಾಷೆಯಲ್ಲಿ ವ್ಯಾಪಕ ಪ್ರಸಾರ ಹೊಂದಿರುವ ಎರಡು ಪ್ರಮುಖ ವೃತ್ತ ಪತ್ರಿಕೆಗಳಲ್ಲಿ ಮತ್ತು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧಿಕೃತ ವೆಬ್‌ಸೈಟಿನಲ್ಲಿ ಪ್ರಕಟಿಸಿ ವ್ಯಾಪಕ ಪ್ರಚಾರವನ್ನು ನೀಡುವ ಮೂಲಕ ಮತ್ತು ಅರ್ಹತಾ ಷರತ್ತುಗಳು, ನಿಯಮಿಸಲಾದ ವಿದ್ಯಾರ್ಹತೆ, ನೇಮಕಾತಿ ವಿಧಾನ ಭರ್ತಿ ಮಾಡಬೇಕಾದ ಖಾಲಿಸ್ಥಾನಗಳ ತಾತ್ಕಾಲಿಕ ಸಂಖ್ಯೆ ಹಾಗೂ ಅನುಸೂಚಿತ ಪಂಗಡ, ಅನುಸೂಚಿತ ಜಾತಿ ಮತ್ತು ಇತರೆ ಹಿಂದುಳಿದ ವರ್ಗಗಳು ಮತ್ತು ಸಾಮಾನ್ಯ ವರ್ಗ ಮುಂತಾದವುಗಳ ಮೀಸಲಾತಿಗೆ ಸಂಬಂಧಿಸಿದಂತೆ ಜಾರಿಯಲ್ಲಿರುವ ಆದೇಶಗಳ

			ಅನುಸಾರವಾಗಿ ಅವುಗಳನ್ನು ವರ್ಗೀಕರಿಸುವ ಮೂಲಕ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸತಕ್ಕದ್ದು. ನೇಮಕಾತಿ ಪ್ರಾಧಿಕಾರವು, ಅಧಿಸೂಚನೆಯಲ್ಲಿ ಪರೀಕ್ಷೆಯ ಪಠ್ಯಕ್ರಮ, ಪರೀಕ್ಷೆಯ ದಿನಾಂಕ, ಸಮಯ, ಸ್ಥಳ ಮೊದಲಾದಂಥ ಸ್ಪರ್ಧಾತ್ಮಕ ಪರೀಕ್ಷೆಗೆ ಸಂಬಂಧಿಸಿದ ಎಲ್ಲ ಅವಶ್ಯಕ ವಿವರಗಳನ್ನು ನೀಡತಕ್ಕದ್ದು. ನೇಮಕಾತಿ ಪ್ರಾಧಿಕಾರವು, ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳ ಆಧಾರದ ಮೇಲೆ ಕೆಳಕಂಡ ರೀತಿಯಲ್ಲಿ ಮೆರಿಟ್ ಲಿಸ್ಟ್ (ಪಟ್ಟಿ)ಯನ್ನು ಸಿದ್ಧಪಡಿಸತಕ್ಕದ್ದು, ಎಂದರೆ:- (1) ಸಂಯೋಜಿತ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳನ್ನು ಶೇಕಡಾ ನೂರರಷ್ಟು ಲೆಕ್ಕ ಹಾಕತಕ್ಕದ್ದು. (2) ಯಾವುದೇ ಸಂದರ್ಶನಗಳಿರತಕ್ಕದ್ದಲ್ಲ. ಒಟ್ಟು ಸಂಖ್ಯೆಯ ಕಲೆ ಮತ್ತು ಚಿತ್ರಕಲಾ ಶಿಕ್ಷಕರ ನೇಮಕಾತಿಗಾಗಿ ಸೂಚಿಸಲಾದ ಹುದ್ದೆಗಳ ಪೈಕಿ ಐವತ್ತು ಪ್ರತಿಶತವು ಡ್ರಾಯಿಂಗ್ ಮತ್ತು ಪೇಂಟಿಂಗ್ ಪರೀಕ್ಷೆಯಲ್ಲಿ ಡಿಪ್ಲೊಮಾ ಕಲಾ ಶಿಕ್ಷಕರಿಗೆ ಮೀಸಲಿಡಿಸಲಾಗಿದೆ. ಮತ್ತು ಇನ್ನೊಂದು ಐವತ್ತು ಪ್ರತಿಶತವನ್ನು ಬಿಎಫ್ಎ/ಬಿವಿಎ ಪದವಿ ಹೊಂದಿದವರಿಗೆ ಪ್ರತ್ಯೇಕ ರೋಸ್ಟರ್ ಸಿಸ್ಟಮ್ ಮತ್ತು ಮೆರಿಟ್ ಪಟ್ಟಿಯನ್ನು ಕಾಯ್ದಿರಿಸಲಾಗಿದೆ. ಪ್ರತಿ ವರ್ಗಕ್ಕೆ ಅಂದರೆ ಡಿಪ್ಲೊಮಾ ಕೋರ್ಸ್ ಮತ್ತು ಪದವಿ ಕೋರ್ಸ್ ಅನ್ನು ಪ್ರತ್ಯೇಕವಾಗಿ ಅನುಸರಿಸಲಾಗಿದೆ. ಕರ್ನಾಟಕ ನಾಗರೀಕ ಸೇವಾ ಅಧಿನಿಯಮ, 1978 ರ (1990 ರ ಕರ್ನಾಟಕ ಅಧಿನಿಯಮ-14) ನಿಯಮಗಳನ್ವಯ ನೇಮಕಾತಿ ಪ್ರಾಧಿಕಾರವು ಅಧಿಸೂಚಿಸಿದ ಹುದ್ದೆಗಳಿಗೆ ಶೇ 30 ರಷ್ಟು ಮೀರದಂತೆ ಹೆಚ್ಚುವರಿ ಪಟ್ಟಿಯನ್ನು ಪ್ರಕಟಿಸುವುದು. ಸಿದ್ದಪಡಿಸಿರುವ ಹೆಚ್ಚುವರಿ ಪಟ್ಟಿಯು ಅದರ ಪ್ರಕಟಣೆಯ ದಿನಾಂಕದಿಂದ ಎರಡು ವರ್ಷದ ಅವಧಿಯವರೆಗೆ ಅಥವಾ ಮುಂದಿನ ಆಯ್ಕೆಯ ಆಧಾರದ ಮೇಲೆ ಸಿದ್ದಪಡಿಸಿದ ಪಟ್ಟಿಯ ಪ್ರಕಟಣೆಯ ದಿನಾಂಕದಂದು ಅಥವಾ ಆ ದಿನಾಂಕಕ್ಕೆ ಮೊದಲು, ಇದರಲ್ಲಿ ಯಾವುದು ಮೊದಲೋ ಆ ದಿನದಿಂದ ಪ್ರವರ್ತನೆಯಲ್ಲಿರುವುದು ನಿಂತುಹೋಗತಕ್ಕದ್ದು.
19	37	ಸಂಗೀತ ಶಿಕ್ಷಕರು	ನೇಮಕಾತಿ ಸಮಿತಿಯು ಆಯ್ಕೆಯನ್ನು, ಅವುಗಳ ಅನುಕ್ರಮವಾದ ಅರ್ಹತಾ ಪರೀಕ್ಷೆಗಳಲ್ಲಿ ಪಡೆದ ಒಟ್ಟು ಅಂಕಗಳ ಶೇಕಡಾವಾರಿನ ಸರಾಸರಿಯನ್ನು ತೆಗೆದುಕೊಳ್ಳುವ ಮೂಲಕ ಸಿದ್ಧಪಡಿಸಿದ ಮೆರಿಟ್ ಪಟ್ಟಿಯ ಆಧಾರದ ಮೇಲೆ ಮಾಡತಕ್ಕದ್ದು. ಯಾವುದೇ ಸಂದರ್ಶನಗಳು ಇರತಕ್ಕದ್ದಲ್ಲ. ಕರ್ನಾಟಕ ನಾಗರೀಕ ಸೇವಾ ಅಧಿನಿಯಮ, 1978 ರ (1990 ರ ಕರ್ನಾಟಕ ಅಧಿನಿಯಮ-14) ನಿಯಮಗಳನ್ವಯ ನೇಮಕಾತಿ ಪ್ರಾಧಿಕಾರವು ಅಧಿಸೂಚಿಸಿದ ಹುದ್ದೆಗಳಿಗೆ ಶೇ 30 ರಷ್ಟು ಮೀರದಂತೆ ಹೆಚ್ಚುವರಿ ಪಟ್ಟಿಯನ್ನು ಪ್ರಕಟಿಸುವುದು. ಸಿದ್ದಪಡಿಸಿರುವ ಹೆಚ್ಚುವರಿ ಪಟ್ಟಿಯು ಅದರ ಪ್ರಕಟಣೆಯ ದಿನಾಂಕದಿಂದ ಎರಡು

			ವರ್ಷದ ಅವಧಿಯವರೆಗೆ ಅಥವಾ ಮುಂದಿನ ಆಯ್ಕೆಯ ಆಧಾರದ ಮೇಲೆ ಸಿದ್ದಪಡಿಸಿದ ಪಟ್ಟಿಯ ಪ್ರಕಟಣೆಯ ದಿನಾಂಕದಂದು ಅಥವಾ ಆ ದಿನಾಂಕಕ್ಕೆ ಮೊದಲು, ಇದರಲ್ಲಿ ಯಾವುದು ಮೊದಲೋ ಆ ದಿನದಿಂದ ಪ್ರವರ್ತನೆಯಲ್ಲಿರುವುದು ನಿಂತುಹೋಗತಕ್ಕದ್ದು.
20	39	ವಾರ್ಡನ್(ಶಾಲೆ)	ಸಂಯೋಜಿತ ಸ್ಪರ್ಧಾತ್ಮಕ ಪರೀಕ್ಷೆಯ ಮುಖಾಂತರ ನೇರ ನೇಮಕಾತಿಯ ಮೂಲಕ ವಾರ್ಡನ್‌ಗಳ ಆಯ್ಕೆ ಮಾಡಬೇಕು. ನೇಮಕಾತಿ ಸಮಿತಿಯು ಪರೀಕ್ಷಾ ಪ್ರಕ್ರಿಯೆಯನ್ನು ಅನುಸರಿಸತಕ್ಕದ್ದು ಮತ್ತು ಈ ಹುದ್ದೆಗಳಿಗಾಗಿ ಸಂಯೋಜಿತ ಸ್ಪರ್ಧಾತ್ಮಕ ಪರೀಕ್ಷೆಗೆ ಸಿದ್ಧಪಡಿಸಬೇಕಾದ ಪ್ರತ್ಯೇಕ ಪ್ರಶ್ನೆ ಪತ್ರಿಕೆಯನ್ನು ಹೊರತುಪಡಿಸಿ ಮೇಲಿನಂತೆ 28-35ನೇ ಕ್ರಮಸಂಖ್ಯೆಯಲ್ಲಿರುವಂತೆ ಸಹ ಶಿಕ್ಷಕರುಗಳ ಆಯ್ಕೆಗಾಗಿ ನಿಯಮಿಸಲಾದಂತೆ ಅರ್ಹತಾ ಪಟ್ಟಿಯನ್ನು ಸಿದ್ಧಪಡಿಸತಕ್ಕದ್ದು. ನೇಮಕಾತಿ ಸಮಿತಿಯು ಪ್ರಾದೇಶಿಕ ಭಾಷೆಯಲ್ಲಿ ವಿಸ್ತೃತ ಪ್ರಸಾರ ವ್ಯಾಪ್ತಿಯನ್ನು ಹೊಂದಿರುವ ಎರಡು ಪ್ರಮುಖ ವೃತ್ತಪತ್ರಿಕೆಗಳಲ್ಲಿ ಮತ್ತು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸುವುದರ ಜೊತೆಗೆ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧಿಕೃತ ಜಾಲತಾಣದಲ್ಲಿ ಮತ್ತು ನಿರ್ದಿಷ್ಟಪಡಿಸಿದ ಅರ್ಹತಾ ಷರತ್ತುಗಳು, ನಿಯಮಿಸಲಾದ ವಿದ್ಯಾರ್ಹತೆ ಭರ್ತಿಮಾಡಬೇಕಾದ ಖಾಲಿಸ್ಥಾನಗಳ ಸಂಖ್ಯೆ. ನೇಮಕಾತಿ ವಿಧಾನ ಮತ್ತು ಪರಿಶಿಷ್ಟ ಜಾತಿಗಳು, ಪರಿಶಿಷ್ಟ ಪಂಗಡಗಳು ಮತ್ತು ಇತರೆ ಹಿಂದುಳಿದ ವರ್ಗಗಳು ಮೊದಲಾದವರಿಗಾಗಿ ಮೀಸಲಾತಿಗೆ ಸಂಬಂಧಪಟ್ಟಂತೆ ಜಾರಿಯಲ್ಲಿರುವ ಆದೇಶಗಳ ಅನುಸಾರವಾಗಿ ವರ್ಗೀಕರಣ ಮೂಲಕ ಪ್ರಚಾರವನ್ನು ನೀಡುವುದದರ ಮೂಲಕ ಅರ್ಹ ಅಭ್ಯರ್ಥಿಗಳಿಂದ ಪ್ರವರ್ಗಗಳ ಪ್ರತಿಯೊಂದು ಹುದ್ದೆಗಳಿಗಾಗಿ ಅರ್ಜಿಗಳನ್ನು ಆಹ್ವಾನಿಸತಕ್ಕದ್ದು. ನೇಮಕಾತಿ ಸಮಿತಿಯು ಪಠ್ಯಕ್ರಮ, ದಿನಾಂಕ, ಸಮಯ, ಪರೀಕ್ಷಾ ಸ್ಥಳ ಮೊದಲಾದವುಗಳಂತಹ ಸ್ಪರ್ಧಾತ್ಮಕ ಪರೀಕ್ಷೆಗೆ ಸಂಬಂಧಿಸಿದ ಎಲ್ಲಾ ಅವಶ್ಯಕ ವಿವರಗಳನ್ನು ಒದಗಿಸತಕ್ಕದ್ದು. ನೇಮಕಾತಿ ಸಮಿತಿಯು ಈ ಕೆಳಕಂಡ ಒಟ್ಟು ಅಂಕಗಳ ಆಧಾರದ ಮೇಲೆ ಶೇಕಡಾ 100ಕ್ಕೆ ಒಟ್ಟುಗೂಡಿಸಿ ಅರ್ಹತಾ ಪಟ್ಟಿಯನ್ನು ಸಿದ್ಧಪಡಿಸತಕ್ಕದ್ದು. ಎ) ಸಂಯೋಜಿತ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಪಡೆದಿರುವ ಅಂಕಗಳನ್ನು ಶೇಕಡಾ ಎಪ್ಪತ್ತರಷ್ಟಕ್ಕೆ ಲೆಕ್ಕಹಾಕತಕ್ಕದ್ದು. ಬಿ) ಪದವಿ ಪರೀಕ್ಷೆಯಲ್ಲಿ ಪಡೆದ ಅಂಕಗಳನ್ನು ಶೇಕಡಾ ಇಪ್ಪತ್ತರಷ್ಟಕ್ಕೆ ಲೆಕ್ಕಹಾಕತಕ್ಕದ್ದು. ಸಿ) ಬಿ.ಇಡಿ ಪರೀಕ್ಷೆಯಲ್ಲಿ ಪಡೆದ ಅಂಕಗಳನ್ನು ಶೇಕಡಾ ಹತ್ತರಷ್ಟಕ್ಕೆ ಲೆಕ್ಕಹಾಕತಕ್ಕದ್ದು.

			ಇಲ್ಲಿ ಸಂದರ್ಶನ ಇರತಕ್ಕದ್ದಲ್ಲ. ನೇಮಕಾತಿ ಸಮಿತಿಯ ತೀರ್ಮಾನವೇ ಅಂತಿಮ ನೇಮಕಾತಿ ಸಮಿತಿಯು ನಂತರ ಸೂಚನಾ ಫಲಕದಲ್ಲಿ ಅಧಿಸೂಚಿಸಿದ ಖಾಲಿ ಸ್ಥಾನಗಳ ಸಂಖ್ಯೆಗೆ ಸಮಾನವಾದ ಅಭ್ಯರ್ಥಿಗಳ ಆಯ್ಕೆ ಪಟ್ಟಿಯನ್ನು ಪ್ರಕಟಿಸತಕ್ಕದ್ದು ಮತ್ತು ಆಯ್ಕೆ ಮಾಡಲಾದ ಎಲ್ಲಾ ಅಭ್ಯರ್ಥಿಗಳಿಗೆ ಅದನ್ನು ತಿಳಿಸತಕ್ಕದ್ದು ಮತ್ತು ನೇಮಕಾತಿ ಪ್ರಾಧಿಕಾರಕ್ಕೆ ಆಯ್ಕೆ ಪಟ್ಟಿಯನ್ನು ಕಳುಹಿಸತಕ್ಕದ್ದು. ನೇಮಕಾತಿ ಪ್ರಾಧಿಕಾರವು ಅವಶ್ಯಕ ವಿವರಗಳನ್ನು ಪರಿಶೀಲಿಸಿದ ನಂತರ ಮತ್ತು ನೇಮಕಾತಿಯ ನಿಬಂಧನೆಗಳು ಮತ್ತು ಷರತ್ತುಗಳಿಗೊಳಪಟ್ಟು ನೇಮಕಾತಿ ಆದೇಶವನ್ನು ನೀಡತಕ್ಕದ್ದು. ಆಯ್ಕೆ ಮಾಡಲಾದ ಅಭ್ಯರ್ಥಿಗಳ ಅಂತರ್ ಜ್ಯೇಷ್ಠತೆಯು ಮೆರಿಟ್ ಪಟ್ಟಿಯ ಅನುಸಾರವಾಗಿರುತ್ತದೆ. ಕೇವಲ ಅಭ್ಯರ್ಥಿಗಳ ಹೆಸರನ್ನು ಆಯ್ಕೆ ಪಟ್ಟಿಯಲ್ಲಿ ಸೇರಿಸುವುದರಿಂದ ನೇಮಕಾತಿಯ ಯಾವುದೇ ಹಕ್ಕನ್ನು ನೀಡಲಾಗುವುದಿಲ್ಲ. ಕರ್ನಾಟಕ ನಾಗರೀಕ ಸೇವಾ ಅಧಿನಿಯಮ, 1978 ರ (1990 ರ ಕರ್ನಾಟಕ ಅಧಿನಿಯಮ-14) ನಿಯಮಗಳನ್ವಯ ನೇಮಕಾತಿ ಪ್ರಾಧಿಕಾರವು ಅಧಿಸೂಚಿಸಿದ ಹುದ್ದೆಗಳಿಗೆ ಶೇ 30 ರಷ್ಟು ಮೀರದಂತೆ ಹೆಚ್ಚುವರಿ ಪಟ್ಟಿಯನ್ನು ಪ್ರಕಟಿಸುವುದು. ಸಿದ್ದಪಡಿಸಿರುವ ಹೆಚ್ಚುವರಿ ಪಟ್ಟಿಯು ಅದರ ಪ್ರಕಟಣೆಯ ದಿನಾಂಕದಿಂದ ಎರಡು ವರ್ಷದ ಅವಧಿಯವರೆಗೆ ಅಥವಾ ಮುಂದಿನ ಆಯ್ಕೆಯ ಆಧಾರದ ಮೇಲೆ ಸಿದ್ದಪಡಿಸಿದ ಪಟ್ಟಿಯ ಪ್ರಕಟಣೆಯ ದಿನಾಂಕದಂದು ಅಥವಾ ಆ ದಿನಾಂಕಕ್ಕೆ ಮೊದಲು, ಇದರಲ್ಲಿ ಯಾವುದು ಮೊದಲೋ ಆ ದಿನದಿಂದ ಪ್ರವರ್ತನೆಯಲ್ಲಿರುವುದು ನಿಂತುಹೋಗತಕ್ಕದ್ದು.
21	41	ಶುಶ್ರೂಷಾಧಿಕಾರಿ	ನೇಮಕಾತಿ ಸಮಿತಿಯು ಅರ್ಹತಾದಾಯಕ ಪರೀಕ್ಷೆಯಲ್ಲಿ ಪಡೆದುಕೊಂಡಿರುವ ಅಂಕಗಳನ್ನು ಪರಿಗಣಿಸಿ ಒಂದು ಮೆರಿಟ್ ಪಟ್ಟಿಯನ್ನು ಸಿದ್ಧಪಡಿಸತಕ್ಕದ್ದು. ಕರ್ನಾಟಕ ನಾಗರೀಕ ಸೇವಾ ಅಧಿನಿಯಮ, 1978 ರ (1990 ರ ಕರ್ನಾಟಕ ಅಧಿನಿಯಮ-14) ನಿಯಮಗಳನ್ವಯ ನೇಮಕಾತಿ ಪ್ರಾಧಿಕಾರವು ಅಧಿಸೂಚಿಸಿದ ಹುದ್ದೆಗಳಿಗೆ ಶೇ 30 ರಷ್ಟು ಮೀರದಂತೆ ಹೆಚ್ಚುವರಿ ಪಟ್ಟಿಯನ್ನು ಪ್ರಕಟಿಸುವುದು. ಸಿದ್ದಪಡಿಸಿರುವ ಹೆಚ್ಚುವರಿ ಪಟ್ಟಿಯು ಅದರ ಪ್ರಕಟಣೆಯ ದಿನಾಂಕದಿಂದ ಎರಡು ವರ್ಷದ ಅವಧಿಯವರೆಗೆ ಅಥವಾ ಮುಂದಿನ ಆಯ್ಕೆಯ ಆಧಾರದ ಮೇಲೆ ಸಿದ್ದಪಡಿಸಿದ ಪಟ್ಟಿಯ ಪ್ರಕಟಣೆಯ ದಿನಾಂಕದಂದು ಅಥವಾ ಆ ದಿನಾಂಕಕ್ಕೆ ಮೊದಲು, ಇದರಲ್ಲಿ ಯಾವುದು ಮೊದಲೋ ಆ ದಿನದಿಂದ ಪ್ರವರ್ತನೆಯಲ್ಲಿರುವುದು ನಿಂತುಹೋಗತಕ್ಕದ್ದು.
22	42 & 62	ಅಡುಗೆಯವರು	ಹೊರಗುತ್ತಿಗೆ ಮೂಲಕ
23	43 & 63	ಸಹಾಯಕ ಅಡುಗೆಯವರು	ಹೊರಗುತ್ತಿಗೆ ಮೂಲಕ

24	44 & 64	ಕಸ ಗುಡಿಸುವವರು	ಹೊರಗುತ್ತಿಗೆ ಮೂಲಕ
25	45	ಗ್ರಂಥಪಾಲಕರು	ನೇಮಕಾತಿ ಸಮಿತಿಯ ಮುಖಾಂತರ ನೇರ ನೇಮಕಾತಿ ಮೂಲಕ. ಸಂಯೋಜಿತ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಪಡೆದ ಅಂಕಗಳನ್ನು ಶೇಕಡ ಎಪ್ಪತ್ತರಷ್ಟಕ್ಕೆ ಲೆಕ್ಕಹಾಕತಕ್ಕದ್ದು ಮತ್ತು ನಿಯಮಿಸಲಾದ ವಿದ್ಯಾರ್ಹತೆಯಲ್ಲಿ ಪಡೆದ ಅಂಕಗಳನ್ನು ಶೇಕಡಾ ಮೂವತ್ತರಷ್ಟಕ್ಕೆ ಲೆಕ್ಕಹಾಕತಕ್ಕದ್ದು.
26	46	ಉಗ್ರಾಣ ನಿಯಂತ್ರಕರು	ಹೊರಗುತ್ತಿಗೆ ಮೂಲಕ
27	47	ಗಣಕಯಂತ್ರ ಸಹಾಯಕ (ಕಂಪ್ಯೂಟರ್ ಅಸಿಸ್ಟೆಂಟ್)	ಹೊರಗುತ್ತಿಗೆ ಮೂಲಕ
28	48	ಪ್ರಯೋಗಾಲಯ ಸಹಾಯಕ	ನೇಮಕಾತಿ ಸಮಿತಿಯ ಮುಖಾಂತರ ನೇರ ನೇಮಕಾತಿ ಮೂಲಕ. ಸಂಯೋಜಿತ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಪಡೆದ ಅಂಕಗಳನ್ನು ಶೇಕಡ ಎಪ್ಪತ್ತರಷ್ಟಕ್ಕೆ ಲೆಕ್ಕಹಾಕತಕ್ಕದ್ದು ಮತ್ತು ನಿಯಮಿಸಲಾದ ವಿದ್ಯಾರ್ಹತೆಯಲ್ಲಿ ಪಡೆದ ಅಂಕಗಳನ್ನು ಶೇಕಡಾ ಮೂವತ್ತರಷ್ಟಕ್ಕೆ ಲೆಕ್ಕಹಾಕತಕ್ಕದ್ದು.
29	50	ಎಲೆಕ್ಟ್ರಿಕಲ್/ಪ್ಲಂಬರ್	ಹೊರಗುತ್ತಿಗೆ ಮೂಲಕ
30	52	ಮೊರಾರ್ಜಿ ದೇಸಾಯಿ ವಸತಿ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರು	ಮೊರಾರ್ಜಿ ದೇಸಾಯಿ ವಸತಿ ಪದವಿ ಪೂರ್ವ ವಿಜ್ಞಾನ ಕಾಲೇಜುಗಳ ಪ್ರಾಂಶುಪಾಲರು ಮತ್ತು ಉಪನ್ಯಾಸಕರುಗಳ ಹುದ್ದೆಗಾಗಿ ನೇರನೇಮಕಾತಿ. ಆಡಳಿತ ಪರಿಷತ್ತಿನ ಮೂಲಕ ರಚಿಸಲಾದ ನೇಮಕಾತಿ ಏಜೆನ್ಸಿಯ ಮುಖಾಂತರ ನೇರ ನೇಮಕಾತಿ.
31	53	ಕನ್ನಡ ಭಾಷಾ ಉಪನ್ಯಾಸಕರು	ನೇಮಕಾತಿ ಸಮಿತಿಯು ಈ ಕೆಳಕಂಡ ರೀತಿಯಲ್ಲಿ ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆಯ ಮುಖಾಂತರ ಪ್ರಾಂಶುಪಾಲರು ಮತ್ತು ಉಪನ್ಯಾಸಕರುಗಳನ್ನು ಹೊಸದಾಗಿ ನೌಕರಿಗೆ ಭರ್ತಿಮಾಡಲು ವ್ಯವಸ್ಥೆಗೊಳಿಸತಕ್ಕದ್ದು, ಮತ್ತು ಇಲ್ಲಿ ಸಂದರ್ಶನ (ಮೌಖಿಕ-ಪರೀಕ್ಷೆ) ಇರತಕ್ಕದ್ದಲ್ಲ. ನೇಮಕಾತಿ ಸಮಿತಿಯು ಪ್ರಾದೇಶಿಕ ಭಾಷೆಯಲ್ಲಿ ವ್ಯಾಪಕ ಪ್ರಸಾರ ವ್ಯಾಪ್ತಿ/ಪ್ರಚಾರವನ್ನು ನೀಡುವುದರ ಮೂಲಕ ಮತ್ತು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸುವುದರ ಜೊತೆಗೆ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧಿಕೃತ ಜಾಲತಾಣದಲ್ಲಿ ಮತ್ತು ಪ್ರಾಂಶುಪಾಲರುಗಳು ಮತ್ತು ಉಪನ್ಯಾಸಕರುಗಳ ಸಂಯೋಜಿತ ಸ್ಪರ್ಧಾತ್ಮಕ ಪರೀಕ್ಷೆಗಾಗಿ ನಿರ್ದಿಷ್ಟಪಡಿಸಿದ ಅರ್ಹತೆಯ ಷರತ್ತುಗಳು, ನಿಯಮಿಸಲಾದ ವಿದ್ಯಾರ್ಹತೆ ಮತ್ತು ನೇಮಕಾತಿಯ ವಿಧಾನ, ಸ್ಪರ್ಧಾತ್ಮಕ ಪರೀಕ್ಷೆಗಾಗಿ ಪ್ರಶ್ನೆ ಪತ್ರಿಕೆಗಳ ಸಂಖ್ಯೆ ಭರ್ತಿಮಾಡಬೇಕಾದ ತಾತ್ಕಾಲಿಕ ಖಾಲಿಸ್ಥಾನಗಳ ಸಂಖ್ಯೆ ಮತ್ತು
32	54	ಇಂಗ್ಲೀಷ್ ಭಾಷಾ ಉಪನ್ಯಾಸಕರು	
33	55	ಭೌತಶಾಸ್ತ್ರ ಉಪನ್ಯಾಸಕರು	
34	56	ರಸಾಯನಶಾಸ್ತ್ರ ಉಪನ್ಯಾಸಕರು	
35	57	ಗಣಿತ ಉಪನ್ಯಾಸಕರು	
36	58	ಜೀವಶಾಸ್ತ್ರ ಉಪನ್ಯಾಸಕರು	

37	59	ಗಣಕವಿಜ್ಞಾನ ಉಪನ್ಯಾಸಕರು	ಪರಿಶಿಷ್ಟ ಜಾತಿಗಳಿಗೆ, ಪರಿಶಿಷ್ಟ ಪಂಗಡಗಳಿಗೆ ಮತ್ತು ಹಿಂದುಳಿದ ವರ್ಗಗಳು ಮತ್ತು ಇತರೆ ಸಾಮಾನ್ಯ ವರ್ಗದವರಿಗೆ ಮೀಸಲಾತಿಗೆ ಸಂಬಂಧಪಟ್ಟ ಜಾರಿಯಲ್ಲಿರುವ ಆದೇಶಗಳ ಅನುಸಾರವಾಗಿ ವಿದ್ಯಾರ್ಹತೆ ಹೊಂದಿರುವ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸತಕ್ಕದ್ದು. ನೇಮಕಾತಿ ಅಧಿಸೂಚನೆಯಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗೆ ಸಂಬಂಧಿಸಿದಂತೆ ಪರೀಕ್ಷೆಯ ಪಠ್ಯಕ್ರಮ, ಪ್ರತಿಯೊಂದು ವೃಂದಕ್ಕಾಗಿ ಪ್ರಶ್ನೆ ಪತ್ರಿಕೆಗಳ ಸಂಖ್ಯೆ, ದಿನಾಂಕ, ಸಮಯ, ಪರೀಕ್ಷೆಯ ಸ್ಥಳದಂತಹ ಎಲ್ಲಾ ಅವಶ್ಯಕ ವಿವರಗಳನ್ನು ಒದಗಿಸುವುದು. ನೇಮಕಾತಿ ಸಮಿತಿಯು ಈ ಕೆಳಕಂಡ ಒಟ್ಟು ಆಧಾರದ ಮೇಲೆ ಒಟ್ಟು ಶೇ. 100ಕ್ಕೆ ಅನುಗುಣವಾಗಿ ಮೇರಿಟ್ ಪಟ್ಟಿಯನ್ನು ಸಿದ್ಧಪಡಿಸತಕ್ಕದ್ದು 1. ಸಂಯೋಜಿತ ಸ್ಪರ್ಧಾಪರೀಕ್ಷೆಯಲ್ಲಿ ಗಳಿಸಿದ ಅಂಕಗಳು 70%. 2. ಸ್ನಾತಕೋತ್ತರ ಪದವಿಯಲ್ಲಿ ಗಳಿಸಿದ ಅಂಕಗಳು 20%. 3. ಬಿ.ಇಡ್ ಪದವಿಯಲ್ಲಿ ಗಳಿಸಿದ ಅಂಕಗಳು 10%. ಗಣಕ ವಿಜ್ಞಾನ ಅಭ್ಯರ್ಥಿಯ ಮೇರಿಟ್ ಪಟ್ಟಿಯ ಸಂದರ್ಭದಲ್ಲಿ ಈ ಕೆಳಕಂಡ ಆಧಾರದ ಮೇಲೆ ನೀಡುವುದು ಎ. ಸಂಯೋಜಿತ ಸ್ಪರ್ಧಾಪರೀಕ್ಷೆಯಲ್ಲಿ ಗಳಿಸಿದ ಅಂಕಗಳು 70%. ಬಿ. ಅರ್ಹತಾ ಪದವಿ ವಿದ್ಯಾರ್ಹತೆಯಲ್ಲಿ ಗಳಿಸಿದ ಅಂಕಗಳು 30%. ಕರ್ನಾಟಕ ನಾಗರೀಕ ಸೇವಾ ಅಧಿನಿಯಮ, 1978 ರ (1990 ರ ಕರ್ನಾಟಕ ಅಧಿನಿಯಮ-14) ನಿಯಮಗಳನ್ವಯ ನೇಮಕಾತಿ ಪ್ರಾಧಿಕಾರವು ಅಧಿಸೂಚಿಸಿದ ಹುದ್ದೆಗಳಿಗೆ ಶೇ 30 ರಷ್ಟು ಮೀರದಂತೆ ಹೆಚ್ಚುವರಿ ಪಟ್ಟಿಯನ್ನು ಪ್ರಕಟಿಸುವುದು. ಸಿದ್ದಪಡಿಸಿರುವ ಹೆಚ್ಚುವರಿ ಪಟ್ಟಿಯು ಅದರ ಪ್ರಕಟಣೆಯ ದಿನಾಂಕದಿಂದ ಎರಡು ವರ್ಷದ ಅವಧಿಯವರೆಗೆ ಅಥವಾ ಮುಂದಿನ ಆಯ್ಕೆಯ ಆಧಾರದ ಮೇಲೆ ಸಿದ್ದಪಡಿಸಿದ ಪಟ್ಟಿಯ ಪ್ರಕಟಣೆಯ ದಿನಾಂಕದಂದು ಅಥವಾ ಆ ದಿನಾಂಕಕ್ಕೆ ಮೊದಲು, ಇದರಲ್ಲಿ ಯಾವುದು ಮೊದಲೋ ಆ ದಿನದಿಂದ ಪ್ರವರ್ತನೆಯಲ್ಲಿರುವುದು ನಿಂತುಹೋಗತಕ್ಕದ್ದು.
38	60	ಮೊರಾರ್ಜಿ ದೇಸಾಯಿ ವಸತಿ ಪದವಿ ಪೂರ್ವ ಕಾಲೇಜುಗಳ ವಾರ್ಡನ್	ವಸತಿ ಶಾಲೆಗಳ ನಿಲಯಪಾಲಕರ ವೃಂದದಿಂದ ಮುಂಬಡ್ತಿ ನೀಡುವ ಮೂಲಕ.

ಅನುಸೂಚಿ-III

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವಿವಿಧ ಹುದ್ದೆಗಳಿಗೆ ನೇಮಕಾತಿ ಪ್ರಾಧಿಕಾರ, ಶಿಸ್ತುಪಾಲನಾ ಪ್ರಾಧಿಕಾರ ಮತ್ತು ಮೇಲ್ಮನವಿ ಪ್ರಾಧಿಕಾರ.

ಅನುಸೂಚಿ-I ಯಲ್ಲಿರುವ ಹುದ್ದೆಯ ಕ್ರಮ ಸಂಖ್ಯೆ ಗಳು	ಅನುಸೂಚಿ-I ರಲ್ಲಿರುವಂತೆ ಹುದ್ದೆಗಳ ಪ್ರವರ್ಗ	ನೇಮಕಾತಿ ಪ್ರಾಧಿಕಾರ	ಶಿಸ್ತುಪಾಲನಾ ಪ್ರಾಧಿಕಾರ	ದಂಡಗಳು	ಮೇಲ್ಮನವಿ ಪ್ರಾಧಿಕಾರ
	ಪ್ರತಿನಿಯೋಜನೆಯ ಹುದ್ದೆಗಳು				
1	ಕಾರ್ಯನಿರ್ವಾಹಕ ನಿರ್ದೇಶಕರು	ಸರ್ಕಾರ	ಸರ್ಕಾರ	ಸರ್ಕಾರ	ಸರ್ಕಾರ
2 ರಿಂದ 13 ರವರೆಗೆ	ಸಮೂಹ 'ಎ' ಹುದ್ದೆಗಳು	ಮಾತೃ ಇಲಾಖೆ	ಕೆಆರ್‌ಇಐಎಸ್‌ನ ಉಪಾಧ್ಯಕ್ಷರು ಮತ್ತು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ	ಕೆಸಿಎಸ್ (ಸಿಸಿಎ) ನಿಯಮಗಳು, 1957ರ (8)ನೇ ನಿಯಮದ(ii) ರಿಂದ (ivಎ)	ಆಡಳಿತ ಮಂಡಳಿ
			ಕೆಆರ್‌ಇಐಎಸ್‌ನ ಉಪಾಧ್ಯಕ್ಷರು ಮತ್ತು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ	ಕೆಸಿಎಸ್ (ಸಿಸಿಎ) ನಿಯಮಗಳು, 1957ರ (8)ನೇ ನಿಯಮದ(v) ರಿಂದ (viii) ದಂಡಗಳು	ಕೆಸಿಎಸ್ (ಸಿಸಿಎ) ನಿಯಮಗಳು, 1957ರ ನಿಯಮ (16)ರ ಉಪಬಂಧಗಳನುಸಾರ ಸರ್ಕಾರ
14 ರಿಂದ 20 ರವರೆಗೆ	ಸಮೂಹ 'ಬಿ' ಮತ್ತು 'ಸಿ' ಹುದ್ದೆಗಳು	ಮಾತೃ ಇಲಾಖೆ	ಕಾರ್ಯನಿರ್ವಾಹಕ ನಿರ್ದೇಶಕರು	ಕೆಸಿಎಸ್ (ಸಿಸಿಎ) ನಿಯಮಗಳು, 1957ರ (8)ನೇ ನಿಯಮದ(ii) ರಿಂದ (viii) ರವರೆಗೆ	ಆಡಳಿತ ಮಂಡಳಿ

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಕಾರ್ಯ ಸಂಸ್ಥೆಯಲ್ಲಿರುವ ಹುದ್ದೆಗಳು					
18 & 38	ಕಛೇರಿ ಅಧೀಕ್ಷಕರು	ಕಾರ್ಯನಿರ್ವಾಹಕ ನಿರ್ದೇಶಕರು	ಕಾರ್ಯನಿರ್ವಾಹಕ ನಿರ್ದೇಶಕರು	ಕಾರ್ಯನಿರ್ವಾಹಕ ನಿರ್ದೇಶಕರು	ಕಾರ್ಯನಿರ್ವಾಹಕ ನಿರ್ದೇಶಕರು
40	ಪ್ರಥಮ ದರ್ಜೆ ಸಹಾಯಕ ಕಮ್ ಕಂಪ್ಯೂಟರ್ ಆಪರೇಟರ್				
21	ಶೀಘ್ರಲಿಪಿಗಾರರು				
22 & 61	ದ್ವಿತಿಯ ದರ್ಜೆ ಸಹಾಯಕ ಕಮ್ ಕಂಪ್ಯೂಟರ್ ಆಪರೇಟರ್				
23& 49	ಚಾಲಕರು				
24, 42, 43, 44, 45, 65, 66,67 ಮತ್ತು 68	ರಾತ್ರಿ ಕಾವಲುಗಾರರು/ ಜವಾನರು, ಅಡಿಗೆಯವರು, ಸಹಾಯಕ ಅಡಿಗೆಯವರು, ಕಸ ಗುಡಿಸುವವರು	ಕಾರ್ಯನಿರ್ವಾಹಕ ನಿರ್ದೇಶಕರು	ಕಾರ್ಯನಿರ್ವಾಹಕ ನಿರ್ದೇಶಕರು	ಕೆಸಿಎಸ್ (ಸಿಸಿಎ) ನಿಯಮಗಳು, 1957ರ (8)ನೇ ನಿಯಮದ (i) ರಿಂದ (viii) ರವರೆಗೆ	ಆಡಳಿತ ಮಂಡಳಿ
25	ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆಗಳ ಪ್ರಾಂಶುಪಾಲರು	ಕಾರ್ಯನಿರ್ವಾಹಕ ನಿರ್ದೇಶಕರು	ಕಾರ್ಯನಿರ್ವಾಹಕ ನಿರ್ದೇಶಕರು	ಕೆಸಿಎಸ್ (ಸಿಸಿಎ) ನಿಯಮಗಳು, 1957ರ (8)ನೇ ನಿಯಮದ(ii)	ಆಡಳಿತ ಮಂಡಳಿ
26	ಕೆಆರ್ಇಐಎಸ್ ವಸತಿ ಶಾಲೆಗಳ ಪ್ರಾಂಶುಪಾಲರು				
27	ಉಪ ಪ್ರಾಂಶುಪಾಲರು				
28	ಕನ್ನಡ ಭಾಷಾ ಶಿಕ್ಷಕರು				
29	ಇಂಗ್ಲೀಷ್ ಭಾಷಾ ಶಿಕ್ಷಕರು				
30	ಹಿಂದಿ ಭಾಷಾ ಶಿಕ್ಷಕರು				
31	ವಿಜ್ಞಾನ ವಿಷಯ ಶಿಕ್ಷಕರು				
32	ಗಣಿತ ವಿಷಯ ಶಿಕ್ಷಕರು				

33	ಸಮಾಜ ವಿಜ್ಞಾನ ವಿಷಯ ಶಿಕ್ಷಕರು			ರಿಂದ (viii) ರವರೆಗೆ	
34	ಕಂಪ್ಯೂಟರ್ ಶಿಕ್ಷಕರು				
35	ದೈಹಿಕ ಶಿಕ್ಷಣ ಶಿಕ್ಷಕರು				
36	ಕಲೆ ಮತ್ತು ಕರಕುಶಲ ಶಿಕ್ಷಕರು (ಡ್ರಾಯಿಂಗ್ ಮಾಸ್ಟರ್)				
37	ಸಂಗೀತ ಶಿಕ್ಷಕರು				
39	ವಾರ್ಡನ್ (ಶಾಲೆ)				
41	ಶುಶ್ರೂಷಾಧಿಕಾರಿ				
45	ಗ್ರಂಥಪಾಲಕರು				
46	ಸ್ಟೋರ್ ಕಂಟ್ರೋಲರ್				
47	ಕಂಪ್ಯೂಟರ್ ಅಸಿಸ್ಟೆಂಟ್				
48	ಪ್ರಯೋಗಾಲಯ ಸಹಾಯಕರು				
50	ಎಲೆಕ್ಟ್ರಿಕಲ್/ಪ್ಲಂಬರ್				
52	ಮೊರಾರ್ಜಿ ದೇಸಾಯಿ ವಸತಿ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರು				
53	ಕನ್ನಡ ಭಾಷಾ ಉಪನ್ಯಾಸಕರು				
54	ಇಂಗ್ಲೀಷ್ ಭಾಷಾ ಉಪನ್ಯಾಸಕರು				
55	ಭೌತಶಾಸ್ತ್ರ ಉಪನ್ಯಾಸಕರು				
56	ರಸಾಯನಶಾಸ್ತ್ರ ಉಪನ್ಯಾಸಕರು				
57	ಗಣಿತಶಾಸ್ತ್ರ ಉಪನ್ಯಾಸಕರು				

58	ಜೀವಶಾಸ್ತ್ರ ಉಪನ್ಯಾಸಕರು				
59	ಗಣಕ ವಿಜ್ಞಾನ ಉಪನ್ಯಾಸಕರು				
60	ಮೊರಾರ್ಜಿ ದೇಸಾಯಿ ವಸತಿ ಪದವಿ ಪೂರ್ವ ಕಾಲೇಜುಗಳ ವಾರ್ಡನ್				

ಅನುಸೂಚಿ-IV

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವಿವಿಧ ಹುದ್ದೆಗಳಿಗೆ ನಿರ್ಧಿಷ್ಟಪಡಿಸಿದ ಸೇವಾ ಪರೀಕ್ಷೆಗಳು

ಸಿ ಆ್ಯಂಡ್ ಆರ್ ಅನುಸೂಚಿ-I	ಅನುಸೂಚಿ-I ರಲ್ಲಿರುವಂತೆ ಹುದ್ದೆಗಳ ಪ್ರವರ್ಗ	ಸೇವಾ ಪರೀಕ್ಷೆಗಳು
18 & 38	ಕಚೇರಿ ಅಧೀಕ್ಷಕರು	1) ಅಕೌಂಟ್ಸ್ ಹೈಯರ್ 2) ಜನರಲ್ ಲಾ (ಭಾಗ-I ಮತ್ತು ಭಾಗ-II)
40	ಪ್ರಥಮ ದರ್ಜೆ ಸಹಾಯಕ ಕಮ್ ಕಂಪ್ಯೂಟರ್ ಆಪರೇಟರ್	1) ಅಕೌಂಟ್ಸ್ ಹೈಯರ್
21	ಶೀಘ್ರಲಿಪಿಗಾರರು	
22 & 61	ದ್ವಿತೀಯ ದರ್ಜೆ ಸಹಾಯಕ ಕಮ್ ಕಂಪ್ಯೂಟರ್ ಆಪರೇಟರ್	1) ಅಕೌಂಟ್ಸ್ ಲೋಯರ್
25	ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆಗಳ ಪ್ರಾಂಶುಪಾಲರು	1) ಅಕೌಂಟ್ಸ್ ಹೈಯರ್ 2) ಜನರಲ್ ಲಾ (ಭಾಗ-I ಮತ್ತು ಭಾಗ-II)
26	ಕೆಆರ್ಇಐಎಸ್ ವಸತಿ ಶಾಲೆಗಳ ಪ್ರಾಂಶುಪಾಲರು	
27	ಉಪ ಪ್ರಾಂಶುಪಾಲರು	
28	ಕನ್ನಡ ಭಾಷಾ ಶಿಕ್ಷಕರು	
29	ಇಂಗ್ಲೀಷ್ ಭಾಷಾ ಶಿಕ್ಷಕರು	
30	ಹಿಂದಿ ಭಾಷಾ ಶಿಕ್ಷಕರು	
31	ವಿಜ್ಞಾನ ವಿಷಯ ಶಿಕ್ಷಕರು	

32	ಗಣಿತ ಶಾಸ್ತ್ರದ ವಿಷಯ ಶಿಕ್ಷಕರು	ಅಕೌಂಟ್ಸ್ ಹೈಯರ್
33	ಸಮಾಜ ವಿಜ್ಞಾನ ವಿಷಯ ಶಿಕ್ಷಕರು	
34	ಗಣಕ ವಿಜ್ಞಾನ ವಿಷಯ ಶಿಕ್ಷಕರು	
35	ದೈಹಿಕ ಶಿಕ್ಷಣ ಶಿಕ್ಷಕರು	
36	ಕಲೆ ಮತ್ತು ಕರಕುಶಲ ಶಿಕ್ಷಕರು (ಡ್ರಾಯಿಂಗ್ ಮಾಸ್ಟರ್)	
37	ಸಂಗೀತ ಶಿಕ್ಷಕರು	
39	ವಾರ್ಡನ್ (ಶಾಲೆ)	
41	ಶುಶ್ರೂಷಾಧಕಾರಿ	
45	ಗ್ರಂಥಪಾಲಕರು	
48	ಪ್ರಯೋಗಾಲಯ ಸಹಾಯಕ	
52	ಮೊರಾರ್ಜಿ ದೇಸಾಯಿ ವಸತಿ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರು	1) ಅಕೌಂಟ್ಸ್ ಹೈಯರ್ 2) ಜನರಲ್ ಲಾ (ಭಾಗ-I ಮತ್ತು ಭಾಗ-II)
53	ಕನ್ನಡ ಭಾಷಾ ಶಿಕ್ಷಕರು	
54	ಇಂಗ್ಲೀಷ್ ಭಾಷಾ ಶಿಕ್ಷಕರು	
55	ಭೌತಶಾಸ್ತ್ರ ಉಪನ್ಯಾಸಕರು	
56	ರಸಾಯನಶಾಸ್ತ್ರ ಉಪನ್ಯಾಸಕರು	
57	ಗಣಿತ ಶಾಸ್ತ್ರ ಉಪನ್ಯಾಸಕರು	
58	ಜೀವ ಶಾಸ್ತ್ರ ಉಪನ್ಯಾಸಕರು	
59	ಗಣಕ ವಿಜ್ಞಾನ ಉಪನ್ಯಾಸಕರು	

60	ಮೊರಾರ್ಜಿ ದೇಸಾಯಿ ವಸತಿ ಪದವಿ ಪೂರ್ವ ಕಾಲೇಜುಗಳ ವಾರ್ಡನ್ (ನಿಲಯಪಾಲಕರು)	1. ಅಕೌಂಟ್ಸ್ ಹೈಯರ್ 2. ಜನರಲ್ ಲಾ (ಭಾಗ-I ಮತ್ತು ಭಾಗ-II)

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ

ಮತ್ತು ಅವರ ಹೆಸರಿನಲ್ಲಿ

(ಶಂಭುಲಿಂಗಯ್ಯ)
ಸರ್ಕಾರದ ಉಪಕಾರ್ಯದರ್ಶಿ-2
ಸಮಾಜ ಕಲ್ಯಾಣ ಇಲಾಖೆ.

GOVERNMENT OF KARNATAKA

No:SWD 245 MDS 2021

Karnataka Government Secretary,
Vikasa Soudha,
Bangalore, dated16-02-2022

NOTIFICATION

Whereas The draft of the following rules which the Government of Karnataka proposes to make in exercise of the powers conferred under clause (7) of rule II of the Rules and Regulations of the Association of the Karnataka Residential Educational Institutions Society, the Governing council of the Karnataka Residential Educational Institutions Society with the approval of the Government of Karnataka and in exercise of the powers conferred by sub-section (1) of section 3 read with section 8 of the Karnataka State Civil Services Act, 1978 (Karnataka Act 14 of 1990) in Notification No: SWD 245 MDS 2021, Date: 19.08.2021 in IV-A of the Karnataka Gazette extraordinary dated 24.08.2021 inviting objections and suggestions from all persons likely to be affected thereby within fifteen days from the date of its publication in the official Gazette.

And whereas the said Gazette was made available to the public on 24.08.2021. And whereas, the objections and suggestions received in respect of the said draft within the period specified above have been considered by the state Government.

Now therefore, in exercise of the powers conferred by sub-section (1) of section 3 read with section 8 of the Karnataka State Civil Services Act, 1978 (Karnataka Act 14 of 1990), the Government of Karnataka hereby makes then following rules, namely ;

		REGULATIONS
1	**Title and commencement :-**	
	1)	These regulations may be called the Karnataka Residential Educational Institutions Society (Cadre and Recruitment) Regulations(Amendment),2021
	2)	They shall come into force on the date of Registrations of these regulations under sub-section (2) of section 10 of the Karnataka societies Registrations Act, 1960(Karnataka Act 17 of 1960)
2	**Definitions:-**	
	1)	In these regulations, unless the context otherwise requires:-
	a)	" Appointing Authority" means the Executive Director of the Karnataka Residential Educational Institutions Society;
	b)	"Direct Recruitment" in relation to any category of service or post includes appointment otherwise than by promotion or deputation from any state civil service or corporate or Body;
	c)	"Employee" means employee of the Society appointed in accordance with these regulations;
	d)	"Governing Council" means the Governing council of the society formed as per bye-law of the Society;
	e)	"Officer" means the Officer of the Society;
	f)	"Other Backward Classes" mean the persons belonging to the classes or categories so notified by the Government of Karnataka;
	g)	"Promotion means the appointment from a lower post or grade of service to a higher post or grade of service in the Society;
	h)	"Recruitment Committee" means the authority appointed by the Governing Council for the purpose of making direct recruitment;

	i)	"Residential School" means the Residential School established by the Government of Karnataka from time to time for Scheduled Caste / Scheduled Tribes/Backward Classes and other Students, coming under the administrative jurisdiction of the Society;
	j)	"**Scheduled Caste**" and "Scheduled Tribes" shall have reference to the Scheduled Castes and Scheduled Tribes in the Constitution (Scheduled Castes/Scheduled Tribes) Order, 1950 made under Articles 341 and 342 of the Constitution of India;
	k)	"**Selection**" means selection in accordance with the provisions of these regulations by the Recruitment committee appointed for the purpose by Governing council;
	(1) "**Society**" means the Karnataka Residential Educational Institutions Society registered under the Karnataka Society Registration Act, 1960	
	(2) Words used but not defined in these regulations shall have meaning assigned to them in the Karnataka Society Registration Act, 1960 or as the case may be, in the rules made or deemed to have been made under the Karnataka State Civil Services Act, 1978 (Karnataka Act 14 of 1990);	
3	**Application of other rules to the employees of the Karnataka Residential Educational Institutions Society :-** The provisions of following rules, save as otherwise provided in these regulations, shall mutatis mutandis apply to the employees of the Karnataka Residential Educational Institutions Society , namely:-	
	(1)	The Karnataka Civil Services Rules except pension rules.
	(2)	The Karnataka Government Servant (Seniority) Rules 1957.
	(3)	The Karnataka Civil Services (Conduct) Rules 1960.
	(4)	The Karnataka Civil Services (General Recruitment) Rules, 1977 and Karnataka Civil Services (Probation) Rules 1977.
	(5)	The Karnataka Civil Services (Classification, control and appeal) Rules 1957 subject to modification specified in Schedule –III.
	(6)	The Karnataka Civil Services (Service and Kannada Language Examinations) Rules, 1974.
	(7)	All other rules made or deemed to have made under the Karnataka State Civil Services Act 1978 (Karnataka Act 14 of 1990) governing the conditions of the service of Government Servants.
4		**Category of Posts, Method of Recruitment and Minimum Qualification:-**The establishment of the Karnataka Residential Educational Institutions Society shall consist of the category of posts, scale of pay specified in column (2) of the Schedule:- I their number, the method of recruitment and minimum qualification shall be as specified in column (3), (4) and (5) thereof.

5	**Employees of the Karnataka Residential Educational Institutions Society to pass certain Service Examination;**	
	(1)	The employee shall pass Kannada language examination and certain other service examinations as specified in Schedule-IV within the time provided under The Karnataka Civil Services (Service and Kannada Language Examinations) Rules 1974 or within two years from the date of commencement of these regulations whichever is later;
	(2)	Employee shall be confirmed in the post held by him or shall earn an increment in the time scale of the pay only when he passes the service examinations.
	(3)	For promotion to any higher post, candidate must have passed service examinations for such higher post, in the rules.
6	**Authority to institute disciplinary proceedings and impose penalties and appeal provisions:**	
	(1)	The disciplinary proceedings against an employee of the Karnataka Residential Educational Institutions Society may be instituted by the Appointing Authority in accordance with the Karnataka Civil Service (Classification, control and Appeal) Rules 1957. The Appointing Authority, the Disciplinary Authority to impose different type of penalties and Appellate shall be as specified in schedule –III appended to these regulations.
7	**Retirement benefits:-** Employees of society are eligible for the following benefits after retirement.	
	a) Group Gratuity b) group Insurance c) New Pension Scheme d) Earned Leave Encashment Notwithstanding anything contained in these resolutions an employee of the Karnataka Residential Educational Institutions Society shall not be eligible for pension.	

SCHEDULE-I

Cadre and Recruitment Regulations in respect of each category of Post Specified in column (2) of the following Schedule

Sl No	Category of Posts		No. of Posts		Method of Recruitment	Minimum Qualification
	Post	Pay Scale (In Rs.)	Permanent	Temporary		
1	2	3	4	5	6	7
1	Executive Director	-	1	-	By Deputation of an officer in the cadre of Indian Administration Service or Karnataka Administration Service (Super time scale)	-
2	Joint Director (HRD/Admin)	(Rs.74400 -109600)	1	-	By Deputation of an officer in the cadre of Joint Director **or** equivalent cadre from the Department of Social Welfare **or** Backward Classes.	-
3	Joint Director (Education and Training)	(Rs.74400 -109600)	1	-	By Deputation of an officer in the cadre of Joint Director **or** equivalent cadre from the Department of Primary and Higher Education.	-
4	Superintendent Engineer	(Rs.74400 -109600)	1	-	By Deputation of an officer in the cadre of Superintendent Engineer or equivalent cadre from the PWD or Any other Department.	-
5	Chief Accounts Officer (CAO)	(Rs.74400 -109600)	1	-	By Deputation of an officer in the cadre of Joint Director from the State Account department.	-
6	Deputy Director (HRD/Admin)	(Rs.67550 -104600)	1	-	By Deputation of an officer in the cadre of Deputy Director **or** Officer of equivalent cadre from the Department of Social Welfare **or** Backward Classes Department.	-

7	Deputy Director (Education and Training)	(Rs.67550 -104600)	1	-	By Deputation of an officer in the cadre of Deputy Director **or** equivalent cadre from the Education Department.	-
8	Executive Engineer (Civil)	(Rs.56800 -99600)	2	-	By Deputation of an officer in the cadre of executive Engineer (Civil) from the Public Works Department or from any other Government Departments **or** Public Sector Units.	-
9	Executive Engineer (Electrical)	(Rs.56800 -99600)	1	-	By Deputation of an officer in the cadre of executive Engineer (Electrical) from the Public Works Department or from any other Government Departments **or** Public Sector Units.	-
10	Assistant Director (Administration/HRD)	(Rs.52650 -97100)	1	-	By Deputation of an officer in the cadre of Assistant Director Grade-I **or** equivalent cadre from the Department of Social Welfare **or** Backward Classes Department **or** Tribal Welfare.	-
11	Assistant Director (Education)	(Rs.52650 -97100)	1	-	By Deputation of an officer in the cadre of Assistant Director Grade-I **or** equivalent cadre from the Department of Social Welfare Backward Classes Department **or** Tribal Welfare.	-
12	Assistant Executive Engineer (Civil)	(Rs.52650 -97100)	10		By Deputation of an officer in the cadre of Assistant Executive Engineer (Civil) from the Public Works Department or Any Other Government Department **or** Public Sector units.	-
13	Assistant Executive Engineer (Electrical)	(Rs.52650 -97100)	2	-	By Deputation of an officer in the cadre of Assistant Executive Engineer (Electrical) from the Public Works Department or Any Other Department **or** Public Sector units.	-
14	Assistant Engineer (Civil)	(Rs- 43100- 83900)	10	-	By Deputation of an officer in the cadre of Assistant Engineer (Civil) from the Public Works Department or Any Other Department **or** Public Sector units.	-

15	Assistant Engineer (Electrical)	(Rs- 43100- 83900)	2	-	By Deputation of an officer in the cadre of Assistant Engineer (Electrical) from the Karnataka Power Transmission Corporation Limited or any other Government Department/Pubic Sector units.	-
16	Project Officer (Programme Officer)	(Rs.43100 -83900)	3	-	By Deputation of an officer in the cadre of Assistant Director Grade-I or equivalent cadre officer from the Department of Social Welfare/ Tribal Welfare Departments /Backward Classes/ Education Department.	-
17	Audit Officers (Auditors)	(Rs.37900 -70850)	2	-	By Deputation of an officer in equivalent cadre from State Account Department	-
